| 03 | 2019–20 | 300–ಬೆಳ್ಳಿಹಬ್ಬ | 1,23,77,861=00 |
| | | **ಒಟ್ಟು** | **15,21,45,039=00** |

ಸದರಿ ಅನುದಾನದ ಬಳಕೆಯಲ್ಲಿನ ನ್ಯೂನತೆಗಳು ಈ ಕೆಳಗಿನಂತಿರುತ್ತವೆ.

01. ಕನ್ನಡ ವಿಶ್ವವಿದ್ಯಾಲಯ ಹಂಪಿ ಬೆಳ್ಳಿಹಬ್ಬದ ಆಚರಣೆಗೆ ರೂ. 25.00 ಕೋಟಿ ಬಿಡುಗಡೆಯಾಗಿದ್ದು, ಬೆಳ್ಳಿಹಬ್ಬ ಆಚರಣೆಯಾಗಿ ಮೂರು ವರ್ಷ ಕಳೆದರೂ ಸದರಿ ಅನುದಾನದಲ್ಲಿ ಕೇವಲ ರೂ.15,21,45,039=00ಗಳಷ್ಟು ಖರ್ಚು ಭರಿಸಿರುವುದು ಕಂಡುಬಂದಿರುತ್ತದೆ. ಅಂದರೆ ಕೇವಲ 60%ರಷ್ಟು ಅನುದಾನ ಬಳಕೆಯಾಗಿರುತ್ತದೆ.

02. ಬೆಳ್ಳಿಹಬ್ಬದ ಪ್ರಯುಕ್ತ ಕೈಗೊಂಡ ಬೆಳ್ಳಿಭವನದ ಕಾಮಗಾರಿಗೆ ಸರಕಾರದಿಂದ ಒಟ್ಟು ರೂ.8.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಕರಾರು ಒಪ್ಪಂದದ ಪ್ರಕಾರ ಕಾಮಗಾರಿಯ ಅಂದಾಜು ವೆಚ್ಚ ರೂ.3.88 ಕೋಟಿಗಳು, ಸದರಿ ಕಾಮಗಾರಿಯ ಕೆಲಸದ ಆದೇಶವನ್ನು ದಿನಾಂಕ:03–07–2018 ನೀಡಿದ್ದು ದಿನಾಂಕ: 02–01–2019 ರವರೆಗೆ ಕಾಮಗಾರಿಯು ಮುಕ್ತಾಯವಾಗಬೇಕಿತ್ತು. ಆದರೆ ದಾಖಲೆಗಳ ಪ್ರಕಾರ ದಿನಾಂಕ: 05–11–2019 ರವರೆಗೆ ಕೇವಲ ರೂ.1,23,48,654=00 ಆರ್ಥಿಕ ಪ್ರಗತಿಯಾಗಿರುವುದು ಕಂಡುಬಂದಿರುತ್ತದೆ. ಅಂದರೆ ಕೇವಲ 30% ಪ್ರಗತಿ ಹೊಂದಿರುತ್ತದೆ. ಸದರಿ ಕಾಮಗಾರಿಗೆ ಸರಕಾರದಿಂದ ಪೂರ್ಣಪ್ರಮಾಣದ ಅನುದಾನ ಬಿಡುಗಡೆಯಾಗಿದ್ದರೂ ಕೂಡ ಬೆಳ್ಳಿ ಭವನ ಕಾಮಗಾರಿ ಪೂರ್ಣಗೊಳಿಸದೇ ಬಾಕಿ ಅನುದಾನವು ಬೇರೆ ಯಾವ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲಾಗಿದೆ ತಿಳಿಸುವುದು.

03. ಕುಲಸಚಿವರ ಆದೇಶ ಸಂಖ್ಯೆ:ಕವಿಹಂ:ಕುಸ:ಬೆಭಕ:2019–20/296ದಿನಾಂಕ: 05.11.2019ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ ಉನ್ನತ ಶಿಕ್ಷಣ ರವರಿಗೆ ಬರೆದ ಪತ್ರದನ್ವಯ ಬೆಳ್ಳಿ ಹಬ್ಬಕ್ಕೆ ಸರ್ಕಾರವು 2017–18ನೇ ಸಾಲಿನಲ್ಲಿ ರೂ.12.50 ಕೋಟಿಗಳನ್ನು ಮತ್ತು ಅದೇ ಆರ್ಥಿಕ ವರ್ಷದ ಪೂರಕ ಅಂದಾಜು–2ರಲ್ಲಿ ರೂ.12.50 ಕೋಟಿ ಮಾಡಿದ್ದಾಗಿಯೂ ಮತ್ತು ಈ ಅನುದಾನದಲ್ಲಿ ಬೆಳ್ಳಿಭವನ ಕಟ್ಟಡಕ್ಕೆ ರೂ.1,23,48,654/–ಗಳನ್ನು ಮಾತ್ರ

| | | | |
|---|---|---|---|
| | ಗುತ್ತಿಗೆದಾರರಿಗೆ ಪಾವತಿ ಮಾಡಲಾಗಿದೆ ಮತ್ತು ಸದರಿ ಕಟ್ಟಡ ಪೂರ್ಣಗೊಳ್ಳಲು ಅನುದಾನದ ಕೊರತೆಯಾಗಿದ್ದು, ಅಗತ್ಯವಿರುವ ಅನುದಾನ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. ಆದರೆ ತಾವೇ ತಿಳಿಸದಂತೆ, ಬೆಳ್ಳಿ ಹಬ್ಬಕ್ಕೆ ಬೇಕಾದ ರೂ.25.00 ಕೋಟಿ ಪೂರ್ಣ ಪ್ರಮಾಣ ಅನುದಾನ ಬಿಡುಗಡೆಯಾಗಿದ್ದರೂ, ಬೆಳ್ಳಿಹಬ್ಬದಲ್ಲಿನ ಉದ್ದೇಶಿತ ಕಟ್ಟಡ ಕಾಮಗಾರಿಗಳಿಗೆ ಅನುದಾನದ ಕೊರತೆ ಆಗಿರುವುದಕ್ಕೆ ಕಾರಣಗಳನ್ನು ತಿಳಿಸುವುದು.<br>04. ಅದರಂತೆ ಬೆಳ್ಳಿಹಬ್ಬದ ಪ್ರಯುಕ್ತ ಕೈಗೊಳ್ಳಬೇಕಾದ ಇನ್ನುಳಿದ ಕಾಮಗಾರಿಗಳಾದ 2) ದೇಶಿ ಅಧ್ಯಯನ ವಿಸ್ತರಣಾ ಕೇಂದ್ರ ಕುರುಬನಕಟ್ಟೆ 3) ಕನ್ನಡ ಅಧ್ಯಯನ ಕೇಂದ್ರ ಕುಪ್ಪಳ್ಳಿ 4) ಡಾ॥ ರಾಜಕುಮಾರ್ ಅಧ್ಯಯನ ವಿಸ್ತರಣಾ ಕೇಂದ್ರ, ಬೆಂಗಳೂರು, ಕೆಲಸ/ಕಾಮಗಾರಿಗಳಿಗೆ ಭರಿಸಿದ ವೆಚ್ಚದ ಬಗ್ಗೆ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಬೆಳ್ಳಿಹಬ್ಬದ ಪ್ರಯುಕ್ತ ಬೆಳ್ಳಿ ಭವನ ಮತ್ತು ಇನ್ನಿತರೆ ನಿರ್ಮಾಣ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಿ ಮೂರು ವರ್ಷಗಳಾದರೂ ಕಾಮಗಾರಿ ಕೆಲಸ ಪೂರ್ಣಗೊಳ್ಳದೇ ಇರುವುದು ಕಂಡುಬಂದಿರುತ್ತದೆ. ಇದರಿಂದ ಸರ್ಕಾರದ ಉದ್ದೇಶಿತ ಯೋಜನೆಗೆ ಬಿಡುಗಡೆಯಾದ ಹಣವನ್ನು ಬೇರೆ ಉದ್ದೇಶಗಳಿಗೆ ಉಪಯೋಗಿಸಿ ಸರ್ಕಾರದ ಅನುದಾನದ ದುರುಪಯೋಗ ಮಾಡಿದಂತಾಗಿರುತ್ತದೆ. Government order no. FD5TAR2017 Dated:30-01-2017 9(i) ರನ್ವಯ " diversion of scheme funds is strongly prohibited and the administration should deal with such actions stringently" ಎಂದು ಉಲ್ಲೇಖಿಸಿದೆ ಮತ್ತು 9(j) ರನ್ವಯ "Unspent funds and the interest amount accumulated on such funds must be dealt with as per the guidelines issued by government of Karnataka. ಎಂದು ಉಲ್ಲೇಖಿಸಿದೆ. ಬೆಳ್ಳಿಹಬ್ಬದ ಪ್ರಯುಕ್ತ ಬಿಡುಗಡೆಯಾದ ಅನುದಾನವನ್ನು ಸರಕಾರದ ಅನುಮೋದನೆ/ಪೂರ್ವಾನುಮತಿ ಪಡೆಯದೇ ಬೇರೆ ಯಾವ ಕೆಲಸಗಳಿಗೆ ಉಪಯೋಗಿಸಲಾಗಿದೆ ಎಂದು ತಿಳಿಸುವುದು.<br>ಈ ಮೇಲಿನ ಅಂಶಗಳಿಗೆ ಸೂಕ್ತ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಕೂಡಲೇ ಸಲ್ಲಿಸಲು ತಿಳಿಸಲಾಗಿದೆ ಮತ್ತು ಸದರಿ ಬೆಳ್ಳಿಹಬ್ಬದ ಅನುದಾನವನ್ನು ಬೇರೆ ಕೆಲಸಗಳಿಗೆ ಬಳಸಿಕೊಂಡಿದ್ದರೇ ಇದಕ್ಕೆ ಸರಕಾರದ ಅನುಮೋದನೆ/ಪೂರ್ವಾನುಮತಿ ಪಡೆದ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 31 ದಿನಾಂಕ:15-11-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. ಆದ್ದರಿಂದ ಬೆಳ್ಳಿಹಬ್ಬಕ್ಕೆ ಒಟ್ಟು ಅನುದಾನ ರೂ.25.00 ಕೋಟಿ ಬಿಡುಗಡೆಯಾಗಿದ್ದು, ಇದರಲ್ಲಿ ಇದುವರೆಗೂ | | |

ಬೆಳ್ಳಿಹಬ್ಬದ ಕಾರ್ಯಕ್ರಮ/ ಕಾಮಗಾರಿಗಳಿಗೆ ಬಳಕೆಯಾದ ಅನುದಾನ ರೂ.15,21,45,039/-ಗಳನ್ನು ಹೊರತುಪಡಿಸಿ ಬಳಕೆಯಾಗದೇ ಇರುವ ಅನುದಾನ ರೂ.9,78,54,961/-ಗಳಾಗಿರುತ್ತದೆ. ಸದರಿ ವಿಷಯವಾಗಿ ಹಿಂದಿನ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿಚಾರಣೆಗಳು ನೀಡಿದ್ದರೂ ಸಹ ವಿಶ್ವವಿದ್ಯಾಲಯದವರು ಯಾವುದೇ ವೆಚ್ಚದ ವಿವರ ನೀಡಿರುವುದಿಲ್ಲ. ಕಾರಣ **ರೂ.9,78,54,961/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

10

**ಮುಂಗಡ ಹಣ ಹೊಂದಾಣಿಕೆಯ ಬಗ್ಗೆ.**

**A. 2019-20ನೇ** ಸಾಲಿನಲ್ಲಿ ವಿವಿಧ ಉದ್ದೇಶಗಳಿಗೆ ಮುಂಗಡ ಹಣವನ್ನು ನೀಡಲಾಗಿದ್ದು, ಸದರಿ ಮುಂಗಡ ಹಣ ಹೊಂದಾಣಿಕೆಯಾಗದೇ ದಿನಾಂಕ: 31-03-2020ರ ಅಂತ್ಯದಲ್ಲಿ ಬಾಕಿ ಉಳಿದಿರುತ್ತದೆ. ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಖಾತೆ | ಮುಂಗಡ ನೀಡಿದ ಮೊತ್ತ | ಹೊಂದಾಣಿಕೆ ಆಗದ ಮೊತ್ತ | ಬಡ್ಡಿ ಮೊತ್ತ (4%) | ಬಾಕಿ ಉಳಿದ ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 01 | ಸಾಮಾನ್ಯ | 28,22,570 | 28,22,570 | 14,280 | 28,36,850 |
| 02 | ದೂರಶಿಕ್ಷಣ | 1,55,520 | 1,55,520 | 2,079 | 1,57,599 |
| 03 | ಪ್ರಸಾರಾಂಗ | 28,500 | 28,500 | - | 28,500 |
| 04 | ಇತರೆ | 32,43,340 | 32,43,340 | 1,097 | 32,44,437 |
| | ಒಟ್ಟು | 62,49,930 | 62,49,930 | 17,456 | 62,67,386 |

(ಅಧಿಕಾರಿ/ಸಿಬ್ಬಂದಿವಾರು ವಿವರವನ್ನು ಅನುಬಂಧ-03 (A) ರಲ್ಲಿ ನೀಡಲಾಗಿದೆ.)

**B.** 2019-20ನೇ ಸಾಲಿನಲ್ಲಿ ವಿವಿಧ ಉದ್ದೇಶಗಳಿಗೆ ಮುಂಗಡ ಹಣವನ್ನು ನೀಡಲಾಗಿದ್ದು, ಸದರಿ ಮುಂಗಡ ಹಣ ವಿಳಂಬವಾಗಿ ಹೊಂದಾಣಿಕೆಯಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ಖಾತೆ | ಮುಂಗಡ ನೀಡಿದ ಮೊತ್ತ | ಹೊಂದಾಣಿಕೆ ಯಾದ ಮೊತ್ತ | ಬಡ್ಡಿ ಮೊತ್ತ (4%) | ಬಾಕಿ ಉಳಿದ ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 01 | ಇತರೆ | 1,10,000 | 1,10,000 | 1223 | 1223 |
| 02 | ಸಾಮಾನ್ಯ | 6,76,772 | 6,76,772 | 9618 | 9618 |
| | **ಒಟ್ಟು** | **7,86,772** | **7,86,772** | **10,841** | **10,841** |

(ಅಧಿಕಾರಿ/ಸಿಬ್ಬಂದಿವಾರು ವಿವರಗಳನ್ನು ಅನುಬಂಧ-03 (B)ರಲ್ಲಿ ನೀಡಲಾಗಿದೆ.)

**ಮುಂಗಡ ಹಣ ಹೊಂದಾಣಿಕೆಯ ಬಗ್ಗೆ.**

**A. 2019-20ನೇ** ಸಾಲಿನಲ್ಲಿ ವಿವಿಧ ಉದ್ದೇಶಗಳಿಗೆ ಮುಂಗಡ ಹಣವನ್ನು ನೀಡಲಾಗಿದ್ದು, ಸದರಿ ಮುಂಗಡ ಹಣ ಪ್ರಸ್ತುತ ಪೂರ್ಣಪ್ರಮಾಣದಲ್ಲಿ ಹೊಂದಾಣಿಕೆಯಾಗಿರುತ್ತದೆ. ವಿವರ ಕೆಳಗಿನಂತಿದೆ.

| ಕ್ರ. ಸಂ. | ಖಾತೆ | ಮುಂಗಡ ನೀಡಿದ ಮೊತ್ತ | ಹೊಂದಾಣಿಕೆ ಯಾದ ಮೊತ್ತ |
|---|---|---|---|
| 01 | ಸಾಮಾನ್ಯ | 28,22,570 | 28,22,570 |
| 02 | ದೂರಶಿಕ್ಷಣ | 1,55,520 | 1,55,520 |
| 03 | ಪ್ರಸಾರಾಂಗ | 28,500 | 28,500 |
| 04 | ಇತರೆ | 32,43,340 | 32,43,340 |
| | **ಒಟ್ಟು** | **62,49,930** | **62,49,930** |

**B.** ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.

<table>
<tr>
<td></td>
<td>
ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 243ರ ಪ್ರಕಾರ ಸರಕಾರಿ ನೌಕರರು ಸ್ವೀಕರಿಸುವ ಎಲ್ಲಾ ಮುಂಗಡಗಳು ಪ್ರತಿಯೊಂದು ಪ್ರಕರಣಕ್ಕೂ ಅನ್ವಯವಾಗುವ ನಿಯಮಗಳಿಗೆ ಅನುಸಾರವಾಗಿ ಹೊಂದಾಣಿಕೆಗೆ ಒಳಪಟ್ಟಿರುತ್ತದೆ. ಮುಂಗಡ ಹಣ ಸೆಳೆದ ನಂತರ ಪ್ರತಿ ಮುಂಗಡಗಳನ್ನು ತಿಂಗಳ ಅಂತ್ಯದೊಳಗೆ ಮರು ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ ಮತ್ತು ನಿಗದಿತ ಸಮಯದೊಳಗೆ ಯಾವುದೇ ಮುಂಗಡವನ್ನು ಹೊಂದಾಣಿಕೆ ಮಾಡಲು ಸಾಧ್ಯವಿಲ್ಲದಿರುವಾಗ ಮರು ಹೊಂದಾಣಿಕೆಗೆ ನಿರ್ದಿಷ್ಟ ಸಮಯವನ್ನು ವಿಸ್ತರಿಸಲು ಸರ್ಕಾರದ ಅಥವಾ ಮುಂಗಡ ಮಂಜೂರು ಮಾಡುವ ಪ್ರಾಧಿಕಾರದಿಂದ ವಿಸ್ತರಣೆ ಮಾಡಿಕೊಳ್ಳಬೇಕಾಗಿರುತ್ತದೆ.
ಆದರೆ ಸದರಿ ಪ್ರಕರಣದಲ್ಲಿ ನೀಡಲಾದ ಮುಂಗಡ ಹಣದ ಮೊತ್ತ ರೂ.62,49,930/–ಗಳನ್ನು ಹೊಂದಾಣಿಕೆ ಮಾಡಿಕೊಳ್ಳದೇ ಇರುವುದರಿಂದ ಶೇ.4ರಷ್ಟು ಬಡ್ಡಿ ಹಣದ ಮೊತ್ತ ರೂ.17,456/– ಗಳನ್ನು ಸೇರಿಸಿ ಒಟ್ಟು ರೂ.62,67,386/–ಗಳನ್ನು ಮತ್ತು ನೀಡಲಾದ ಮುಂಗಡ ಹಣ ರೂ.7,86,772/– ಗಳಿಗೆ ಸುಮಾರು ಮೂರು ತಿಂಗಳ ಅವಧಿಯ ನಂತರ ಹೊಂದಾಣಿಕೆಯಾಗಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:22 ದಿನಾಂಕ:09–11–2021 ನೀಡಲಾಗಿದೆ. ಸದರಿ ಕಂಡಿಕೆಗೆ ಸಂಬಂಧಿಸಿದ ಮುಂಗಡ ಹಣದ ಹೊಂದಾಣಿಕೆ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಇದರಿಂದ ವಿಶ್ವವಿದ್ಯಾಲಯದ/ಸರ್ಕಾರದ ಹಣ ದುರ್ಬಳಕೆ ಮಾಡಿದಂತಾಗಿರುವುದರಿಂದ ವಿಳಂಬದ ಅವಧಿಗೆ ಶೇ.4 ರಷ್ಟು ಬಡ್ಡಿ ಹಣ ರೂ.10,841/–ಗಳನ್ನು ಹೀಗೆ ಒಟ್ಟು ರೂ.62,67,386 + ರೂ.10,841 = ರೂ.62,78,227/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.
</td>
<td></td>
<td></td>
</tr>
<tr>
<td>11</td>
<td>
2019–20ನೇ ಸಾಲಿನ ಮುದ್ದತ್ತು ಠೇವಣಿಗಳ ಹೂಡಿಕೆಯ ಬಗ್ಗೆ.
ಕನ್ನಡ ವಿಶ್ವವಿದ್ಯಾಲಯ ಹಂಪಿ, 2019–20ನೇ ಸಾಲಿನ ಮುದ್ದತ್ತು ಠೇವಣಿಗಳನ್ನು ಈ ಕೆಳಗಿನಂತೆ ಹೂಡಿಕೆ ಮಾಡಿರುತ್ತಾರೆ.
<table>
<tr><th>ಕ್ರ.ಸಂ.</th><th>ವಿವರ</th><th>ಖಾತೆಗಳ ಸಂಖ್ಯೆ</th><th>ಅವಧಿ</th><th>ಮೊತ್ತ</th></tr>
<tr><td>1</td><td>ಪೀಠಗಳು</td><td>12</td><td>36 ತಿಂಗಳು</td><td>1,45,00,000.00</td></tr>
<tr><td>2</td><td>ದತ್ತಿ ನಿಧಿಗಳು</td><td>13</td><td>36 ತಿಂಗಳು</td><td>17,15,000.00</td></tr>
<tr><td>3</td><td>ಸ್ಥಾಯಿ ನಿಧಿ</td><td>03</td><td>36 ತಿಂಗಳು</td><td>10,74,695.00</td></tr>
<tr><td>4</td><td>ಕಾನೂನು ಪುಸ್ತಕ</td><td>01</td><td>36 ತಿಂಗಳು</td><td>4,89,014.00</td></tr>
<tr><td></td><td>ಒಟ್ಟು</td><td>29</td><td>144 ತಿಂಗಳು</td><td>1,77,78,709.00</td></tr>
</table>
ಸದರಿ ಮುದ್ದತ್ತು ಠೇವಣಿಗಳ ವಿವರ <u>ಅನುಬಂಧ–4ರಲ್ಲಿ</u> ವಿವರಿಸಿದೆ.
</td>
<td>ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯದ 2019–20ನೇ ಸಾಲಿನ ಮುದ್ದತ್ತು ಠೇವಣಿಗಳನ್ನು ರಾಷ್ಟ್ರೀಕೃತ ಬ್ಯಾಂಕ್ ಆದ ಬ್ಯಾಂಕ್ ಆಫ್ ಇಂಡಿಯಾ ಕಮಲಾಪುರದಲ್ಲಿ ಹೂಡಿಕೆ ಮಾಡಲಾಗಿರುತ್ತದೆ. ಬ್ಯಾಂಕ್ ಆಫ್ ಇಂಡಿಯಾ ಕಮಲಾಪುರದವರು ಕನ್ನಡ ವಿಶ್ವವಿದ್ಯಾಲಯದ ಆವರಣಕ್ಕೆ ಬಂದು ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಕನ್ನಡ ವಿಶ್ವವಿದ್ಯಾಲಯದ ಆವರಣಕ್ಕೆ ತುಂಬಾ ಹತ್ತಿರವಿರುತ್ತದೆ. ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಂಕಿಗೆ ಬಡ್ಡಿ ಹಣ ಕೇವಲ 0.05ದಿಂದ 0.25ವರೆಗೆ ವ್ಯತ್ಯಾಸವಿರುತ್ತದೆ. ಹಾಗಾಗಿ ರಾಷ್ಟ್ರೀಕೃತ ಬ್ಯಾಂಕ್ ಆದ ಬ್ಯಾಂಕ್ ಆಫ್ ಇಂಡಿಯಾ</td>
<td></td>
</tr>
</table>

| | | | |
|---|---|---|---|
| | ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್.ಡಿ. 38 ಟಿಎಆರ್–2018 ದಿನಾಂಕ:27–08–2018 ಮತ್ತು ಎಫ್.ಡಿ.ಟಿ.ಎ.ಆರ್. 2020 ದಿನಾಂಕ:12–03–2020ರಲ್ಲಿ ಮುದ್ದತ್ತು ಠೇವಣಿಗಳನ್ನು ನಿಭಾಯಿಸುವ/ಹೊಸ ಮುದ್ದತ್ತು ಠೇವಣಿಗಳನ್ನು ಮಾಡುವ ಕುರಿತು ವಿಸ್ತೃತವಾಗಿ ವಿವರಿಸಲಾಗಿದ್ದು, ಸದರಿ ಸುತ್ತೋಲೆಯ ಕ್ರಮಸಂಖ್ಯೆ: **6V(a)**ರಲ್ಲಿ **"**All investment exceeding Rs.1.00 crore & above or as may be prescribed by Government from time to time to be invested in fixed Deposits, and FD's shall be made only obtaining competitive quotations through E-bidding on the E-Procurement portal of Government of Karnataka, without availing or using the services of intermediaries/ agent/broker etc" ಎಂದು ತಿಳಿಸಲಾಗಿದೆ.<br><br>**6V(b)**ರಲ್ಲಿ "The investments of below Rs.1.00 crore shall be invested by obtaining quotations from eligible banks through a notification in the official website of the investing entities ಎಂದು ತಿಳಿಸಲಾಗಿದೆ. ಆದರೆ ಸದರಿ ವಿಶ್ವವಿದ್ಯಾಲಯದಲ್ಲಿ 2019–20ನೇ ಸಾಲಿನಲ್ಲಿ ಒಟ್ಟು 29 ಮುದ್ದತ್ತು ಠೇವಣಿಗಳ ಒಟ್ಟು ಮೊತ್ತ ರೂ.1,77,78,709/– ಆಗಿದ್ದು, ಯಾವುದೇ ದರಪಟ್ಟಿ ಕರೆಯದೇ ನೇರವಾಗಿ Bank of Indiaದಲ್ಲಿ ಹೂಡಿಕೆ ಮಾಡಿರುವುದು ಕಂಡುಬಂದಿರುತ್ತದೆ.<br><br>ಈ ರೀತಿಯಾಗಿ ಸರಕಾರದ ಮಾರ್ಗಸೂಚಿಗಳನ್ವಯ ದರಪಟ್ಟಿ ಕರೆಯದೇ ನೇರವಾಗಿ ಒಂದೇ ಬ್ಯಾಂಕಿನಲ್ಲಿ ಹೂಡಿಕೆ ಮಾಡಿರುವುದು ವಿಶ್ವವಿದ್ಯಾಲಯಕ್ಕೆ ಬರುವ ಆದಾಯವನ್ನು ತಪ್ಪಿಸಿದಂತಾಗಿದೆ. ಒಂದು ವೇಳೆ ಸರಕಾರದ ಆದೇಶದನ್ವಯ ದರಪಟ್ಟಿ ಕರೆದು ಹೆಚ್ಚಿನ ಬಡ್ಡಿದರ ನೀಡುವ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಲಾಭ ಉಂಟಾಗುತ್ತಿತ್ತು ಮತ್ತು ಸದರಿ ಮುದ್ದತ್ತು ಠೇವಣಿಗಳ ಮೊತ್ತವು ದತ್ತಿ ಪೀಠಗಳ ಅನುದಾನವಾಗಿರುವುದರಿಂದ ಹೆಚ್ಚಿಗೆ ಆದಾಯ ಬಂದರೆ ಪೀಠಗಳ ಮತ್ತು ದತ್ತಿನಿಧಿಗಳ ಅಭಿವೃದ್ಧಿಗೆ ಅನುಕೂಲವಾಗುತ್ತಿತ್ತು. ಆದರೆ ನಿಯಮಬಾಹಿರವಾಗಿ ಮುದ್ದತ್ತು ಠೇವಣಿಗಳನ್ನು ಮಾಡಿ ಸರಕಾರದ ಆದೇಶದ ಉಲ್ಲಂಘನೆ ಮಾಡಿರುವುದು ಕಂಡುಬಂದಿರುತ್ತದೆ.<br><br>ಸದರಿ ಸುತ್ತೋಲೆಯ ಕ್ರಮ ಸಂಖ್ಯೆ 8(i) ರಲ್ಲಿ **"**The competent authority for taking all the decisions on investment of surplus funds and reporting thereof shall be the board of concerned investor entity. The board shall ensure that all investment decisions are in accordance with the govt of karnataka finance department instructions and any other relevant legislation and rules as applicable. | ಕಮಲಾಪುರದಲ್ಲಿ ಹೂಡಿಕೆ ಮಾಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | 8(ii) ರಲ್ಲಿ The Board may its discretion constitute an internal investment committee and delegate the powers regarding the inverstment of surplus funds upto one year period and short term investments The Board may also prescribe the financial limit up to which the investment committee is authorized to take the decisions on the investment ಎಂದು ತಿಳಿಸಿದೆ. ಆದರೆ ಸದರಿ ವಿಶ್ವವಿದ್ಯಾಲಯದವರು ಇಂತಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.<br>ಈ ಕುರಿತು ಲೆಕ್ಕಪರಿಶೋಧನೆಯ **ವಿಚಾರಣೆಪತ್ರ ಸಂಖ್ಯೆ:42 ದಿನಾಂಕ: 18-11-2021** ರಂದು ನೀಡಲಾಗಿದೆ. ಸದರಿ ಕಂಡಿಕೆ ಉತ್ತರ ನೀಡುತ್ತಾ ಆಡಳಿತಾಂಗದ ನಿರ್ದೇಶನದಂತೆ ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮವಹಿಸಲಾಗುವುದೆಂದು ನೀಡಿದ ಉತ್ತರ ಸಮಂಜಸವಲ್ಲದ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ. (ವಿವರವನ್ನು ಅನುಬಂಧ-4ರಲ್ಲಿ ನೀಡಲಾಗಿದೆ)**ನಿಯಮಬಾಹಿರವಾಗಿ ಹೂಡಿಕೆ ಮಾಡಿದ ಒಟ್ಟು ಮೊತ್ತ ರೂ.1,77,78,709/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **12** | **2019-20ನೇ ಸಾಲಿನಲ್ಲಿ ಶಿಷ್ಯವೇತನವನ್ನು ಸಂಪೂರ್ಣವಾಗಿ ಪಾವತಿಸದೇ ಇರುವ ಕುರಿತು.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಆಫ್ ಇಂಡಿಯಾ, ಕಮಲಾಪುರ ಶಾಖೆಯಲ್ಲಿ ಉಳಿತಾಯ ಖಾತೆ ಸಂಖ್ಯೆ:842210100009400 ಅನ್ನು ಹೊಂದಿದ್ದು, ಸದರಿ ಖಾತೆಯಲ್ಲಿ 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದನ್ವಯ ರೂ.40,74,478/-ಗಳ ಶಿಷ್ಯವೇತನ ಸ್ವೀಕೃತಗೊಂಡಿರುತ್ತದೆ. ಅದರಲ್ಲಿಯೂ ರೂ.20,90,403/-ಗಳನ್ನು ವಿದ್ಯಾರ್ಥಿಗಳ ಶಿಷ್ಯವೇತನ ಮತ್ತು ಮರುಹೊಂದಾಣಿಕೆ/ಪಾವತಿ ಮಾಡಿಕೊಂಡಿದ್ದು, ಬಾಕಿ ಉಳಿದ ಹಣ ರೂ.19,84,075/-ಗಳನ್ನು ಹಾಗೆಯೇ ಖಾತೆಯಲ್ಲಿ ಉಳಿಸಿಕೊಳ್ಳಲಾಗಿದೆ.<br>2019-20ನೇ ಸಾಲಿನ ಶಿಷ್ಯವೇತನ ಬೇಡಿಕೆ ಮೊತ್ತವನ್ನು ವಿಶ್ವವಿದ್ಯಾಲಯದಿಂದ ಸಿದ್ಧಪಡಿಸದೇ ಇರುವುದರಿಂದ ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿಶ್ವವಿದ್ಯಾಲಯಕ್ಕೆ ಬರಬೇಕಾದ ಶಿಷ್ಯವೇತನದ ಅನುದಾನ ತಿಳಿದುಬಂದಿರುವುದಿಲ್ಲ.<br>ಪ್ರಯುಕ್ತ ಬೇಡಿಕೆ ಮೊತ್ತವನ್ನು ಸಿದ್ದಪಡಿಸಿ ವಿಶ್ವವಿದ್ಯಾಲಯಕ್ಕೆ ಬರಬೇಕಾದ ಶಿಷ್ಯವೇತನ ಲೆಕ್ಕಚಾರ ಮಾಡಿ ಸಂಬಂಧಪಟ್ಟ ಇಲಾಖೆಗಳಿಂದ ಪಡೆಯುವ ಕ್ರಮ ಕೈಗೊಳ್ಳಲು ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 68 ದಿನಾಂಕ: 09-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಆಡಳಿತಾಂಗದ ನಿರ್ದೇಶನದಂತೆ ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮವಹಿಸಲಾಗುವುದೆಂದು ನೀಡಿರುವ ಉತ್ತರ ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಆದ್ದರಿಂದ ಸದರಿ ಮೊತ್ತವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ವಿತರಣೆ ಮಾಡುವವರೆಗೂ **ರೂ.19,84,075/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಖಾತೆಯಲ್ಲಿ ಬಡ್ಡಿ ಹಣ ಜಮ ಆಗಿರುತ್ತದೆ. ಮತ್ತು ಆನ್‌ಲೈನ್‌ನಲ್ಲಿ ಹಣವು ಜಮಾ ಆಗಿದ್ದು ಯಾವ ವಿದ್ಯಾರ್ಥಿ ಎಂದು ವಿವರ ಇರುವುದಿಲ್ಲ. ಸಂಬಂಧಿಸಿದ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಕ್ಲೇಮು ಮಾಡಿದಲ್ಲಿ ಪಾವತಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ | |

| | | | |
|---|---|---|---|
| 13 | **ಗುತ್ತಿಗೆ ಆಧಾರದ ಮೇಲೆ ನೌಕರರ ಸೇವೆಯನ್ನು ಪಡೆಯುತ್ತಿರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಬರುವ ವಿವಿಧ ವಿಭಾಗ/ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೌಕರರ ಸೇವೆಯನ್ನು ಪಡೆಯಲಾಗುತ್ತಿದೆ. 2019-20ನೇ ಸಾಲಿನಲ್ಲಿ ರೂ.**1,02,00,626/-** ರಷ್ಟು ಮೊತ್ತ ಪಾವತಿಸಲಾಗಿರುತ್ತದೆ. ವಿವರ **ಅನುಬಂಧ-5ರಲ್ಲಿ ಲಗತ್ತಿಸಿದೆ.** ಸದರಿ ಪಾವತಿಯ ಬಿಲ್ಲುಗಳನ್ನು ಪರಿಶೀಲಿಸಿದಾಗ ಈ ಕೆಳಗಿನ ನ್ಯೂನ್ಯತೆಗಳು ಕಂಡುಬಂದಿರುತ್ತವೆ.<br>1) ಸರ್ಕಾರದ ಆದೇಶ ಸಂಖ್ಯೆ ಆಇ 06 ಬಿಎಫ್‌ಟಿ 2018 ದಿನಾಂಕ:29-12-2018ರ ಅನ್ವಯ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ಬೆರಳಚ್ಚುಗಾರರು, ಡಿಇಓ, ವಾಹನ ಚಾಲಕರು ಮತ್ತು ಗ್ರೂಪ್ 'ಡಿ' ಸಿಬ್ಬಂದಿಗಳನ್ನು ಕೆ.ಟಿ.ಪಿ.ಪಿ. ನಿಯಮದ ಪ್ರಕಾರ ಹೊರಮೂಲ ಸಿಬ್ಬಂದಿ ಸೇವೆ ಒದಗಿಸುವ ಸಂಸ್ಥೆಯಿಂದ ಪಡೆಯಬೇಕಾಗಿರುತ್ತದೆ. ಆದರೆ ಸದರಿ ವಿಶ್ವವಿದ್ಯಾಲಯದಲ್ಲಿ ನೇರವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದು ಆಕ್ಷೇಪಿಸಿದೆ.<br>2) ಸದರಿ ಗುತ್ತಿಗೆ ಆಧಾರದ ನೌಕರರ ಸೇವೆಯನ್ನು ಪಡೆಯಬೇಕಾದರೆ ನೌಕರರ ಜೊತೆ ಯಾವುದೇ ಕರಾರು ಒಪ್ಪಂದವನ್ನು ಮಾಡಿಕೊಳ್ಳದೇ ಇರುವುದನ್ನು ಆಕ್ಷೇಪಿಸಿದೆ.<br>3) ಸದರಿ ಗುತ್ತಿಗೆ ನೌಕರರ ಸೇವೆಯನ್ನು ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಸೇವೆಯನ್ನು ಪಡೆದಿರುವ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>4) ವಿಶ್ವವಿದ್ಯಾಲಯಗಳ ಅಧಿನಿಯಮ 32(i, ii, iii)ರಲ್ಲಿ ವಿವರಿಸಿದಂತೆ ತಾತ್ಕಾಲಿಕ ಒಂದು ವರ್ಷದೊಳಗಿನ ಅವಧಿಗೆ ಸೇವೆಯನ್ನು ಪಡೆಯಬೇಕಾದಲ್ಲಿ ಸ್ಥಳೀಯ ನೇಮಕಾತಿ ಸಮಿತಿಯಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ. ಸದರಿ ಅನುಮೋದನೆ ಪಡೆಯದೇ ನೌಕರರಿಂದ ಸೇವೆಯನ್ನು ಪಡೆಯುತ್ತಿರುವುದನ್ನು ಆಕ್ಷೇಪಿಸಿದೆ.<br>5) ಸದರಿ ನೌಕರರ ವೇತನ ಬಿಲ್ಲುಗಳನ್ನು ಪರಿಶೀಲಿಸಲಾಗಿ ಕೇವಲ ವೃತ್ತಿ ತೆರಿಗೆ (PT) (ಅರ್ಹರಿದ್ದವರಿಗೆ ಮಾತ್ರ) ಕಡಿತಗೊಳಿಸುತ್ತಿದ್ದು, EPF ಹಾಗೂ ESI ಕಡಿತಗೊಳಿಸಿರುವುದಿಲ್ಲ ಇದರಿಂದಾಗಿ ಸದರಿ ನೌಕರರಿಗೆ ಸೇವಾ ಭದ್ರತೆ ಒದಗಿಸಲಾಗುತ್ತಿಲ್ಲ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ.<br>ಈ ಕುರಿತು ಲೆಕ್ಕಪರಿಶೋಧನೆಯ ವಿಚಾರಣೆ **ಪತ್ರ ಸಂಖ್ಯೆ:51 ದಿನಾಂಕ: 26-11-2021** ರಂದು ನೀಡಲಾಗಿದೆ. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಈ ಮೇಲಿನ ಎಲ್ಲಾ ಪ್ರಕರಣಕ್ಕೆ ಸ್ಪಷ್ಟವಾದ ಮಾಹಿತಿ ಮತ್ತು ದಾಖಲಾತಿಗಳನ್ನು ಒದಗಿಸುವವರೆಗೆ **ರೂ.1,02,00,626/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಕನ್ನಡ ವಿಶ್ವವಿದ್ಯಾಲಯವು ಪ್ರಾರಂಭವಾದಾಗ ಮತ್ತು ನಂತರದ ಕೆಲವು ವರ್ಷಗಳಲ್ಲಿ ಹುದ್ದೆಗಳು ಮಂಜೂರಾಗಿರುತ್ತವೆ. ಕನ್ನಡ ವಿಶ್ವವಿದ್ಯಾಲಯ ಬೆಳೆದಂತೆಲ್ಲಾ ಕಾರ್ಯಬಾಹುಳ ಹೆಚ್ಚಾಗಿರುತ್ತದೆ. ಹುದ್ದೆಗಳು ಮಂಜೂರಾತಿಗೆ ಸರ್ಕಾರವನ್ನು ಕೋರಿಕೊಂಡರು ಮಂಜೂರು ಮಾಡಿರುವುದಿಲ್ಲ. ಹಾಗಾಗಿ ಕೆಲಸದೊತ್ತಡ ಸರಿದೂಗಿಸಲು ಕಾಲಕಾಲಕ್ಕೆ ಮಾನ್ಯ ಕುಲಪತಿಗಳು ತಮಗೆ ದತ್ತವಾಗಿರುವ ಅಧಿಕಾರವನ್ನು ಬಳಸಿ ತಾತ್ಕಾಲಿಕ ನೇಮಕ ಮಾಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

<table>
<tr>
<td>14</td>
<td>
ಮಂಜೂರಾದ ಖಾಲಿ ಹುದ್ದೆಗಳಿಗೆದುರಾಗಿ ಹೆಚ್ಚಿನ ಸಂಖ್ಯೆಯ ಸಿಬ್ಬಂದಿಯ ಸೇವೆಯನ್ನು ಪಡೆದಿರುವ ಬಗ್ಗೆ.<br>
ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಸರ್ಕಾರದಿಂದ ಮಂಜೂರಾದ, ಭರ್ತಿಯಾದ ಮತ್ತು ರಿಕ್ತವಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಿದ್ದು, ಅದರ ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ.ಸಂ</th><th>ಹುದ್ದೆಯ ವಿವರ</th><th>ಮಂಜೂರಾದ ಹುದ್ದೆಗಳ ಸಂಖ್ಯೆ</th><th>ಭರ್ತಿಯಾದ ಹುದ್ದೆಗಳ ಸಂಖ್ಯೆ</th><th>ಖಾಲಿ ಇರುವ ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಬೋಧಕ</td><td>73</td><td>60</td><td>13</td></tr>
<tr><td>2</td><td>ಬೋಧಕೇತರ</td><td>234</td><td>167</td><td>67</td></tr>
<tr><td></td><td>ಒಟ್ಟು</td><td>307</td><td>227</td><td>80</td></tr>
</table>
(ಹುದ್ದೆವಾರು ವಿವರವನ್ನು ಅನುಬಂಧ–06 (A) ರಲ್ಲಿ ನೀಡಲಾಗಿದೆ)<br>
I) ಬೋಧಕ ಸಿಬ್ಬಂದಿಗಳ ಹುದ್ದೆಗಳಿಗೆದುರಾಗಿ ಪಡೆದ ಸೇವೆ ಬಗ್ಗೆ.<br>
a) ಮೇಲೆ ವಿವರಿಸಿದಂತೆ 73 ಬೋಧಕ ಸಿಬ್ಬಂದಿಗಳ ಮಂಜೂರಾದ ಹುದ್ದೆಗಳಿದ್ದು ಇದರಲ್ಲಿ 60 ಹುದ್ದೆಗಳು ಭರ್ತಿಯಾಗಿದ್ದು/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 13 ಹುದ್ದೆಗಳು ಖಾಲಿ ಇರುತ್ತವೆ. ಸದರಿ 13 ಹುದ್ದೆಗಳಿಗೆದುರಾಗಿ 20 ಅತಿಥಿ ಶಿಕ್ಷಕರನ್ನು (Guest Faculty) ಪಡೆದಿರುತ್ತಾರೆ. ಅಂದರೆ 7 ಹೆಚ್ಚಿನ ಸಂಖ್ಯೆಯ/ ಹೆಚ್ಚುವರಿ ಸಿಬ್ಬಂದಿಗಳ ಸೇವೆಯನ್ನು ಪಡೆದು ರೂ.27,72,000/–ಗಳನ್ನು ಪಾವತಿಸಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಉಂಟುಮಾಡಲಾಗಿದೆ. (ವಿವರವನ್ನು ಅನುಬಂಧ–06 (C)ರಲ್ಲಿ ನೀಡಲಾಗಿದೆ)<br>
b) ಕನ್ನಡ ವಿಶ್ವವಿದ್ಯಾಲಯ ಹಂಪಿ ಅಧೀನದಲ್ಲಿ ಬರುವ ವಿಭಾಗವಾರು ಮಂಜೂರಾದ ಹುದ್ದೆ, ಭರ್ತಿಯಾದ ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>
c) 20 ಜನ ಅತಿಥಿ ಶಿಕ್ಷಕರಿಗೆ ನಿಗದಿಪಡಿಸಲಾದ ಗೌರವಧನದ ತಃಖ್ತೆ ಅನ್ವಯ ಕೆಲವೊಂದು ಅತಿಥಿ ಶಿಕ್ಷಕರಿಗೆ ರೂ.33,000/– ರೂ.8,200/– ರೂ.15,000/– ರೂ.10,000/– ರೂ.21,000/– ರೂ.19,250/– ರೂ.13,250/– ಪ್ರತಿ ಮಾಹೆಗೆ ನಿಗದಿಪಡಿಸಿರುತ್ತಾರೆ. ಸದರಿ ನಿಗದಿಪಡಿಸಲಾದ ಗೌರವಧನಕ್ಕೆ ಸಂಬಂಧಿಸಿದಂತೆ ಆದೇಶಗಳು, ಕಾರ್ಯಕಾರಿ ಸಮಿತಿಯಲ್ಲಿ/ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಹಾಗೂ ಅನುಮತಿ ಪಡೆದ ದಾಖಲೆಗಳ ವಿವರ ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.
</td>
<td>
1. ಕನ್ನಡ ವಿಶ್ವವಿದ್ಯಾಲಯದ ಸಂಶೋದನೆ ಮತ್ತು ಶೈಕ್ಷಣಿಕ ಚಟುವಟಿಕೆಗಳ ನಿರಂತರ ಕಾರ್ಯ ನಿರ್ವಹಣೆಗಾಗಿ ಹಾಗೂ ಅಗತ್ಯತೆಗನುಗುಣವಾಗಿ ಕಾಲಕಾಲಕ್ಕೆ ಕನ್ನಡ ವಿಶ್ವವಿದ್ಯಾಲಯದಿಂದ ಅಧ್ಯಾಪಕರ ತಾತ್ಕಾಲಿಕ ನೇಮಕಾತಿಗಳನ್ನು ಮಾಡಿಕೊಳ್ಳಲಾಗಿದೆ.<br>
2. ಕನ್ನಡ ವಿಶ್ವವಿದ್ಯಾಲಯದ ಆರಂಭದಿಂದಲೂ ಸಂಶೊಧನೆಗೆ ಪೂರಕವಾಗಿ ಆಡಳಿತ ಕೆಲಸಗಳಿಗಾಗಿ ಸೀಮಿತವಾದ ಕಾರ್ಯ ನಿರ್ವಹಣೆಗೆ ಅಧಿನಿಯಮದ ರೀತ್ಯ ಮಾನ್ಯ ಕುಲಪತಿಗಳ ಪ್ರದತ್ತವಾದ ಅಧಿಕಾರದನ್ವಯ ಅಗತ್ಯವಿದ್ದ ಸಿ ಮತ್ತು ಡಿ ದರ್ಜೆಯ ತಾತ್ಕಾಲಿಕ ಸಿಬ್ಬಂದಿಗಳನ್ನು ಸೇವೆಗೆ ನಿಯೋಜಿಸಿಕೊಳ್ಳಲಾಗಿದೆ.<br>
ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.
</td>
<td></td>
</tr>
</table>

| | | | |
|---|---|---|---|
| | II) **ಬೋಧಕೇತರ ಹುದ್ದೆಗಳಿಗೆದುರಾಗಿ ಪಡೆದ ಸೇವೆ ಬಗ್ಗೆ.**<br>a) ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಒಟ್ಟು 73 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳು ಮಂಜೂರಾಗಿರುತ್ತದೆ. ಇದರಲ್ಲಿ 57 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 16 ಹುದ್ದೆಗಳು ಖಾಲಿ ಇರುತ್ತವೆ. ಸದರಿ ಮಂಜೂರಾದ ಖಾಲಿ ಹುದ್ದೆಗಳಿಗೆದುರಾಗಿ 16 ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಬದಲಾಗಿ 71 ಸಿಬ್ಬಂದಿಗಳನ್ನು ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಅಂದರೆ ಸುಮಾರು 55 ಹೆಚ್ಚಿನ ಸಂಖ್ಯೆಯ ಸಿಬ್ಬಂದಿಗಳನ್ನು ನೇಮಿಸಿಕೊಂಡು ರೂ.77,64,168/–ಗಳನ್ನು ಪಾವತಿಸಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಉಂಟುಮಾಡಿರುತ್ತಾರೆ. ವಿವರ **ಅನುಬಂಧ–06 (A)** ರಲ್ಲಿ ಲಗತ್ತಿಸಿದೆ.<br>b) ಮಂಜೂರಾತಿ ಹುದ್ದೆಗಳು ಇಲ್ಲದಿದ್ದರೂ ಸಹ ಹೆಚ್ಚುವರಿಯಾಗಿ 9 ಸಿಬ್ಬಂದಿಗಳ ಸೇವೆಯನ್ನು ಹೊರ ಮೂಲ ಸಂಸ್ಥೆಯಿಂದ ಪಡೆದು ರೂ. 17,10,708/–ಗಳನ್ನು ಪಾವತಿಸಿರುತ್ತಾರೆ. ವಿವರ **ಅನುಬಂಧ–06 (B)** ರಲ್ಲಿ ಲಗತ್ತಿಸಿದೆ.<br>**c)** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಆಇ6ಟಿಎಫ್‌ಪಿ 2018 ದಿನಾಂಕ: 22–03–2019 ರನ್ವಯ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ಗ್ರೂಪ್ 'ಡಿ' ಬೆರಳಚ್ಚುಗಾರರು/ಡಾಟಾ ಎಂಟ್ರಿ ಆಪ್‌ರೇಟರ್ ಮತ್ತು ವಾಹನ ಚಾಲಕರ ಸೇವೆಯನ್ನು ಮಾತ್ರ ಹೊರಗುತ್ತಿಗೆ ಮೇಲೆ ಪಡೆಯಬಹುದಾಗಿರುತ್ತದೆ. ಆದರೆ ದ್ವಿತೀಯ ದರ್ಜೆ ಸಹಾಯಕರು/ ಕಿರಿಯ ಸಹಾಯಕರು, ಪ್ರೋಗ್ರಾಂ ಕೋಆರ್ಡಿನೇಟರ್, ತಬಲಾವಾದಕರು, ಹಾರ್ಮೋನಿಯಂ ವಾದಕರು & ವೈದ್ಯಾಧಿಕಾರಿಗಳು ಈ ರೀತಿ ವಿವಿಧ ಹುದ್ದೆಗಳನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡಿರುವುದು ನಿಯಮಬಾಹಿರವಾಗಿರುತ್ತದೆ. ಈ ಕುರಿತು ಸರ್ಕಾರದಿಂದ ವಿಶೇಷ ಅನುಮತಿ ಪಡೆದಿದ್ದರೆ ಅದನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ.<br>ಈ ರೀತಿಯಾಗಿ **ಅನುಬಂಧ–6(C)**ರಲ್ಲಿ ವಿವರಿಸಿದಂತೆ ಮಂಜೂರಾದ ಖಾಲಿ ಬೋಧಕ ಹುದ್ದೆಗಳಿಗಿಂತ ಹೆಚ್ಚಿನ ಸಂಖ್ಯೆ ಸಿಬ್ಬಂದಿಗಳ ಸೇವೆ ಪಡೆದಿದ್ದು **ಅನುಬಂಧ–6(A)**ರಲ್ಲಿ ವಿವರಿಸಿದಂತೆ ಮಂಜೂರಾದ ಖಾಲಿ 'ಸಿ' ಮತ್ತು 'ಡಿ' ಹುದ್ದೆಗಳಿಗಿಂತ ಹೆಚ್ಚಿನ ಸಂಖ್ಯೆ ಸಿಬ್ಬಂದಿಗಳ ಸೇವೆಯನ್ನು ಪಡೆದಿರುತ್ತಾರೆ.**ಅನುಬಂಧ–6(B)**ರಲ್ಲಿ ವಿವರಿಸಿದಂತೆ ಮಂಜೂರಾದ ಹುದ್ದೆಗಳು ಇಲ್ಲದಿದ್ದರೂ ತಾತ್ಕಾಲಿಕ ಸಿಬ್ಬಂದಿಗಳನ್ನು ಪಡೆದಿರುತ್ತಾರೆ ಮತ್ತು ಹೊರಮೂಲದಿಂದ ಸೇವೆ ಪಡೆಯಲು ಬಾರದ ಹುದ್ದೆಗಳಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಂದ ಸೇವೆ ಪಡೆದು ಪಾವತಿಸಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಉಂಟುಮಾಡಲಾಗಿದೆ. ಈ ರೀತಿಯ ನಿಯಮಬಾಹಿರವಾಗಿ ನೇಮಕಾತಿ ಮಾಡಿಕೊಂಡಿರುವವರ ವಿರುದ್ಧ | | |

| | | | |
|---|---|---|---|
| | ಶಿಸ್ತುಕ್ರಮ ಜರುಗಿಸುವುದು ಮತ್ತು ಸಂಬಂಧಿಸಿದವರಿಂದ ಪಾವತಿಯಾದ ಮೊತ್ತ ವಸೂಲಿಸಲು ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 81 ದಿನಾಂಕ: 24-12-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಅಲ್ಲಿಯವರೆಗೆ ರೂ.77,64,168+17,10,708+27,72,000= **ಒಟ್ಟಾರೆ ರೂ.1,22,46,876/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | | |
| **15** | **RUSA ಯೋಜನೆಯಡಿಯಲ್ಲಿ ಟೆಂಡರ್ ಕರೆಯದೇ ಸಾಮಗ್ರಿಗಳನ್ನು ಖರೀದಿಸಿರುವ ಬಗ್ಗೆ.**<br>ಉಲ್ಲೇಖ: 1. No.KSHEC/167/RUSA/2016-17/140 Date:20/02/2018<br>2. No.KSHEC/RUSA/Fund/2015-16Date:23/03/201<br>3. No.KSHEC/167/RUSA/2016-17 Date:09/10/2019<br>2019-20ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯ ಹಂಪಿ ಲೆಕ್ಕಪರಿಶೋಧನೆಯಲ್ಲಿ ಇಲ್ಲಿಯವರೆಗೆ ಮೇಲಿನ ಉಲ್ಲೇಖದನ್ವಯ ಒಟ್ಟು 2,000 ಲಕ್ಷಗಳ ಅನುದಾನವು ಸರಕಾರದಿಂದ ಬಿಡುಗಡೆಯಾಗಿರುವುದು ಕಂಡುಬಂದಿರುತ್ತದೆ. 2019-20ನೇ ಸಾಲಿನಲ್ಲಿ RUSA ಅನುದಾನದ ಪಾವತಿಯಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿದ್ದು, ವಿವರ ಈ ಕೆಳಗಿನಂತಿವೆ.<br>01. 2019-20ನೇ ಆರ್ಥಿಕ ವರ್ಷದಲ್ಲಿ ರೂಸಾ ಅನುದಾನವು ದಿನಾಂಕ 09/10/2019 ರಂದು 5.00ಕೋಟಿ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ. ಮುಂದುವರೆದು ಸದರಿ ಅನುದಾನ ಬಿಡುಗಡೆ ಆದೇಶ ಪ್ರತಿಯಲ್ಲಿ ಕೆಲವು ಷರತ್ತುಗಳನ್ನು ಒಳಗೊಂಡಿದ್ದು, ಸದರಿ ಆದೇಶದ ಷರತ್ತುಗೊಳಪಟ್ಟು ಖರ್ಚು ಭರಿಸಬೇಕಾಗಿರುತ್ತದೆ.<br>ಆದರೆ ಸದರಿ ವಿಶ್ವವಿದ್ಯಾಲಯದಲ್ಲಿ RUSA ಅನುದಾನವು ಯೋಜನೆಯ ಸದುದ್ದೇಶಕ್ಕೆ ಬಳಸದೇ ರೂಸಾ ಯೋಜನೆಗೆ ಸಂಬಂಧವಲ್ಲದ ಕೆಲಸಗಳಿಗೂ ಅನುದಾನವನ್ನು ಬಳಸಿಕೊಂಡು, ಸದರಿ ಖರೀದಿಯೂ ಕೂಡಾ ಯಾವುದೇ KTPP ನಿಯಮಗಳನ್ನು ಪಾಲನೆ ಮಾಡದೇ ಪಾವತಿಸಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. **ಅನುಬಂಧ-07ರಲ್ಲಿ** ವಿವರಿಸಿದಂತೆ Sl.No.B-1-12 ನಲ್ಲಿ ತಿಳಿಸಿರುವ Glass door almera ಖರೀದಿಯು ಒಂದೇ ದಿನಾಂಕದಂದು ಒಂದೇ ಏಜೆನ್ಸಿಯವರಿಂದ ಟೆಂಡರ್ ಕರೆಯದೇ ನೇರವಾಗಿ ಖರೀದಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿದೆ. RUSA ಯೋಜನೆಯ ಉದ್ದೇಶಗಳಿಗೆ ವಿರುದ್ಧವಾಗಿ ಬೇರೆ ಬೇರೆ ಕೆಲಸಗಳಿಗೆ ಯೋಜನೆಯ ಅನುದಾನವನ್ನು ನಿಯಮಬಾಹಿರವಾಗಿ ಬಳಕೆ ಮಾಡಿರುವುದಕ್ಕೆ ಸೂಕ್ತ ಕಾರಣವನ್ನು ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಿದೆ. | ಅನುಬಂಧ-07 ರ ಬಿ.ದಲ್ಲಿ ನಮೂದಿಸಿರುವ ಮೊತ್ತ ರೂ. 11,20,100/- ಮೊತ್ತವನ್ನು ವಿವಿಧ ವಿಭಾಗಗಳ ಅಧಿಕಾರಿಗಳ /ಮುಖ್ಯಸ್ಥರ ಬಳಕೆಗಾಗಿ ಬೇಡಿಕೆಯ ಅನುಸಾರ ಗ್ಲಾಸ್ ಡೋರ್ ಅಲ್ಮೆರಾಗಳನ್ನು ಕೇಂದ್ರೀಯ ಖರೀದಿ ಘಟಕದಿಂದ ಖರೀದಿಸಲಾಗಿದೆ. ವಿಶ್ವವಿದ್ಯಾಲಯಕ್ಕೆ ಯು.ಜಿ.ಸಿ.ಯಿಂದ ನ್ಯಾಕ್ ಸಮಿತಿಯು ಭೇಟಿ ನೀಡುವ ಸಂದರ್ಭದಲ್ಲಿ ಟೆಂಡರ್ ಕರೆದು ನಿರ್ವಹಿಸಲು ಸಮಯದ ಅಭಾವದ ಹಿನ್ನೆಲೆಯಲ್ಲಿ ಸಾಧ್ಯವಾಗಿರುವುದಿಲ್ಲ. ಈ ಸಂಬಂಧ ಕೆಲಸಗಳು ತುರ್ತಾಗಿ ಇರುವುದರಿಂದ ಟೆಂಡರ್ ಕರೆಯದೇ ಅಧಿಕಾರಿಗಳ/ ಮುಖ್ಯಸ್ಥರ ಬೇಡಿಕೆಯ ಅನುಸಾರ ಖರಿದಿಸಲಾಗಿದೆ. ಮೇಲಿನ ಖರೀದಿಯು ಅಗತ್ಯಕ್ಕೆ ತಕ್ಕಂತೆ ಹಾಗೂ ಅವಶ್ಯಕತೆಗನುಗುಣವಾಗಿ ಖರೀದಿಸಲಾಗಿದೆ. ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. | |

| | | | |
|---|---|---|---|
| | ಇದು ಸರಕಾರದ ಯೋಜನೆಯ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆಯೆಂದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.<br>ಮುಂದುವರೆದು ವಿಶ್ವವಿದ್ಯಾಲಯಗಳ RUSA ಅನುದಾನವು ಭಾರತ ಸರ್ಕಾರ, ಕರ್ನಾಟಕ ಸರ್ಕಾರ, MHRD, Department of Higher Education and National Mission Directorate RUSA ರವರು ಅನುಮೋದಿಸಿದ ಹಣಕಾಸು ಮತ್ತು ಭೌತಿಕ ಮಾನದಂಡಗಳಿಗೆ ಅನುಗುಣವಾಗಿ ರೂಸಾ ಯೋಜನೆಯನ್ನು ಕಟ್ಟುನಿಟ್ಟಾಗಿ ನಿಭಾಯಿಸಬೇಕಾಗಿರುತ್ತದೆ.<br>02. ಚಾಲ್ತಿಯಲ್ಲಿರುವ ಎಲ್ಲಾ ಕರ್ನಾಟಕ ಸರ್ಕಾರದ ಆರ್ಥಿಕ ನಿಯಮಗಳು, KTPP ನಿಯಮಗಳು ಮತ್ತು ನಿಬಂಧನೆಗಳನ್ನು ಪಾಲಿಸಬೇಕಾಗಿರುತ್ತದೆ ಮತ್ತು ಸದರಿ ಯೋಜನೆಯಲ್ಲಿ ಮಾನ್ಯ ಮಾಡಲಾದ ಕಾರ್ಯಗಳಿಗೆ ಮಾತ್ರ ಅನುದಾನದ ಸಮರ್ಪಕ ಬಳಕೆ ಮಾಡಬೇಕಾಗಿರುತ್ತದೆ. RUSA ಖಾತೆಗಳನ್ನು PFMS Software ಮುಖಾಂತರ Maping ಮಾಡಿ ಎಲ್ಲಾ ಪಾವತಿಗಳು ಕಡ್ಡಾಯವಾಗಿ PFMS ಮುಖಾಂತರ ಕೈಗೊಳ್ಳಬೇಕಾಗಿರುತ್ತದೆ.<br>03. ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 4(ಇ) ಕಲಂ 5ರ ಪ್ರಕಾರ ರೂ.1 ಲಕ್ಷಕ್ಕಿಂತ ಮೇಲ್ಪಟ್ಟ ಸಾಮಗ್ರಿ ಖರೀದಿಗೆ ಕಡ್ಡಾಯವಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಖರೀದಿಸಬೇಕಾಗಿರುತ್ತದೆ. ಆದರೆ ತಾವು ದರಪಟ್ಟಿ ಆಧಾರದ ಮೇಲೆ ಸಾಮಗ್ರಿಗಳನ್ನು ಖರೀದಿ ಮಾಡಿರುವುದು ನಿಯಮ ಉಲ್ಲಂಘನೆಯಾಗಿರುತ್ತದೆ.<br>ಮುಂದುವರೆದು, ಸರಕಾರದ ಮಾರ್ಗಸೂಚಿಗಳು, ಆದೇಶದ ನಿಯಮಗಳು ಮತ್ತು KTPP ನಿಯಮಗಳನ್ವಯ ಸರಕಾರದ ಯೋಜನೆಗಳ ಅನುದಾನ ಸಮರ್ಪಕ ಬಳಕೆಮಾಡಿಕೊಂಡರೆ ಸರ್ಕಾರದ ಯೋಜನೆಯ ಆಶಯ ಈಡೇರುತ್ತದೆ ಮತ್ತು ಸರಕಾರದ ಆರ್ಥಿಕ ನಷ್ಟವನ್ನು ತಡೆದಂತಾಗುತ್ತದೆ. ಈ ಮೇಲೆ ತಿಳಿಸಿದ ನಿಯಮಗಳನ್ನು ಪಾಲನೆ ಮಾಡದೇ ಯೋಜನೆಯ ಉದ್ದೇಶವಲ್ಲದ ಕೆಲಸಗಳಿಗೆ ಖರ್ಚು ಭರಿಸಿ ಪಾವತಿ ಮಾಡಿರುವುದು ಮತ್ತು ಟೆಂಡರ್ ತಪ್ಪಿಸುವ ಉದ್ದೇಶದಿಂದ ಬಿಲ್ಲುಗಳನ್ನು ವಿಭಜನೆ ಮಾಡಿ ಖರೀದಿಸಿ ಪಾವತಿ ಮಾಡಿರುವುದಕ್ಕೆ ಸೂಕ್ತವಾದ ವಿವರಣೆಯನ್ನು ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:15 ದಿನಾಂಕ: 01-10-2021** ನೀಡಲಾಗಿದೆ. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಯುಜಿಸಿ ನ್ಯಾಕ್ ಸಮಿತಿಯ ಭೇಟಿ ನೀಡುವ ಸಂದರ್ಭದಲ್ಲಿ ಟೆಂಡರ್ ಕರೆಯುವುದು. ಸಮಯದ ಅಭಾವದ ಹಿನ್ನೆಲೆಯಲ್ಲಿ ನೇರವಾಗಿ ಖರೀದಿಸಿರುವುದಾಗಿ ತಿಳಿಸಿದ್ದರಿಂದ ಉತ್ತರವು ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಅಲ್ಲಿಯವರೆಗೆ ನಿಯಮಬಾಹಿರವಾಗಿ ಪಾವತಿಯಾದ **ಮೊತ್ತ ರೂ**22,36,518/**-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |

| | | | |
|---|---|---|---|
| **16** | **ಸ್ಟೇಷನರಿ ಸಾಮಗ್ರಿಗಳನ್ನು ಟೆಂಡರ್ ಕರೆಯದೇ ನೇರವಾಗಿ ಖರೀದಿಸಿರುವ ಬಗ್ಗೆ.**<br>2019–20ನೇ ಸಾಲಿನ ವೋಚರಗಳನ್ನು ಪರೀಶಿಲಿಸಿದಾಗ ವಿಶ್ವವಿದ್ಯಾಲಯದ ಆವರಣದಲ್ಲಿರುವ ಮೆ॥ ಶ್ರೀ ಬುಕ್ಸ್ & ಸ್ಟೇಷನರಿ ಇವರಿಂದ ರೂ.**10,28,869**/–ಗಳ ಸ್ಟೇಷನರಿ ಸಾಮಗ್ರಿಗಳನ್ನು ಖರೀದಿಸಿದ್ದು, ಬಿಲ್ಲುವಾರು ಪಾವತಿಯ ವಿವರವನ್ನು **ಅನುಬಂಧ–08ರಲ್ಲಿ** ನೀಡಲಾಗಿದೆ.<br>ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನ್ಯತೆಗಳು ಈ ಕೆಳಗಿನಂತಿವೆ.<br>01. ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 4 (ಇ) ಕಲಂ (5) ರ ಅನ್ವಯ ರೂ.1 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಮಗ್ರಿಗಳನ್ನು ಖರೀದಿಸಬೇಕಾದಲ್ಲಿ ಕಡ್ಡಾಯವಾಗಿ ಟೆಂಡರ್ ಕರೆಯುವುದರ ಮೂಲಕ ಖರೀದಿಸಬೇಕಾಗಿರುತ್ತದೆ.<br>ಆದರೆ ಸದರಿ ಪ್ರಕರಣಗಳಲ್ಲಿ (ಅನುಬಂಧ–08ದಲ್ಲಿ ವಿವರಿಸಿದಂತೆ) ಟೆಂಡರ್ ಕರೆಯದೇ ಸ್ಟೇಷನರಿ ಸಾಮಗ್ರಿಗಳನ್ನು ನೇರವಾಗಿ ಮೆ॥ ಶ್ರೀ ಬುಕ್ಸ್ & ಸ್ಟೇಷನರಿ ಇವರಿಂದ ಖರೀದಿ ಮಾಡಿ ಸದರಿ ಕೆ.ಟಿ.ಪಿ.ಪಿ.ನಿಯಮದ ಉಲ್ಲಂಘನೆ ಮಾಡಲಾಗಿದೆ.<br>02. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಅಧಿಸೂಚನೆ ಪತ್ರ ಸಂಖ್ಯೆ:1)ಕುಸ.ಕೆವ.ಖ.ಘ.ಸ.ಸ.:2018–19/85ದಿನಾಂಕ27–11–2017. 2) ಕವಿಹಂ: ಕಸಕೆವ. ಖ.ಘ.ಸ.ಸ:2019–20/294 ದಿನಾಂಕ 17–02–2020 ರನ್ವಯ ಕನ್ನಡ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಗತ್ಯ ಬಳಕೆ ಮತ್ತು ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಸಾಮಗ್ರಿಗಳನ್ನು ಖರೀದಿಸಲು ಕೇಂದ್ರಿಯ ಘಟಕ ಸಮಿತಿಯನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ.<br>ಅಂದರೆ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಆವರಣದಲ್ಲಿರುವ (Campus) ಎಲ್ಲಾ ವಿಭಾಗಗಳು ಮತ್ತು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಇತರೆ ಸ್ಥಳಗಳಲ್ಲಿರುವ ವಿವಿಧ ವಿಭಾಗಗಳಲ್ಲಿ ಯಾವುದೇ ಸಾಮಗ್ರಿಗಳನ್ನು ಖರೀದಿಸಬೇಕಾದಲ್ಲಿ ಕೇಂದ್ರಿಯ ಖರೀದಿ ಘಟಕದ ಸಮಿತಿಯಿಂದ ಅನುಮೋದನೆಯನ್ನು ಪಡೆದು ಹಾಗೂ ಕೇಂದ್ರೀಯ ಖರೀದಿ ಘಟಕದಿಂದಲೇ ಖರೀದಿ ಪ್ರಕ್ರಿಯೆಯನ್ನು ಕೈಗೊಂಡು ಸಾಮಗ್ರಿಗಳನ್ನು ಖರೀದಿಸಬೇಕಾಗಿರುತ್ತದೆ.<br>ಆದರೆ ಸದರಿ ಪ್ರಕರಣಗಳಲ್ಲಿ ಕೇಂದ್ರೀಯ ಖರೀದಿ ಘಟಕದಿಂದ ಅನುಮೋದನೆಯನ್ನು ಪಡೆಯದೇ ಮತ್ತು ಕೇಂದ್ರೀಯ ಖರೀದಿ ಘಟಕದಿಂದ ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳದೇ ನೇರವಾಗಿ ಆಯಾ ವಿಭಾಗದ ಮುಖ್ಯಸ್ಥರು ಸ್ಟೇಷನರಿ ಸಾಮಗ್ರಿಗಳನ್ನು ಖರೀದಿಸಿರುತ್ತಾರೆ. ಇದರಿಂದ ವಿಶ್ವವಿದ್ಯಾಲಯದವರು ರೂಪಿಸಿರುವ ನಿಯಮಗಳನ್ನು ತಾವೇ ಉಲ್ಲಂಘಿಸಿರುತ್ತಾರೆ. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 33 ದಿನಾಂಕ: 15-11-2021** ರಂದು ನೀಡಲಾಗಿದೆ.ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಪಾವತಿಯಾದ ಒಟ್ಟು ಮೊತ್ತ **ರೂ.10,28,869/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **17** | **ಟೆಂಡರ್ ತಪ್ಪಿಸುವ ಉದ್ದೇಶದಿಂದ ನೇರವಾಗಿ ಪ್ರಾಯೋಗಿಕ ಲೇಖನ ಸಾಮಾಗ್ರಿಗಳನ್ನು ಖರೀದಿಸಿರುವ ಕುರಿತು.**<br>2019-20ನೇ ಸಾಲಿನ ವೋಚರ್‌ಗಳನ್ನು (ಚಿತ್ರಕಲಾ ವಿಭಾಗ) ಪರಿಶೀಲಿಸಿದಾಗ, ಸದರಿ ವಿಭಾಗದಲ್ಲಿ ಬರುವ ವಿವಿಧ ಪರೀಕ್ಷಾ ಘಟಕ ಕೇಂದ್ರಗಳಿಗೆ ಶ್ರೀ ರೇಣುಕಾ ಫ್ಯಾನ್ಸಿ ಸ್ಟೋರ್ಸ್, ಹುಬ್ಬಳ್ಳಿ ಇವರಿಂದ ರೂ.7,54,666/-ಗಳ ಪ್ರಾಯೋಗಿಕ ಲೇಖನ ಸಾಮಾಗ್ರಿಗಳನ್ನು ಖರೀದಿಸಿದ್ದು, ಬಿಲ್ಲುವಾರು ಪಾವತಿಯ ವಿವರವನ್ನು **ಅನುಬಂಧ-09ರಲ್ಲಿ** ನೀಡಲಾಗಿದೆ.<br>**ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನ್ಯತೆಗಳು ಈ ಕೆಳಗಿನಂತಿವೆ.**<br>**01**. ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 4 (ಇ) ಕಲಂ(5)ರ ಅನ್ವಯ ರೂ. 1 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಮಗ್ರಿಗಳನ್ನು ಖರೀದಿಸಬೇಕಾದಲ್ಲಿ ಕಡ್ಡಾಯವಾಗಿ ಟೆಂಡರ್ ಕರೆಯುವುದರ ಮೂಲಕ ಖರೀದಿಸಬೇಕಾಗಿರುತ್ತದೆ.<br>ಆದರೆ ಸದರಿ ಪ್ರಕರಣಗಳಲ್ಲಿ (**ಅನುಬಂಧ-09ರಲ್ಲಿ** ವಿವರಿಸಿದಂತೆ) ಟೆಂಡರ್ ಕರೆಯದೇ ಪ್ರಾಯೋಗಿಕ ಲೇಖನ ಸಾಮಾಗ್ರಿಗಳನ್ನು ನೇರವಾಗಿ ಶ್ರೀ ರೇಣುಕಾ ಫ್ಯಾನ್ಸಿ ಸ್ಟೋರ್ಸ್‌ರವರಿಂದ ಖರೀದಿ ಮಾಡಿ ಸದರಿ ಕೆ.ಟಿ.ಪಿ.ಪಿ. ನಿಯಮ ಉಲ್ಲಂಘನೆ ಮಾಡಲಾಗಿದೆ.<br>**02**. ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಅಧಿಸೂಚನೆ ಪತ್ರ ಸಂಖ್ಯೆ:1) ಕುಸ: ಕೇಖಘಸಸ:2018-19 85 ದಿನಾಂಕ:27.11.2019 2) ಕವಿಹಂ: ಕಸಕೇಂಖ. ಢ.ಸ.ಸ:2019-20/294 ದಿನಾಂಕ:17.02.2020 ರನ್ವಯ ಕನ್ನಡ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಗತ್ಯ ಬಳಕೆ ಮತ್ತು ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಸಾಮಗ್ರಿಗಳನ್ನು ಒದಗಿಸಲು ಕೇಂದ್ರೀಯ ಖರೀದಿ ಘಟಕ ಸಮಿತಿಯ ರಚಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ.<br>ಅಂದರೆ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಅವರಣದಲ್ಲಿರುವ (compus) ಎಲ್ಲಾ ವಿಭಾಗಗಳು ಮತ್ತು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಇತರೆ ಸ್ಥಳಗಳಲ್ಲಿರುವ ವಿವಿಧ ವಿಭಾಗಗಳಲ್ಲಿ ಯಾವುದೇ ಸಾಮಾಗ್ರಿಗಳನ್ನು ಖರೀದಿಸಬೇಕಾದಲ್ಲಿ ಕೇಂದ್ರೀಯ ಖರೀದಿ ಘಟಕದ ಸಮಿತಿಯಿಂದ ಅನುಮೋದನೆಯನ್ನು ಖರೀದಿ ಪ್ರಕ್ರಿಯೆಯನ್ನು ಕೈಗೊಂಡು ಸಾಮಗ್ರಿಗಳನ್ನು ಖರೀದಿಸಬೇಕಾಗಿರುತ್ತದೆ. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | ಆದರೆ ಸದರಿ ಪ್ರಕರಣಗಳಲ್ಲಿ ಕೇಂದ್ರೀಯ ಖರೀದಿ ಘಟಕದಿಂದ ಅನುಮೋದನೆಯನ್ನು ಪಡೆಯದೇ ಮತ್ತು ಕೇಂದ್ರ ಖರೀದಿ ಘಟಕದಿಂದ ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳದೇ ನೇರವಾಗಿ ಆಯಾ ವಿಭಾಗದ ಮುಖ್ಯಸ್ಥರು ಪ್ರಾಯೋಗಿಕ ಲೇಖನ ಸಾಮಗ್ರಿಗಳನ್ನು ಖರೀದಿಸಿರುತ್ತಾರೆ. ಇದರಿಂದ ವಿಶ್ವವಿದ್ಯಾಲಯದವರು ರೂಪಿಸಿರುವ ನಿಯಮಗಳನ್ನು ತಾವೇ ಉಲ್ಲಂಘಿಸಿರುತ್ತಾರೆ.<br>**03.** ಪರೀಕ್ಷಾ ಕೇಂದ್ರಗಳಿಗೆ ಪ್ರಾಯೋಗಿಕ ಲೇಖನ ಸಾಮಗ್ರಿಗಳ ಸರಬರಾಜು ಮಾಡಲಾಗಿದ್ದು ಸದರಿ ಸಾಮಗ್ರಿಗಳ ದಾಸ್ತಾನು ವಹಿ (stock Register)ಯಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರವನ್ನು ಬಿಲ್ಲಿನ ಹಿಂದುಗಡೆ ನಮೂದಿಸಿರುವುದಿಲ್ಲ.<br>**04.** ಪರೀಕ್ಷಾ ಕೇಂದ್ರಗಳಿಗೆ ಪ್ರಾಯೋಗಿಕ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಿದ ನಂತರ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಂದ ಬಿಲ್ಲಿನಲ್ಲಿರುವ ಸಾಮಗ್ರಿಗಳನ್ನು ಒಳ್ಳೆಯ ಗುಣಮಟ್ಟ ಸುಸ್ಥಿತಿಯಲ್ಲಿರುವ ಬಗ್ಗೆ ಮತ್ತು ಸರಿಯಾದ ಪ್ರಮಾಣದಲ್ಲಿ ಸರಬರಾಜು ಮಾಡಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ.<br>**05.** ರೂ.7,54,666/–ಗಳ ಪರೀಕ್ಷಾ ಪ್ರಾಯೋಗಿಕ ಲೇಖನ ಸಾಮಗ್ರಿಗಳನ್ನು ಖರೀದಿ ಮಾಡುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ಕುಲಸಚಿವರಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದಿರುವುದಿಲ್ಲ.<br>**06.** ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದಗಳನ್ವಯ ಯಾವುದೇ ಪಾವತಿಯನ್ನು ಮಾಡಬೇಕಾದಲ್ಲಿ ಏಜೆನ್ಸಿಯವರಿಂದ ಬಿಲ್ಲುಗಳನ್ನು ಪಡೆದು ಪಾವತಿ ಮಾಡಬೇಕಾಗಿರುತ್ತದೆ. ಆದರೆ ಸದರಿ ಪ್ರಕರಣದಲ್ಲಿ ಶ್ರೀ ರೇಣುಕಾ ಫ್ಯಾನ್ಸಿ ಸ್ಟೋರ್ಸ್ ಹುಬ್ಬಳ್ಳಿ ಇವರಿಂದ Invoice ನ್ನು ಪಡೆದು ಪಾವತಿ ಮಾಡಿರುವುದನ್ನು ಆಕ್ಷೇಪಿಸಿದೆ.<br>**07.** ಪರೀಕ್ಷಾ ಕೇಂದ್ರಗಳಿಗೆ ಪ್ರಾಯೋಗಿಕ ಲೇಖನ ಸಾಮಗ್ರಿಗಳನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಹತ್ತಿರವಿರುವ ಅಂದರೆ ಕೇಂದ್ರಸ್ಥಾನದಿಂದ ಹತ್ತಿರ ಸ್ಥಳವಾದ ಹೊಸಪೇಟೆಯಲ್ಲಿ ನಿಯಮಾನುಸಾರ ಖರೀದಿ ಮಾಡದೇ ಹುಬ್ಬಳಿಯಲ್ಲಿರುವ ಶ್ರೀ ರೇಣುಕಾ ಫ್ಯಾನ್ಸಿ ಸ್ಟೋರ್ಸ್ ಇವರಿಂದ ಖರೀದಿ ಮಾಡಿರುವ ಔಚಿತ್ಯ ತಿಳಿದುಬಂದಿರುವುದಿಲ್ಲ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 35 ದಿನಾಂಕ: 16–11–2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಸದರಿ ಲೇಖನ ಸಾಮಗ್ರಿಗಳನ್ನು ಹುಬ್ಬಳ್ಳಿ, ಬೆಳಗಾವಿ ಮತ್ತು ಬೆಂಗಳೂರು ಊರುಗಳಲ್ಲಿ ಮಾತ್ರ ಚಿತ್ರಕಲಾ ಪರೀಕ್ಷಾ ಸಾಮಗ್ರಿಗಳು ಲಭ್ಯವಿರುತ್ತವೆ. ಆದರೆ ಬೆಳಗಾವಿ ಮತ್ತು ಬೆಂಗಳೂರು ಸಂಸ್ಥೆಯವರು ನೇರವಾಗಿ ಪರೀಕ್ಷಾ ಕೇಂದ್ರಗಳಿಗೆ ಲೇಖನಾ ಸಾಮಗ್ರಿಗಳನ್ನು ಸರಬರಾಜು ಮಾಡಲು ಒಪ್ಪದ ಕಾರಣ ದರಪಟ್ಟಿಯನುಸಾರ ಸರಬರಾಜು ಆದೇಶವನ್ನು ಶ್ರೀ ರೇಣುಕಾ ಫ್ಯಾನ್ಸಿ ಸ್ಟೋರ್ಸ್, ಹುಬ್ಬಳ್ಳಿ ಇವರಿಗೆ ನೀಡಲಾಯಿತು. ಇದಕ್ಕೆ ಮಾನ್ಯ ಕುಲಸಚಿವರು ಹಾಗೂ | | |

| | | | |
|---|---|---|---|
| | ಮಾನ್ಯ ಕುಲಪತಿಗಳು ಅನುಮೋದನೆ ನೀಡಿದ ಹಿನ್ನಲೆಯಲ್ಲಿ ಕ್ರಮವಹಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಕೆ.ಟಿ.ಪಿ.ಪಿ. ನಿಯಮ ಉಲ್ಲಂಘನೆ ಮಾಡಿರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. ಪಾವತಿಯಾದ ಒಟ್ಟು ಮೊತ್ತ **ರೂ.7,54,666/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **18** | **ದರ್ಪಣ ಗಣಕ ಕೇಂದ್ರದಿಂದ ಟೆಂಡರ್ ಕರೆಯದೇ ಸಾಮಗ್ರಿಗಳನ್ನು ಖರೀದಿ ಮಾಡಿರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯದ ದರ್ಪಣ ಗಣಕ ಕೇಂದ್ರ ವಿಭಾಗದಲ್ಲಿ ಲ್ಯಾಪ್‌ಟಾಪ್ ಟೋನರ್ ಕಾಟ್ರಿಡ್ಜ್ ಹಾಗೂ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಖರೀದಿಸಿ ರೂ.8,20,291/– ಬಿಲ್ಲುಗಳನ್ನು ಪಾವತಿ ಮಾಡಿದ್ದು, ವಿವರವನ್ನು ಅನುಬಂಧ–10ರಲ್ಲಿ ನೀಡಲಾಗಿದೆ.<br>ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನತೆಗಳು ಈ ಕೆಳಗಿನಂತಿವೆ.<br>1. ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 4 (ಇ) ಕಲಂ (5)ರ ಅನ್ವಯ ರೂ. 1.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಮಗ್ರಿಗಳನ್ನು ಖರೀದಿಸಬೇಕಾದಲ್ಲಿ ಕಡ್ಡಾಯವಾಗಿ ಟೆಂಡರ ಕರೆಯುವುದರ ಮೂಲಕ ಖರೀದಿಸಬೇಕಾಗಿರುತ್ತದೆ.<br>ಆದರೆ ಸದರಿ ಪ್ರಕರಣಗಳಲ್ಲಿ (**ಅನುಬಂಧ–10ರಲ್ಲಿ** ವಿವರಿಸಿದಂತೆ) ಟೆಂಡರ್ ಕರೆಯದೇ ಸಾಮಗ್ರಿಗಳನ್ನು ಏಜೆನ್ಸಿಯವರಿಂದ ನೇರವಾಗಿ ಖರೀದಿ ಮಾಡಿ ಸದರಿ ಕೆ.ಟಿ.ಪಿ.ಪಿ. ನಿಯಮದ ಉಲ್ಲಂಘನೆ ಮಾಡಲಾಗಿದೆ.<br>2. ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಅಧಿಸೂಚನೆ ಪತ್ರ ಸಂಖ್ಯೆ:(1)ಕು.ಸ:ಕೇ.ಖಫಸಸ:2018–19/85 ದಿನಾಂಕ:27.11.2017 (2) ಕ.ವಿ.ಹಂ: ಕು.ಸ.ಕೇಂ. ಖ.ಫ.ಸ.ಸ:2019–20/294 ದಿನಾಂಕ: 17.02.2020ರ ಅನ್ವಯ ಕನ್ನಡ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಗತ್ಯ ಬಳಕೆ ಮತ್ತು ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಸಾಮಗ್ರಿಗಳನ್ನು ಖರೀದಿಸಲು ಕೇಂದ್ರೀಯ ಖರೀದಿ ಘಟಕ ಸಮಿತಿಯನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ.<br>ಅಂದರೆ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಆವರಣದಲ್ಲಿರುವ (campus) ಎಲ್ಲಾ ವಿಭಾಗಗಳು ಮತ್ತು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಇತರೆ ಸ್ಥಳಗಳಲ್ಲಿರುವ ವಿವಿಧ ವಿಭಾಗಗಳಲ್ಲಿ ಯಾವುದೇ ಸಾಮಗ್ರಿಗಳನ್ನು ಖರೀದಿಸಬೇಕಾದಲ್ಲಿ ಕೇಂದ್ರೀಯ ಖರೀದಿ ಘಟಕ ಸಮಿತಿಯಿಂದ ಅನುಮೋದನೆಯನ್ನು ಪಡೆದು ಹಾಗೂ ಕೇಂದ್ರೀಯ ಖರೀದಿ ಘಟಕದಿಂದಲೇ ಖರೀದಿ ಪ್ರಕ್ರಿಯೆಯನ್ನು ಕೈಗೊಂಡು ಸಾಮಗ್ರಿಗಳನ್ನು ಖರೀದಿಸಬೇಕಾಗಿರುತ್ತದೆ.<br>ಆದರೆ ಸದರಿ ಪ್ರಕರಣಗಳಲ್ಲಿ ಕೇಂದ್ರೀಯ ಖರೀದಿ ಘಟಕದಿಂದ ಅನುಮೋದನೆಯನ್ನು ಪಡೆಯದೇ ಮತ್ತು ಕೇಂದ್ರೀಯ ಖರೀದಿ ಘಟಕದಿಂದ ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳದೇ | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

<table>
<tr>
<td></td>
<td>ನೇರವಾಗಿ ದರ್ಪಣ ಗಣಕ ಕೇಂದ್ರದ ಮುಖ್ಯಸ್ಥರು ಸಾಮಗ್ರಿಗಳು ಖರೀದಿಸಿರುತ್ತಾರೆ. ಇದರಿಂದ ವಿಶ್ವವಿದ್ಯಾಲಯದವರು ರೂಪಿಸಿರುವ ನಿಯಮಗಳನ್ನು ತಾವೇ ಉಲ್ಲಂಘಿಸಿರುತ್ತಾರೆ.<br>ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:46 ದಿನಾಂಕ:18-11-2021 ರಂದು ನೀಡಲಾಗಿದೆ. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಬೇಕಾದ ಕಂಪ್ಯೂಟರ್ ಸಾಮಗ್ರಿಗಳನ್ನು ಮಾನ್ಯ ಕುಲಪತಿಯವರ ಹಾಗೂ ಕುಲಸಚಿವರ ಕಡತದಲ್ಲಿ ಅನುಮೋದನೆ ನೀಡಿರುವುದರಿಂದ ಖರೀದಿಸಿ ವಿಭಾಗಗಳಿಗೆ ವಿತರಿಸಿದೆ ಎಂದು ಅನುಪಾಲನೆಯನ್ನು ನೀಡಿರುತ್ತಾರೆ. ಆದರೆ ಕೇಂದ್ರ ಖರೀದಿ ಘಟಕದಿಂದ ನಿಯಮಾನುಸಾರ ಖರೀದಿಸದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿ ಪಾವತಿಯಾದ ಒಟ್ಟು ಮೊತ್ತ ರೂ.8,20,291/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.</td>
<td></td>
<td></td>
</tr>
<tr>
<td>19</td>
<td>ಭದ್ರತಾ ಸೇವೆ ಒದಗಿಸಲು ಕರೆದ ಟೆಂಡರ್ ಪ್ರಕ್ರಿಯೆಯಲ್ಲಿನ ಆಕ್ಷೇಪಣೆಗಳ ಬಗ್ಗೆ.<br>ವಿಶ್ವವಿದ್ಯಾಲಯದಲ್ಲಿ ಭದ್ರತಾ ಸೇವೆ ಒದಗಿಸುವ ವ್ಯವಸ್ಥೆಗಾಗಿ ದಿನಾಂಕ:26-12-2018 ರಂದು ವರ್ಷಕ್ಕೆ ರೂ.59,93,783/-ಗಳಂತೆ ಒಂದು ವರ್ಷದ ಅವಧಿಗಾಗಿ E-procurement ಮೂಲಕ ಅಲ್ಪಾವಧಿ ಟೆಂಡರ್ (ಟೆಂಡರ್ ನಂ.KUH/AR/SECURITY/24/2018-19) ಕರೆಯಲಾಯಿತು. ಕರೆದ ಸದರಿ ಅಲ್ಪಾವಧಿ ಟೆಂಡರಗೆ ಈ ಕೆಳಕಂಡ ಏಜೆನ್ಸಿಯವರು ತಾಂತ್ರಿಕ ಬಿಡ್ಡನ್ನು ಸಲ್ಲಿಸಿರುತ್ತಾರೆ.
<table>
<tr><th>ಕ್ರ.ಸಂ</th><th>ಹೆಸರು</th><th>ಏಜೆನ್ಸಿ ಹೆಸರು</th></tr>
<tr><td>1</td><td>Chandrashekhar KA</td><td>Golden Eye Guarding solution pvt.ltd.</td></tr>
<tr><td>2</td><td>Dhanlaxami</td><td>Koushalya Security Service</td></tr>
<tr><td>3</td><td>Gopal Dasappa</td><td>G Force Security and Allied Services</td></tr>
<tr><td>4</td><td>Gopal Pille</td><td>HI Tech Security Force</td></tr>
<tr><td>5</td><td>Kiran Kumar KC</td><td>First Man Management Services pvt.ltd.</td></tr>
<tr><td>6</td><td>Nittur Channabasavaiya Prakash</td><td>Wisdom Security Services.</td></tr>
<tr><td>7</td><td>Nazir Ahmed Abdul Desai</td><td>Commandos Security Services</td></tr>
</table></td>
<td>1. ಇನ್ನು ಮುಂದೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಪಡೆಯಲಾಗುವುದು<br>2. ಟೆಂಡರ್ ಅವಧಿ ಮುಗಿದಿರುವುದರಿಂದ, ತುರ್ತಾಗಿ ಟೆಂಡರ್ ಕರೆಯಬೇಕಾದ್ದರಿಂದ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ<br>3. ಟೆಂಡರ್ ದಾಸ್ತಾವೇಜುಗಳನ್ನು ಮಾನ್ಯ ಕುಲಪತಿಯವರು, ಮಾನ್ಯ ಕುಲಸಚಿವರು, ಹಣಕಾಸು ಅಧಿಕಾರಿಗಳು, ಉಪಕುಲಸಚಿವರು (ಆಡಳಿತ), ಯೋಜನಾಧಿಕಾರಿಗಳು ಮತ್ತು ಸಹಾಯಕ ಕುಲಸಚಿವರು (ಆಡಳಿತ) ಇವರುಗಳು ಪರಿಶೀಲಿಸಿ ಟೆಂಡರ್ ಪ್ರಕ್ರಿಯೇ ಅಂತಿಮಗೊಳಿಸಿರುತ್ತಾರೆ. ಇವರೆಲ್ಲರೂ ಸಹಿ ಮಾಡಿದ ಪ್ರತಿ ಲಗತ್ತಿಸಿದೆ<br>4. ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ವಿವರದೊಂದಿಗೆ ಪತ್ರ ಬರೆಯಲಾಗಿದೆ<br>5. ಭದ್ರತಾ ಠೇವಣಿ ಇ-ಪ್ರಕೂರ್‌ಮೆಂಟ್‌ನಲ್ಲಿ ಪಡೆಯಲಾಗಿದೆ<br>6. ಮೆ.ಕೌಶಲ್ಯ ಸೆಕ್ಯೂರಿಟಿ ಸರ್ವಿಸಸ್ ಇವರು (L7)ನೇ ಸ್ಥಾನದಲ್ಲಿದ್ದರೂ ಸೇವಾ ಶುಲ್ಕ</td>
<td></td>
</tr>
</table>

| | | |
|---|---|---|
| 8 | Raghavendra Reddy | Poojyaya Security Services |
| 9 | Ravi Guru | Security and Intelligence Services Indo ltd. |
| 10 | Renuka A | Om Sai Security Service & Manpower Agency |
| 11 | Shivanand Kemmanakeri | Leopard Detective and Security Service |
| 12 | Thippanalli Mahalingappa Shobha | Supreeth Enterprices |
| 13 | Vinod C Jumnal | Jai Jawan Security,Man Power and Allied Services |

ತಾಂತ್ರಿಕ ಬಿಡ್‌ನ್ನು ಸಲ್ಲಿಸಲಾದ ಹದಿಮೂರು ಜನ ಬಿಡ್ದಾರರಲ್ಲಿ 9 ಜನ ಆರ್ಥಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ್ದು ಅವರ ವಿವರ ಕೆಳಗಿನಂತಿದೆ.

01. Jai Jawan Security ,Man Power and allied Services.
02. Poojyaya Security Services.
03. Supreeth Enterprices.
04. G Force Security and Allied Services.
05. Nazir Ahmed Abdul Desai.( Commandos Security Services)
06. Leopard Detective and Security Service.
07. Koushalya Security Service.
08. Golden Eye Guarding solution pvt.ltd.
09. Om Sai Security Service & Manpower Agency.

ಸದರಿ ಆರ್ಥಿಕ ಬಿಡ್‌ನಲ್ಲಿ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್ ಇವರು ಸಲ್ಲಿಸಿದ ರೂ.4,29,221(L7)ಗಳ ದರಕ್ಕೆ ಅಂತಿಮಗೊಳಿಸಿ ಸದರಿ ಏಜೆನ್ಸಿಯವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಅದರ ವಿವರ ಈ ಕೆಳಗಿನಂತಿರುತ್ತದೆ.

ಕಡಿಮೆ ನಮೂದಿಸಿದ್ದಾರೆ. ಕಾರ್ಮಿಕ ಇಲಾಖೆಯ ನಿಯಮದ ಪ್ರಕಾರ ಕನಿಷ್ಠ ವೇತನ ಪಾವತಿಸಲೇಬೇಕು, ಸೇವಾ ಶುಲ್ಕ ಕಡಿಮೆ ನಮೂದಿಸಿದವರಿಗೆ ಆದೇಶ ನೀಡಬೇಕಾಗುತ್ತೆ. ಆ ಪ್ರಕಾರ ಆದೇಶ ನೀಡಲಾಗಿದೆ. ಕಾರ್ಮಿಕ ಇಲಾಖೆಯ ನಿಯಮದ ಪ್ರಕಾರ ಕನಿಷ್ಠ ವೇತನ ಪಾವತಿಸಲೇಬೇಕಾದ್ದರಿಂದ ಕನಿಷ್ಠ ವೇತನ 3/19ರಲ್ಲಿ ರೂ.4,92,595/- ಮತ್ತು 4/19ರಿಂದ ಕಾರ್ಮಿಕ ಇಲಾಖೆಯು ಪರಿಷ್ಕರಿಸಿದಂತೆ ಪಾವತಿಸಲೇಬೇಕು ಅದರಂತೆ ರೂ.5,00,473/-ರಂತೆ ಮಾಸಿಕವಾಗಿ ಪಾವತಿಸಲಾಗಿದೆ. ಆಕ್ಷೇಪಣೆಯಲ್ಲಿ ಸೂಚಿಸಿರುವಂತೆ (L2) ಅವರು ರೂ.4,21,629.48ಕ್ಕೆ ಇರುವುದರಿಂದ ಕಾರ್ಮಿಕರಿಗೆ ಕನಿಷ್ಠ ವೇತನ ರೂ.4,92,595/- ಮತ್ತು ರೂ.5,00,473/- ಪಾವತಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸೇವಾ ಶುಲ್ಕ ಕಡಿಮೆ ಇರುವ ಹಾಗೂ ಕನಿಷ್ಠ ವೇತನ ನಮೂದಿಸಿರುವ ಮೆ.ಕೌಶಲ್ಯ ಸೆಕ್ಯೂರಿಟಿ ಸರ್ವಿಸಸ್ ಇವರಿಗೆ ವಹಿಸಲಾಗಿದೆ.

7. ಅವಧಿ ಒಂದು ವರ್ಷದ್ದಾಗಿರುತ್ತದೆ, ಒಪ್ಪಂದದ ಕರಾರು ಪತ್ರದಲ್ಲಿ ನಮೂದಿಸಲಾಗಿದೆ.
8. ಟೆಂಡರ್ ಕರೆದಿರುವುದರಿಂದ ಮತ್ತು ಗುತ್ತಿಗೆದಾರರು ಟೆಂಡರ್‌ನಲ್ಲಿ ಸಲ್ಲಿಸಿರುವುದರಿಂದ, ಗುತ್ತಿಗೆದಾರರು ಸಲ್ಲಿಸುವ ಲೇಟರ್ ಪ್ಯಾಡ್‌ನಲ್ಲಿ ಪಾವತಿಸಲಾಗಿದೆ.

| | | |
|---|---|---|
| 1 | Name of The work Tender Title | Providing Security Services to Kannada University Campus, Vidyaranaya for the year 2018-2019 |
| 2 | Name of the Agency | Koushalya Security Service |
| 3 | Agreement No | IN-KA63136325071720R |
| 4 | Date of Agreement | 28-02-2019 |
| 5 | Estimate Value | 59,93,783 |
| 6 | Tender Published Date | 26-12-2018 |
| 7 | Last Date for Bid Submission | 25-01-2019 |
| 8 | Date of Opening of Technical Bid | 29-01-2019 |
| 9 | Date of Opening of Financial Bid | - |
| 10 | Agreement Amount | Nil |

ಸದರಿ ಟೆಂಡರ್‌ಪ್ರಕ್ರಿಯೆಯಲ್ಲಿನ ಆಕ್ಷೇಪಣೆಗಳ ವಿವರ ಈ ಕೆಳಗಿನಂತಿದೆ.

1) ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪರಿನಿಯಮಗಳ ನಿಯಮ 62 (9–2–2014) ರನ್ವಯ ತಾತ್ಕಾಲಿಕವಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕಾರ್ಯಕಾರಿ ಸಮಿತಿಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದರೆ ಭದ್ರತಾ ಸೇವೆ ಒದಗಿಸಲು ಕರೆಯಲಾದ ಅಲ್ಪಾವಧಿ ಟೆಂಡರ್‌ಗೆ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆದಿರುವುದಿಲ್ಲ.
2) ಕೆ.ಟಿ.ಪಿ.ಪಿ. ನಿಯಮ 2000ರ ನಿಯಮ 17(ಎ) ರನ್ವಯ ಎರಡು ಕೋಟಿ ರೂಪಾಯಿಗಳವರೆಗಿನ ಮೌಲ್ಯದ ಟೆಂಡರುಗಳಿಗೆ 30 ದಿನಗಳ ಕನಿಷ್ಠ ಸಮಯವು ನಿಗದಿಪಡಿಸಿರುತ್ತಾರೆ. 2(1)ನೇ ಉಪನಿಯಮದ ಮೇರೆಗೆ ಗೊತ್ತುಪಡಿಸಲಾದ ಸಮಯದಲ್ಲಿ ಯಾವುದೇ ಕಡಿತವನ್ನು ಮಾಡಬೇಕಾದರೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಿಂತ ಹಿರಿಯ ಪ್ರಾಧಿಕಾರಿಯು, ಲಿಖಿತದಲ್ಲಿ ಕಾರಣಗಳನ್ನು ದಾಖಲಾತಿಸಿ ನಿರ್ದಿಷ್ಟವಾಗಿ ಅಧಿಕೃತಗೊಳಿಸಬೇಕು. ಆದರೆ ಸದರಿ ಪ್ರಕರಣದಲ್ಲಿ ಯಾವುದೇ ಕಾರಣಗಳನ್ನು ದಾಖಲಿಸದೇ ಅಲ್ಪಾವಧಿ ಟೆಂಡರ್ ಕರೆಯಲಾಗಿರುತ್ತದೆ.

9. EPF, ESI & GST ಪಾವತಿಸಿದ ಬಿಲ್ಲುಗಳನ್ನು ಸಲ್ಲಿಸಿದ್ದಾರೆ. ಆ ಆಧಾರದ ಮೇಲೆ ಗುತ್ತಿಗೆದಾರರಿಗೆ ಪಾವತಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.

| | | | |
|---|---|---|---|
| | 3) ಕೆ.ಟಿ.ಪಿ.ಪಿ. ನಿಯಮ 2000ರ ನಿಯಮ 20(1)ರಲ್ಲಿ ಟೆಂಡರ್ ಅಂಗೀಕರಿಸುವ ಪ್ರಾಧಿಕಾರಿಯು, ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಲು, ಟೆಂಡರ್‌ಗಳನ್ನು ತೆರೆಯುವ ಬಗ್ಗೆ ಮೇಲ್ವಿಚಾರಣೆ ಮಾಡಲು, ಪ್ರಾರಂಭಿಕ ಪರೀಕ್ಷೆ ನಡೆಸಲು ಮತ್ತು ಸ್ವೀಕರಿಸಿದ ಟೆಂಡರ್‌ಗಳ ಸವಿವರವಾದ ಮೌಲ್ಯಮಾಪನ ಮಾಡಲು ಮತ್ತು ಟೆಂಡರ್ ಅಂಗೀಕರಿಸುವ ಪ್ರಾಧಿಕಾರದ ಪರಿಗಣನೆಗಾಗಿ ಮೌಲ್ಯಮಾಪನ ವರದಿಯನ್ನು ಸಿದ್ಧಪಡಿಸಲು, ತಾನು ಸೂಕ್ತ ಎಂದು ಭಾವಿಸುವ ಅಂಥ ಅಧಿಕಾರಿಗಳನ್ನು ಒಳಗೊಂಡು ಒಂದು ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಬಹುದು ಎಂದು ತಿಳಿಸಲಾಗಿರುತ್ತದೆ. ಆದರೆ ಸದರಿ ಪ್ರಕರಣದಲ್ಲಿ ಟೆಂಡರ್ ಪರಿಶೀಲನಾ ಸಮಿತಿ ರಚನೆ ಮಾಡದೇ ಕುಲಸಚಿವರು ಹಾಗೂ ಯೋಜನಾಧಿಕಾರಿಗಳು ಮಾತ್ರ ಪರಿಶೀಲಿಸಿ ಸದರಿ ನಿಯಮದ ಉಲ್ಲಂಘನೆ ಮಾಡಿರುತ್ತಾರೆ.<br>4) ಕೆ.ಟಿ.ಪಿ.ಪಿ. ನಿಯಮ 2000ರ ನಿಯಮ 8 ರನ್ವಯ 10ನೇ ನಿಯಮದ ಉಪಬಂಧಗಳಿಗೆ ಒಳಪಟ್ಟು, ಟೆಂಡರಗಳನ್ನು ಆಹ್ವಾನಿಸುವ ನೋಟಿಸು ಮತ್ತು ಟೆಂಡರಗಳ ಮೇಲಿನ ತಿರ್ಮಾನಗಳನ್ನು ಟೆಂಡರನ್ನು ಆಹ್ವಾನಿಸುವ ಪ್ರಾಧಿಕಾರದ ಕೇಂದ್ರ ಸ್ಥಾನವು ಇರುವ ಜಿಲ್ಲೆಯ ಜಿಲ್ಲಾ ಟೆಂಡರ್ ಬುಲೆಟಿನ್ನಿನಲ್ಲಿ ಪ್ರಕಟಿಸತಕ್ಕದು ಎಂದಿರುತ್ತದೆ. ಆದರೆ ಈ ಕುರಿತು ಟೆಂಡರ್ ಅಧಿಸೂಚನೆಯನ್ನು ಜಿಲ್ಲಾ ಬುಲೆಟಿನ್ನಿನಲ್ಲಿ ಪ್ರಕಟಗೊಂಡ ಪ್ರತಿ ಲೆಕ್ಕಪರಿಶೋಧನೆಗೆ ಸಲ್ಲಿಸಿರುವುದಿಲ್ಲ.<br>5) ಕೆ.ಟಿ.ಪಿ.ಪಿ.Act ನಿಯಮ 28 H clause 25.5 ಮತ್ತು clause 44 ರನ್ವಯ ಟೆಂಡರ್ ಮೌಲ್ಯದ ಕನಿಷ್ಠ 5% ಭದ್ರತಾ ಠೇವಣಿಯನ್ನು (Security Deposit) ಪಡೆಯಬೇಕಾಗಿರುತ್ತದೆ. ಸದರಿ ಟೆಂಡರನ ಅಂದಾಜು ಮೌಲ್ಯವು ರೂ.59,93,783/–ಗಳಿಗೆ ಶೇ.5ರಂತೆ ರೂ.2,99,689/–ಗಳ ಭದ್ರತಾ ಠೇವಣಿಯು ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್ ಇವರಿಂದ ಪಡೆಯಬೇಕಾಗಿರುತ್ತದೆ. ಸದರಿ ಭದ್ರತಾ ಠೇವಣಿಯನ್ನು ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್ ಇವರಿಂದ ವಸೂಲಿಸಲು ಸೂಚಿಸಿದೆ.<br>6) ತಾಂತ್ರಿಕ ಬಿಡ್‌ನ್ನು ಸಲ್ಲಿಸಲಾದ 13 ಜನ ಬಿಡ್‌ದಾರರಲಿ 9 ಜನ/ಏಜೆನ್ಸಿಯವರಿಗೆ ಆರ್ಥಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿರುತ್ತದೆ. ಸದರಿ 9 ಏಜೇನ್ಸಿಗಳಲ್ಲಿ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್ ಇವರು L-7 ಬಿಡ್‌ದಾರರಾಗಿದ್ದು, L-1 ನಿಂದ L-6 ಏಜೆನ್ಸಿಯವರು ಸಲ್ಲಿಸಲಾದ ದರಗಳನ್ನು ಪರಿಗಣಿಸದೇ L-7 ಏಜೆನ್ಸಿ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್ ಇವರಿಗೆ ಯಾವ ಆಧಾರದ ಮೇಲೆ ಅಂತಿಮಗೊಳಿಸಲಾಗಿದೆ ಎಂದು ಸ್ಪಷ್ಟೀಕರಣ ನೀಡುವುದು.<br>ಮುಂದುವರೆದಂತೆ, L-1 ನಿಂದ L-7 ಏಜೆನ್ಸಿಯವರು ಆರ್ಥಿಕ ಬಿಡ್‌ನಲ್ಲಿ ಸಲ್ಲಿಸಿದ ದರದ ವಿವರ ಈ ಕೆಳಗಿನಂತಿದೆ. | | |

| ಕ್ರ.ಸಂ | ಏಜೆನ್ಸಿ | ಬಿಡ್ ದರ |
|---|---|---|
| 1 | Jai Jawan Security, Man Power and allied Services. | 4,03,085.75 |
| 2 | Poojyaya Security Services. | 3,57,698 |
| 3 | Supreeth Enterprices. | 4,21,629.34 |
| 4 | G Force Security and Allied Services. | 4,24,858.48 |
| 5 | Nazir ahmed Abdul Desai | 4,26,697.04 |
| 6 | Leopard Detective and Security Service. | 4,29,195.34 |
| 7 | Koushalya Security Service | 4,29,221.32 |

ಮೇಲೆ ವಿವರಿಸಿದಂತೆ L-1 ನಿಂದ L-6 ಏಜೆನ್ಸಿಯವರು ಸಲ್ಲಿಸಿದ ದರಗಳಿಗೆ ಒಪ್ಪದೇ L-7 ಏಜೆನ್ಸಿಯವರು ಸಲ್ಲಿಸಿದ ದರಗಳಿಗೆ ಒಪ್ಪಿ, ಸದರಿ ದರದಂತೆ 2019–20ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿದ ಬಿಲ್ಲುಗಳ ಮೊತ್ತದ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಮಾಹೆ | L7 ದರದಂತೆ ಪಾವತಿಯಾದ ಮೊತ್ತ | L2 ದರದಂತೆ ಪಾವತಿಮಾಡಬೇಕಾದ ಮೊತ್ತ | ವ್ಯತ್ಯಾಸ |
|---|---|---|---|---|
| 1 | 3/2019 | 4,92,595 | 3,57,698 | 1,34,897 |
| 2 | 4/2019 | 5,00,473 | 3,57,698 | 1,42,775 |
| 3 | 5/2019 | 5,00,473 | 3,57,698 | 1,42,775 |
| 4 | 6/2019 | 5,00,473 | 3,57,698 | 1,42,775 |
| 5 | 7/2019 | 5,00,473 | 3,57,698 | 1,42,775 |
| 6 | 8/2019 | 5,00,473 | 3,57,698 | 1,42,775 |
| 7 | 9/2019 | 5,00,743 | 3,57,698 | 1,43,045 |
| 8 | 10/2019 | 5,00,743 | 3,57,698 | 1,43,045 |
| 9 | 11/2019 | 5,00,743 | 3,57,698 | 1,43,045 |
| 10 | 12/2019 | 5,00,743 | 3,57,698 | 1,43,045 |
| | **ಒಟ್ಟು** | **49,97,932** | **35,76,980** | **14,20,952** |

ಹೆಚ್ಚುವರಿಯಾಗಿ ಪಾವತಿಸಿದ ಮೊತ್ತ **ರೂ.14,20,952/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಲು ಸೂಚಿಸಿದೆ.**

7) ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸಸ್, ಕಲಬುರಗಿ ಇವರೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದ ಕರಾರು ಪತ್ರದಲ್ಲಿ Estimate Amount (ಅಂದಾಜು ಮೌಲ್ಯ), ಒಪ್ಪಂದದ ಮೊತ್ತ (Agreement Amount) ಹಾಗೂ ಒಪ್ಪಂದದ ಅವಧಿಯು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಇರುತ್ತದೆ ಎನ್ನುವ ಬಗ್ಗೆ ಯಾವುದೇ ಮಾಹಿತಿಯನ್ನು ನಮೂದಿಸದೇ ಅಪೂರ್ಣವಾದ ಒಪ್ಪಂದ ಮಾಡಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

8) 2019-20ನೇ ಸಾಲಿನಲ್ಲಿ ಸದರಿ ಏಜೆನ್ಸಿಯವರಿಗೆ ಪಾವತಿ ಮಾಡಲಾದ ಬಿಲ್ಲುಗಳ ವಿವರ ಈ ಕೆಳಗಿನಂತಿದೆ.

| **ಕ್ರ.ಸಂ.** | **ತಿಂಗಳು** | **ಚೆಕ್ ಸಂಖ್ಯೆ** | **ಮೊತ್ತ** |
|---|---|---|---|
| 1. | 03/2019 | 020164<br>20-06-2019 | 4,92,595 |
| 2. | 04, 05, 06/ 2019 | 123676<br>05-09-2019 | 15,01,419 |
| 3. | 07, 08/2019 | 125578<br>21-10-2019 | 10,00,946 |
| 4. | 09, 10, 11, 12/ 2019 | 131175<br>26-03-2019 | 20,02,972 |
| | | **ಒಟ್ಟು** | **49,97,932** |

ಮೇಲೆ ವಿವರಿಸಿದಂತೆ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸ್, ಕಲಬುರಗಿಯವರು ಭದ್ರತಾ ಸೇವಾ ಒದಗಿಸಿದಕ್ಕೆ ಪ್ರತಿ ತಿಂಗಳು TIN/GST No. ಹಾಗೂ ಬಿಲ್ಲಿನ ಕ್ರಮಸಂಖ್ಯೆ ಹೊಂದಿರುವ ಬಿಲ್ಲುಗಳನ್ನು ಸಲ್ಲಿಸದೇ ಏಜೆನ್ಸಿಯ Letter Padನಲ್ಲಿ ಬಿಲ್ಲಿನ ಮೊತ್ತವನ್ನು ನಮೂದಿಸಿ ಪಾವತಿಗಾಗಿ ಸಲ್ಲಿಸಿದ್ದು, ಸದರಿ Letter Padನಲ್ಲಿ ಪಾವತಿಗಾಗಿ ಸಲ್ಲಿಸಿರುವ ಮೊತ್ತಕ್ಕೆ ವಿಶ್ವವಿದ್ಯಾಲಯದಿಂದ ಪಾವತಿ ಮಾಡಲಾಗಿರುತ್ತದೆ. ಕಾರಣ ಅಧಿಕೃತವಾದ ಬಿಲ್ಲನ್ನು ಪಡೆಯದೇ ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

ಅಲ್ಲದೇ ಸದರಿ Letter Pad/Invoiceನಲ್ಲಿ ಪಾವತಿಗಾಗಿ ಸಲ್ಲಿಸಿರುವ ಮೊತ್ತದಲ್ಲಿ EPF, ESI ಸೇವಾ ತೆರಿಗೆ, ಸೇವಾ ಶುಲ್ಕ ಹಾಗೂ GST ಮೊತ್ತ ಇತ್ಯಾದಿಗಳ ಯಾವುದೇ ಮಾಹಿತಿಯನ್ನು

| | | | |
|---|---|---|---|
| | ಏಜೆನ್ಸಿಯವರು ನಮೂದಿಸಿರುವುದಿಲ್ಲ. ಏಜೆನ್ಸಿಯವರು ಸಲ್ಲಿಸಿರುವ ಅನಧಿಕೃತ ಬಿಲ್ಲುಗಳಲ್ಲಿ ಸಾಕಷ್ಟು ನ್ಯೂನ್ಯತೆಗಳಿದ್ದರು ಸಹ ವಿಶ್ವವಿದ್ಯಾಲಯದಿಂದ ಪಾವತಿ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br>9) ಹೊರಮೂಲ ಸೇವಾ ಒದಗಿಸುವ ಸಂಸ್ಥೆಯವರು, ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಒದಗಿಸಿದ ಸೇವೆಗಾಗಿ ಸಲ್ಲಿಸಿದ ಬಿಲ್‌ಗಳ ಜೊತೆಗೆ EPF, ESI & GST ಪಾವತಿಸಿದ ಬಿಲ್ಲುಗಳನ್ನು ಲಗತ್ತಿಸಿರುತ್ತಾರೆ. ಪಾವತಿಸಿದ ಏಜೆನ್ಸಿಯವರು ಅವರು ಪಾವತಿಸಿದ ಒಟ್ಟು EPF, ESI ವಂತಿಕೆಯ ರಸೀದಿ ಸಲ್ಲಿಸಿರುತ್ತಾರೆ. ಆದರೆ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಕೆಲಸ ನಿರ್ವಹಿಸಿದ ಸಿಬ್ಬಂದಿಗಳ ಹೆಸರು/ಖಾತೆ/ವಂತಿಗೆ ಮೊತ್ತದ ವಿವರ ಇರುವುದಿಲ್ಲ. ಇದರಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿಗಳ ಖಾತೆಗೆ EPF, ESI ಮೊತ್ತ ಜಮಾ ಆಗಿರುವ ಬಗ್ಗೆ ತಿಳಿದುಬಂದಿರುವುದಿಲ್ಲ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 69 ದಿನಾಂಕ: 10–12–2021** ರಂದು ನೀಡಲಾಗಿದೆ. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿ **ರೂ.49,97,933/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.2,99,689 + 14,20,952= 17,20,641/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | | |
| **20** | **ಸ್ವಚ್ಛತೆಗಾರರ ಸೇವೆ ಒದಗಿಸಲು ಕರೆದ ಟೆಂಡರ್ ಪ್ರಕ್ರಿಯೆಯಲ್ಲಿನ ಆಕ್ಷೇಪಣೆಗಳ ಬಗ್ಗೆ.**<br>ವಿಶ್ವವಿದ್ಯಾಲಯದಲ್ಲಿ ಸ್ವಚ್ಛತೆಗಾರರ ಸೇವೆ ಒದಗಿಸುವ ವ್ಯವಸ್ಥೆಗಾಗಿ ದಿನಾಂಕ: 26–12–2018ರಂದು ವರ್ಷಕ್ಕೆ ರೂ.36,25,728/–ಗಳಂತೆ ಒಂದು ವರ್ಷದ ಅವಧಿಗಾಗಿ E-Procurment ಮೂಲಕ ಅಲ್ಪಾವಧಿ ಟೆಂಡರ್ (ಟೆಂಡರ್ ನಂ.KUH/AR/ CLEANING/ 25/2018-19) ಕರೆಯಲಾಯಿತು. ಕರೆದ ಸದರಿ ಅಲ್ಪಾವಧಿ ಟೆಂಡರ್‌ಗೆ ಈ ಕೆಳಕಂಡ ಏಜೆನ್ಸಿಯವರು ತಾಂತ್ರಿಕ ಬಿಡ್‌ನ್ನು ಸಲ್ಲಿಸಿರುತ್ತಾರೆ.<br>01. Dhanalaxmi (Koushalya Security Service)<br>02. Gopal Dasappa (G Force Security and allied Services)<br>03. Nazirhamad abdual desai (commando Security Service)<br>04. Raghavendra Reddy (Poojayaya Security Services)<br>05. Renuka A (Om Sai Security Services and man power agency)<br>06. Shivadayal (Das Restaurant) | 1. ಇನ್ನು ಮುಂದೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಪಡೆಯಲಾಗುವುದು<br>2. ಟೆಂಡರ್ ಅವಧಿ ಮುಗಿದಿರುವುದರಿಂದ, ತುರ್ತಾಗಿ ಟೆಂಡರ್ ಕರೆಯಬೇಕಾದ್ದರಿಂದ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ<br>3. ಟೆಂಡರ್ ದಾಸ್ತಾವೇಜುಗಳನ್ನು ಮಾನ್ಯ ಕುಲಪತಿಯವರು, ಮಾನ್ಯ ಕುಲಸಚಿವರು, ಹಣಕಾಸು ಅಧಿಕಾರಿಗಳು, ಉಪಕುಲಸಚಿವರು (ಆಡಳಿತ), ಯೋಜನಾಧಿಕಾರಿಗಳು ಮತ್ತು ಸಹಾಯಕ ಕುಲಸಚಿವರು (ಆಡಳಿತ) ಇವರುಗಳು ಪರಿಶೀಲಿಸಿ ಟೆಂಡರ್ ಪ್ರಕ್ರಿಯೇ ಅಂತಿಮಗೊಳಿಸಿರುತ್ತಾರೆ. ಇವರೆಲ್ಲರೂ ಸಹಿ ಮಾಡಿದ ಪ್ರತಿ ಲಗತ್ತಿಸಿದೆ | |

07. Suresh Marati (Mahalakshmi Electricals)

08. Vinod C Jumnal (Jai Javan Security, Man power and allied Services)

ತಾಂತ್ರಿಕ ಬಿಡ್‌ನ್ನು ಸಲ್ಲಿಸಲಾದ ಎಂಟು ಜನ ಬಿಡ್‌ದಾರರಲ್ಲಿ 7 ಜನ ಆರ್ಥಿಕ ಬಿಡ್‌ನಲ್ಲಿ ಅರ್ಹತೆಹೊಂದಿದ್ದು, ಅವರ ವಿವರ ಕೆಳಗಿನಂತಿದೆ.

1) Jai Javan Security, Manpower and allied services.
2) G Force Security and allied services.
3) Koushalya Security Services
4) Poojayaya Security Services
5) Das Restaurant
6) Om Sai Security Services and manpower agency.
7) Mahalakshmi Electricals

ಸದರಿ ಆರ್ಥಿಕ ಬಿಡ್‌ನಲ್ಲಿ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸ್, ಕಲಬುರಗಿ ಇವರು ಸಲ್ಲಿಸಿದ ರೂ.2,97,121 (L3)ಗಳ ದರಕ್ಕೆ ಅಂತಿಮಗೊಳಿಸಿ ಸದರಿ ಏಜೆನ್ಸಿಯವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಅದರ ವಿವರ ಈ ಕೆಳಗಿನಂತಿರುತ್ತದೆ.

| | | | |
|---|---|---|---|
| 1) | Name of the work/Tender Title | : | Providing cleaning Services to Kannada University campus, vidyaranya for the year 2018-19 |
| 2) | Name of the Agency | : | Kaushalya Security Services |
| 3) | Agreement No | : | IN-KA63137165928176R |
| 4) | Date of Agreement | : | 28-02-2019 |
| 5) | Agreement Amount | : | Nil |
| 6) | Estimate value | : | 36,25,728/- |
| 7) | Tender Published Date | : | 26-12-2019 |

4. ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ವಿವರದೊಂದಿಗೆ ಪತ್ರ ಬರೆಯಲಾಗಿದೆ
5. ಭದ್ರತಾ ಠೇವಣಿ ಇ-ಪ್ರಕೂರ್‌ಮೆಂಟ್‌ನಲ್ಲಿ ಪಡೆಯಲಾಗಿದೆ
6. ಆಕ್ಷೇಪಣೆಯಲ್ಲೇ ಸೂಚಿಸಿರುವಂತೆ ಮೆ.ಕೌಶಲ್ಯ ಸೆಕ್ಯೂರಿಟಿ ಸರ್ವಿಸಸ್ ಇವರ ಮೊತ್ತ ರೂ.2,97,121.15 ಉಳಿದಿಬ್ಬರ ಮೊತ್ತ ಹೆಚ್ಚು ಅಂದರೆ ರೂ.2,97,123.00 ಹಾಗೂ ರೂ.2,97,121.20 ಇರುವುದರಿಂದ (L1) ಮೆ.ಕೌಶಲ್ಯ ಸೆಕ್ಯೂರಿಟಿ ಸರ್ವಿಸಸ್ ಇವರೇ ಇದ್ದಾರೆ, ಮತ್ತು ಸೇವಾ ಶುಲ್ಕ ಕಡಿಮೆ ನಮೂದಿಸಿದ್ದಾರೆ. ಸೇವಾ ಶುಲ್ಕ ಕಡಿಮೆ ನಮೂದಿಸಿದವರಿಗೆ ಆದೇಶ ನೀಡಬೇಕಾಗುತ್ತೆ. ಆ ಪ್ರಕಾರ ಆದೇಶ ನೀಡಲಾಗಿದೆ. ಕಾರ್ಮಿಕ ಇಲಾಖೆಯ ನಿಯಮದ ಪ್ರಕಾರ ಕನಿಷ್ಠ ವೇತನ ಪಾವತಿಸಲೇಬೇಕಾದ್ದರಿಂದ ಈ ಹಿನ್ನೆಲೆಯಲ್ಲಿ ಸೇವಾ ಶುಲ್ಕ ಕಡಿಮೆ ಇರುವ ಹಾಗೂ (L1) ಕನಿಷ್ಠ ವೇತನ ನಮೂದಿಸಿರುವ ಮೆ.ಕೌಶಲ್ಯ ಸೆಕ್ಯೂರಿಟಿ ಸರ್ವಿಸಸ್ ಇವರಿಗೆ ವಹಿಸಲಾಗಿದೆ.
7. ಅವಧಿ ಒಂದು ವರ್ಷದ್ದಾಗಿರುತ್ತದೆ, ಒಪ್ಪಂದದ ಕರಾರು ಪತ್ರದಲ್ಲಿ ನಮೂದಿಸಲಾಗಿದೆ.
8. ಟೆಂಡರ್ ಕರೆದಿರುವುದರಿಂದ ಮತ್ತು ಗುತ್ತಿಗೆದಾರರು ಟೆಂಡರ್‌ನಲ್ಲಿ ಸಲ್ಲಿಸಿರುವುದರಿಂದ, ಗುತ್ತಿಗೆದಾರರು ಸಲ್ಲಿಸುವ ಲೇಟರ್‌ಪ್ಯಾಡ್‌ನಲ್ಲಿ ಪಾವತಿಸಲಾಗಿದೆ.

| | | | | | |
|---|---|---|---|---|---|
| | | <table><tr><td>8)</td><td>Last date for bid submission</td><td>:</td><td>25-01-2019</td></tr><tr><td>9)</td><td>Date of opening of Technical bid</td><td>:</td><td>04-02-2019</td></tr><tr><td>10)</td><td>Date of Opening of Financial bid</td><td>:</td><td>06-02-2019</td></tr></table><br>ಸದರಿ ಟೆಂಡರ್ ಪ್ರಕ್ರಿಯೆಯಲ್ಲಿನ ಆಕ್ಷೇಪಣೆಗಳ ವಿವರ ಈ ಕೆಳಗಿನಂತಿದೆ.<br>1) ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪರಿನಿಯಮಗಳ ನಿಯಮ 62 (9-2-2014) ರನ್ವಯ ತಾತ್ಕಾಲಿಕವಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕಾರ್ಯಕಾರಿ ಸಮಿತಿಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದರೆ ಸ್ವಚ್ಛತೆಗಾರರ ಸೇವೆ ಒದಗಿಸಲು ಕರೆಯಲಾದ ಅಲ್ಪಾವಧಿ ಟೆಂಡರ್‌ಗೆ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆದಿರುವುದಿಲ್ಲ.<br>2) ಕೆ.ಟಿ.ಪಿ.ಪಿ. ನಿಯಮ 2000ರ ನಿಯಮ 17(ಎ) ರನ್ವಯ ಎರಡು ಕೋಟಿ ರೂಪಾಯಿಗಳವರೆಗಿನ ಮೌಲ್ಯದ ಟೆಂಡರ್‌ಗಳಿಗೆ 30 ದಿನಗಳ ಕನಿಷ್ಠ ಸಮಯವು ನಿಗದಿಪಡಿಸಿರುತ್ತಾರೆ. 2(1)ನೇ ಉಪನಿಯಮದ ಮೇರೆಗೆ ಗೊತ್ತುಪಡಿಸಲಾದ ಸಮಯದಲ್ಲಿ ಯಾವುದೇ ಕಡಿತವನ್ನು ಮಾಡಬೇಕಾದರೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಿಂತ ಹಿರಿಯ ಪ್ರಾಧಿಕಾರಿಯು, ಲಿಖಿತದಲ್ಲಿ ಕಾರಣಗಳನ್ನು ದಾಖಲಾತಿಸಿ ನಿರ್ದಿಷ್ಟವಾಗಿ ಅಧಿಕೃತಗೊಳಿಸಬೇಕು. ಆದರೆ ಸದರಿ ಪ್ರಕರಣದಲ್ಲಿ ಯಾವುದೇ ಕಾರಣಗಳನ್ನು ದಾಖಲಿಸದೇ ಅಲ್ಪಾವಧಿ ಟೆಂಡರ್ ಕರೆಯಲಾಗಿರುತ್ತದೆ.<br>3) ಕೆ.ಟಿ.ಪಿ.ಪಿ. ನಿಯಮ 2000ರ ನಿಯಮ 20(1) ರಲ್ಲಿ ಟೆಂಡರ್ ಅಂಗೀಕರಿಸುವ ಪ್ರಾಧಿಕಾರಿಯು, ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಲು, ಟೆಂಡರಗಳನ್ನು ತೆರೆಯುವ ಬಗ್ಗೆ ಮೇಲ್ವಿಚಾರಣೆ ಮಾಡಲು, ಪ್ರಾರಂಭಿಕ ಪರೀಕ್ಷೆ ನಡೆಸಲು ಮತ್ತು ಸ್ವೀಕರಿಸಿದ ಟೆಂಡರಗಳ ಸವಿವರವಾದ ಮೌಲ್ಯಮಾಪನ ಮಾಡಲು ಮತ್ತು ಟೆಂಡರ್ ಅಂಗೀಕರಿಸುವ ಪ್ರಾಧಿಕಾರದ ಪರಿಗಣನೆಗಾಗಿ ಮೌಲ್ಯಮಾಪನ ವರದಿಯನ್ನು ಸಿದ್ಧಪಡಿಸಲು, ತಾನು ಸೂಕ್ತ ಎಂದು ಭಾವಿಸುವ ಅಂಥ ಅಧಿಕಾರಿಗಳನ್ನು ಒಳಗೊಂಡು ಒಂದು ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಬಹುದು ಎಂದು ತಿಳಿಸಲಾಗಿರುತ್ತದೆ. ಆದರೆ ಸದರಿ ಪ್ರಕರಣದಲ್ಲಿ ಟೆಂಡರ್ ಪರಿಶೀಲನಾ ಸಮಿತಿ ರಚನೆ ಮಾಡದೇ ಕುಲಸಚಿವರು ಹಾಗೂ ಯೋಜನಾಧಿಕಾರಿಗಳು ಮಾತ್ರ ಪರಿಶೀಲಿಸಿ ಸದರಿ ನಿಯಮದ ಉಲ್ಲಂಘನೆ ಮಾಡಿರುತ್ತಾರೆ.<br>4) ಕೆ.ಟಿ.ಪಿ.ಪಿ. ನಿಯಮ 2000ದ ನಿಯಮ 8 ರನ್ವಯ 10ನೇ ನಿಯಮದ ಉಪಬಂಧಗಳಿಗೆ ಒಳಪಟ್ಟು, ಟೆಂಡರ್‌ಗಳನ್ನು ಆಹ್ವಾನಿಸುವ ನೋಟಿಸು ಮತ್ತು ಟೆಂಡರಗಳ ಮೇಲಿನ ತೀರ್ಮಾನಗಳನ್ನು ಟೆಂಡರನ್ನು ಆಹ್ವಾನಿಸುವ ಪ್ರಾಧಿಕಾರದ ಕೇಂದ್ರ ಸ್ಥಾನವು ಇರುವ ಜಿಲ್ಲೆಯ ಜಿಲ್ಲಾ ಟೆಂಡರ್ ಬುಲೆಟಿನ್ನಿನಲ್ಲಿ ಪ್ರಕಟಿಸತಕ್ಕದ್ದು ಎಂದಿರುತ್ತದೆ. ಆದರೆ ಈ ಕುರಿತು ಟೆಂಡರ್ | 9. EPF, ESI & GST ಪಾವತಿಸಿದ ಬಿಲ್ಲುಗಳನ್ನು ಸಲ್ಲಿಸಿದ್ದಾರೆ. ಆ ಆಧಾರದ ಮೇಲೆ ಗುತ್ತಿಗೆದಾರರಿಗೆ ಪಾವತಿಸಲಾಗಿದೆ.<br>ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

ಅಧಿಸೂಚನೆಯನ್ನು ಜಿಲ್ಲಾ ಬುಲೆಟಿನ್ನಿನಲ್ಲಿ ಪ್ರಕಟಗೊಂಡ ಪ್ರತಿ ಲೆಕ್ಕಪರಿಶೋಧನೆಗೆ ಸಲ್ಲಿಸಿರುವುದಿಲ್ಲ.

5) ಕೆ.ಟಿ.ಪಿ.ಪಿ. ಆ್ಯಕ್ಟ್‌ನ ನಿಯಮ 28HITT clause 25.5 ಮತ್ತು clause 44 ರನ್ವಯ ಟೆಂಡರ್ ಮೌಲ್ಯದ ಕನಿಷ್ಟ 5% ಭದ್ರತಾ ಠೇವಣಿಯನ್ನು (Security Deposit) ಪಡೆಯಬೇಕಾಗಿರುತ್ತದೆ. ಸದರಿ ಟೆಂಡರ್‌ನ ಅಂದಾಜು ಮೌಲ್ಯವು ರೂ.36,25,728/–ಗಳಿಗೆ ಶೇ.5 ರಂತೆ ರೂ.1,81,286/–ಗಳ ಭದ್ರತಾ ಠೇವಣಿಯು ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್ ಇವರಿಂದ ಪಡೆಯಬೇಕಾಗಿರುತ್ತದೆ. ಸದರಿ ಭದ್ರತಾ ಠೇವಣಿಯನ್ನು ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್ ಇವರಿಂದ ವಸೂಲಿಸಲು ಸೂಚಿಸಿದೆ.

6) ತಾಂತ್ರಿಕ ಬಿಡ್‌ನ್ನು ಸಲ್ಲಿಸಲಾದ 8 ಜನ ಬಿಡ್‌ದಾರರಲ್ಲಿ 7 ಜನ/ಏಜೆನ್ಸಿಯವರಿಗೆ ಆರ್ಥಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿರುತ್ತದೆ. ಸದರಿ 7 ಏಜೆನ್ಸಿಗಳಲ್ಲಿ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್ ಇವರು L-3 ಬಿಡ್ ದಾರರಾಗಿದ್ದು, L-1 ಮತ್ತು L-2 ಏಜೆನ್ಸಿಯವರು ಸಲ್ಲಿಸಲಾದ ದರಗಳನ್ನು ಪರಿಗಣಿಸದೇ L-3 ಏಜೆನ್ಸಿ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೆಸ್, ಕಲಬುರಗಿ ಇವರಿಗೆ ಯಾವ ಆಧಾರದ ಮೇಲೆ ಅಂತಿಮಗೊಳಿಸಲಾಗಿದೆ ಎಂದು ಸ್ಪಷ್ಟೀಕರಣ ನೀಡುವುದು.

ಮುಂದುವರೆದಂತೆ, L-1, L-2 & L-3 ಏಜೆನ್ಸಿಯವರು ಆರ್ಥಿಕ ಬಿಡ್‌ನಲ್ಲಿ ಸಲ್ಲಿಸಿದ ದರದ ವಿವರ ಈ ಕೆಳಗಿನಂತಿದೆ.

| | | |
|---|---|---|
| 1 | Vinod C Jumnal (L1)<br>(Jai Javan Security manpower & allied Services | 2,97,123<br>(14,856.15X20 ಜನ) |
| 2 | G Force Security and allied Services | 2,97,121.20 |
| 3 | Koushalya Security Services, Kalaburagi | 2,97,121.15 |

ಮೇಲೆ ವಿವರಿಸಿದಂತೆ L-1, L-2 ಏಜೆನ್ಸಿಯವರು ಸಲ್ಲಿಸಿದ ದರಗಳಿಗೆ ಒಪ್ಪದೇ L-3 ಏಜೆನ್ಸಿಯವರು ಸಲ್ಲಿಸಿದ ದರಗಳಿಗೆ ಒಪ್ಪಿ, ಸದರಿ ದರದಂತೆ 2019–20ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿದ ಬಿಲ್ಲುಗಳ ಮೊತ್ತದ ವಿವರ ಈ ಕೆಳಗಿನಂತಿದೆ.

| ಕ್ರಸಂ | ಮಾಹೆ | L3 ದರದಂತೆ ಪಾವತಿಯಾದ ಮೊತ್ತ | L2 ದರದಂತೆ ಪಾವತಿಮಾಡಬೇಕಾದ ಮೊತ್ತ | ವ್ಯತ್ಯಾಸ |
|---|---|---|---|---|
| 1 | 3/2019 | 2,97,121 | 2,97,121.20 | – |
| 2 | 4/2019 | 3,02,523 | 2,97,121.20 | 5,401.80 |
| 3 | 5/2019 | 3,02,523 | 2,97,121.20 | 5,401.80 |
| 4 | 6/2019 | 3,02,523 | 2,97,121.20 | 5,401.80 |
| 5 | 7/2019 | 3,02,523 | 2,97,121.20 | 5,401.80 |
| 6 | 8/2019 | 3,02,523 | 2,97,121.20 | 5,401.80 |
| 7 | 9/2019 | 3,02,523 | 2,97,121.20 | 5,401.80 |
| 8 | 10/2019 | 3,02,523 | 2,97,121.20 | 5,401.80 |
| 9 | 11/2019 | 3,02,523 | 2,97,121.20 | 5,401.80 |
| 10 | 12/2019 | 3,02,523 | 2,97,121.20 | 5,401.80 |
| | **ಒಟ್ಟು** | **30,19,828** | **29,71,212** | **48,616.20** |

ಹೆಚ್ಚುವರಿಯಾಗಿ ಪಾವತಿಸಿದ ಮೊತ್ತ **ರೂ.48,616/–ಗಳನ್ನು ಸಂಬಂಧಪಟ್ಟ ಏಜೆನ್ಸಿಯವರಿಂದ ವಸೂಲಿಸಲು ಸೂಚಿಸಿದೆ.**

7) ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸಸ್, ಕಲಬುರಗಿ ಇವರೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದ ಕರಾರು ಪತ್ರದಲ್ಲಿ Estimate Amount (ಅಂದಾಜು ಮೌಲ್ಯ), ಒಪ್ಪಂದದ ಮೊತ್ತ (Agreement Amount) ಹಾಗೂ ಒಪ್ಪಂದದ ಅವಧಿಯು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಇರುತ್ತದೆ ಎನ್ನುವ ಬಗ್ಗೆ ಯಾವುದೇ ಮಾಹಿತಿಯನ್ನು ನಮೂದಿಸದೇ ಅಪೂರ್ಣವಾದ ಒಪ್ಪಂದ ಮಾಡಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

8) 2019–20ನೇ ಸಾಲಿನಲ್ಲಿ ಸದರಿ ಏಜೆನ್ಸಿಯವರಿಗೆ ಪಾವತಿ ಮಾಡಲಾದ ಬಿಲ್ಲುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ತಿಂಗಳು | ಚೆಕ್ ಸಂಖ್ಯೆ | ಮೊತ್ತ |
|---|---|---|---|
| 1 | 03/2019 | 0120155 20-06-2019 | 2,97,121 |
| 2 | 04, 05, 06/ 2019 | 123677 05-09-2019 | 9,07,569 |
| 3 | 07, 08/2019 | 125580 26-10-2019 | 6,05,046 |
| 4 | 09, 10, 11, 12/ 2019 | 131175 26-03-2020 | 12,10,092 |
| | | **ಒಟ್ಟು** | **30,19,828** |

ಮೇಲೆ ವಿವರಿಸಿದಂತೆ ಮೆ॥ ಕೌಶಲ್ಯ ಸೆಕ್ಯೂರಿಟಿ ಸರ್ವಿಸೀಸ್ ಕಲಬುರಗಿಯವರು ಸ್ವಚ್ಛತೆಗಾರರ ಸೇವೆ ಒದಗಿಸಿದಕ್ಕೆ ಪ್ರತಿ ತಿಂಗಳು TIN/GST No. ಹಾಗೂ ಬಿಲ್ಲಿನ ಕ್ರಮ ಸಂಖ್ಯೆ ಹೊಂದಿರುವ ಬಿಲ್ಲುಗಳನ್ನು ಸಲ್ಲಿಸದೇ ಏಜೆನ್ಸಿಯ Letter Padನಲ್ಲಿ ಬಿಲ್ಲಿನ ಮೊತ್ತವನ್ನು ನಮೂದಿಸಿ ಪಾವತಿಗಾಗಿ ಸಲ್ಲಿಸಿದ್ದು, ಸದರಿ Letter Padನಲ್ಲಿ ಪಾವತಿಗಾಗಿ ಸಲ್ಲಿಸಿರುವ ಮೊತ್ತಕ್ಕೆ ವಿಶ್ವವಿದ್ಯಾಲಯದಿಂದ ಪಾವತಿ ಮಾಡಲಾಗಿರುತ್ತದೆ. ಕಾರಣ ಅಧಿಕೃತವಾದ ಬಿಲ್ಲನ್ನು ಪಡೆಯದೇ ಪಾವತಿಸಿರುವುದಕ್ಕೆ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

ಅಲ್ಲದೇ ಸದರಿ Letter Pad/Invoiceನಲ್ಲಿ ಪಾವತಿಗಾಗಿ ಸಲ್ಲಿಸಿರುವ ಮೊತ್ತದಲ್ಲಿ EPF, ESI ಸೇವಾ ತೆರಿಗೆ, ಸೇವಾ ಶುಲ್ಕ ಹಾಗೂ GST ಮೊತ್ತ ಇತ್ಯಾದಿಗಳ ಯಾವುದೇ ಮಾಹಿತಿಯನ್ನು ಏಜೆನ್ಸಿಯವರು ನಮೂದಿಸಿರುವುದಿಲ್ಲ. ಏಜೆನ್ಸಿಯವರು ಸಲ್ಲಿಸಿರುವ ಅನಧಿಕೃತ ಬಿಲ್ಲುಗಳಲ್ಲಿ ಸಾಕಷ್ಟು ನ್ಯೂನ್ಯತೆಗಳಿದ್ದರೂ ಸಹ ವಿಶ್ವವಿದ್ಯಾಲಯದಿಂದ ಪಾವತಿ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

9) ಹೊರಮೂಲ ಸೇವಾ ಒದಗಿಸುವ ಸಂಸ್ಥೆಯವರು, ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಒದಗಿಸಿದ ಸೇವೆಗಾಗಿ ಸಲ್ಲಿಸಿದ ಬಿಲ್‌ಗಳ ಜೊತೆಗೆ EPF, ESI & GST ಪಾವತಿಸಿದ ಬಿಲ್ಲುಗಳನ್ನು ಲಗತ್ತಿಸಿರುತ್ತಾರೆ. ಪಾವತಿಸಿದ ಏಜೆನ್ಸಿಯವರು ಅವರು ಪಾವತಿಸಿದ ಒಟ್ಟು EPF, ESI ವಂತಿಕೆಯ ರಸೀದಿ ಸಲ್ಲಿಸಿರುತ್ತಾರೆ. ಆದರೆ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಕೆಲಸ ನಿರ್ವಹಿಸಿದ

<table>
<tr>
<td></td>
<td>ಸಿಬ್ಬಂದಿಗಳ ಹೆಸರು/ಖಾತೆ/ವಂತಿಗೆ ಮೊತ್ತದ ವಿವರ ಇರುವುದಿಲ್ಲ. ಇದರಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿಗಳ ಖಾತೆಗೆ EPF, ESI ಮೊತ್ತ ಜಮಾ ಆಗಿರುವ ಬಗ್ಗೆ ತಿಳಿದುಬಂದಿರುವುದಿಲ್ಲ.<br>ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:70 ದಿನಾಂಕ:10–12–2021 ರಂದು ನೀಡಲಾಗಿದೆ.ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಪಾವತಿಯಾದ ಒಟ್ಟು ಮೊತ್ತ ರೂ.30,19,828/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.1,81,286 + 48,616 = 2,29,902/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.</td>
<td></td>
<td></td>
</tr>
<tr>
<td>21</td>
<td>ದರಪಟ್ಟಿ ಕರೆಯದೇ ನೇರವಾಗಿ ಸಾಮಗ್ರಿಗಳನ್ನು ಖರೀದಿ ಮಾಡಿರುವ ಬಗ್ಗೆ.<br>ನ್ಯಾಕ್ ಸಮಿತಿ ಭೇಟಿ ನೀಡಿದ ಹಿನ್ನೆಲೆಯಲ್ಲಿ ವಿಡಿಯೋ ಮತ್ತು ಸ್ಟಿಲ್ ಕ್ಯಾಮರಗಳಿಗೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಖರೀದಿಸುವ ಸಲುವಾಗಿ ಡಾ॥ ಎ. ವೆಂಕಟೇಶ (ಉಪಕುಲಸಚಿವರಿಗೆ) ಚೆಕ್ ಸಂಖ್ಯೆ 127559ರ ಮೂಲಕ ದಿನಾಂಕ:30–11–2019ರಂದು ರೂ.76,500/–ಗಳನ್ನು ಮುಂಗಡ ನೀಡಿರುತ್ತಾರೆ. ಸದರಿ ಮುಂಗಡದಲ್ಲಿ ರೂ.76,267/–ಗಳನ್ನು ಖರ್ಚು ಮಾಡಿ ಉಳಿದ ಮೊತ್ತ ರೂ.233/–ಗಳನ್ನು ದಿನಾಂಕ:04–01–2020 ರಂದು ಹಿಂತಿರುಗಿಸಿ ಜಮೆ ಮಾಡಿರುತ್ತಾರೆ.<br>ಖರ್ಚಾದ ಮೊತ್ತ ರೂ.76,267/–ಗಳ ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ ಸಂ</th><th>ವಿವರ</th><th>ಏಜೆನ್ಸಿ ಹೆಸರು</th><th>ಬಿಲ್ ಸಂಖ್ಯೆ ದಿನಾಂಕ</th><th>ಪಾವತಿಯಾದ ಮೊತ್ತ</th></tr>
<tr><td>01</td><td>Photo sheet, printing, Lamination & framing</td><td>ಸುರೇಶ ಪ್ರೇಮಾ ಹೊಸಪೇಟೆ</td><td>165<br>15–12–2019</td><td>17,995=00</td></tr>
<tr><td>02</td><td>Album pad & Bag 64GB pendrive Toshiba</td><td>Vardhaman Infotech Hospete</td><td>1297<br>02–01–2020</td><td>9,600=00</td></tr>
<tr><td>03</td><td>Hard disk, mouse pad, Bag Toshiba</td><td>Vardhaman Infotech Hospete</td><td>1298<br>02–01–2020</td><td>7,470=00</td></tr>
<tr><td>04</td><td>Camara Bag, video battery</td><td>Foto world Hospete</td><td>304<br>28–12–2019</td><td>8,224=00</td></tr>
<tr><td>05</td><td>SD card 32GB, Panasonic cell 4 Panasonic chip</td><td>“--”</td><td>305<br>31–12–2019</td><td>8,319=00</td></tr>
</table>
</td>
<td>ನಿಯಮಾನುಸಾರ ದರಪಟ್ಟಿಯನ್ನು ಕರೆದು ಕ್ರಮವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.</td>
<td></td>
</tr>
</table>

| | | | | |
|---|---|---|---|---|
| 06 | 32GB pendrive Toshiba | Shree Books & stationaries | 509<br>02-12-2019 | 7,200=00 |
| 07 | Video edit 2 video camera 3 days | Foto worldhospet | 302<br>25-12-2019 | 7499=00 |
| 08 | Dron camer Shot & editing | Foto world Hospet | 301<br>15-12-2019 | 9960=00 |
| | | | **ಒಟ್ಟು** | **76,267=00** |

ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ವಿವರ ಈ ಕೆಳಗಿನಂತಿರುತ್ತದೆ.

ಕ್ರಮಸಂಖ್ಯೆ 02 ರಿಂದ 06 ಸಾಮಗ್ರಿಗಳ ಮತ್ತು 07408ರ ಒಂದೇ ತರಹದ ಸಾಮಗ್ರಿಗಳಾಗಿರುವುದರಿಂದ, ಸದರಿ ಸಾಮಗ್ರಿಗಳನ್ನು ಕರ್ನಾಟಕ ಸಾದಿಲ್ವಾರು ವೆಚ್ಚದ ಕೈಪಿಡಿ 1958 ನಿಯಮಗಳ ನಿಯಮ 55(49)(ಎ) ರನ್ವಯ ಮತ್ತು ಸರ್ಕಾರದ ಆದೇಶ ಸಂಖ್ಯೆ:ಆಇ:01 ಟಿಸಿಇ 2019 ಬೆಂಗಳೂರು ದಿನಾಂಕ:04-05-2019 ಪ್ರಕಾರ ಕಛೇರಿಗಳಿಗೆ ಅಗತ್ಯವಿರುವ ಸಾಮಗ್ರಿಗಳನ್ನು ರೂ.10,000ಕ್ಕಿಂತ ಮೇಲ್ಪಟ್ಟು ಮತ್ತು ರೂ.1 ಲಕ್ಷಗಳವರೆಗಿನ ಖರೀದಿಯನ್ನು ಕಡ್ಡಾಯವಾಗಿ ದರಪಟ್ಟಿ ಕರೆಯುವುದರ ಮೂಲಕ ಖರೀದಿಸಬೇಕಾಗಿರುತ್ತದೆ.

ಆದರೆ ಸದರಿ ಪ್ರಕರಣದಲ್ಲಿ ದರಪಟ್ಟಿ ಕರೆಯುವುದನ್ನು ತಪ್ಪಿಸಲು ಬಿಲ್ಲುಗಳನ್ನು ವಿಭಜಿಸಿ ಸಾಮಗ್ರಿಗಳನ್ನು ಖರೀದಿಮಾಡಿ ಸದರಿ ನಿಯಮವನ್ನು ಉಲ್ಲಂಘಿಸಲಾಗಿದೆ.

ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:03 ದಿನಾಂಕ:22-09-2021** ನೀಡಲಾಗಿದೆ.ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಯುಜಿಸಿ ನ್ಯಾಕ್ ಕಮಿಟಿಯ ಭೇಟಿ ನೀಡುವ ಸಂದರ್ಭದಲ್ಲಿ ವಿಡಿಯೋ ಛಾಯಾಚಿತ್ರ ತೆಗೆಯಬೇಕಾಗಿರುವುದರಿಂದ ವಿಡಿಯೋ ಕ್ಯಾಮರಾಗಳಿಗೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸಲು ಕುಲಪತಿಯವರ ಅನುಮೋದನೆಯಂತೆ ಖರೀದಿಸಲಾಗಿದೆ ಎಂದು ನೀಡಿರುವ ಉತ್ತರ ಸಮಂಜಸವಲ್ಲದ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ. ರೂ.76,267/- ಗಳಲ್ಲಿ ಕ್ರ.ಸಂ. 01ರ ರೂ.17,995/- ಸಾಮಗ್ರಿಯನ್ನು ನಿಯಮಾನುಸಾರ ಖರೀದಿ ಮಾಡಿದ್ದು, ಸರಿ ಇದ್ದು, ಉಳಿದ ಸಾಮಗ್ರಿಗಳ ಖರೀದಿಯು (ಕ್ರ.ಸಂ 2 ರಿಂದ 8) ನಿಯಮಬಾಹಿರವಾಗಿರುವುದರಿಂದ ಸದರಿ ಬಿಲ್ಲುಗಳ ಪಾವತಿ **ಮೊತ್ತ ರೂ.58,272/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| | | | |
|---|---|---|---|
| **22** | **ದರಪಟ್ಟಿ ಕರೆಯದೇ ನೇರವಾಗಿ ಏಜೆನ್ಸಿಗಳಿಂದ ಸಾಮಗ್ರಿಗಳನ್ನು ಖರೀದಿ ಮಾಡಿರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕುಲಪತಿಗಳ ಆಪ್ತಕಾರ್ಯದರ್ಶಿಗಳ ವಿಭಾಗದ 2019-20ನೇ ಸಾಲಿನ ವೋಚರಗಳನ್ನು ಪರಿಶಿಲಿಸಿದಾಗ, ಕುಲಪತಿಗಳು ಗಣ್ಯರಿಗೆ ಭೇಟಿ ಸಲುವಾಗಿ, ಲೆಕ್ಕ ಶೀರ್ಷಿಕೆ 2010/052ರಲ್ಲಿ ಗಂಧದ ಹಾರ, ಶಾಲು, ನೆನಪಿನ ಕಾಣಿಕೆಗಳು ಮತ್ತು Dry Fruitsಗಳನ್ನು | 2019-20ನೇ ಸಾಲಿನಲ್ಲಿ ಮಾನ್ಯ ಕುಲಪತಿಗಳ ಆಪ್ತಶಾಖೆಯಿಂದ ಗಣ್ಯರ ಭೇಟಿ ಸಲುವಾಗಿ ಗಂಧದ ಹಾರ, ಶಾಲು, ನೆನಪಿನ ಕಾಣಿಕೆ ಮತ್ತು ಡ್ರೈಫ್ರೂಟ್ಸ್ ಇತ್ಯಾದಿಗಳನ್ನು ಶ್ರೀ ಬುಕ್ಸ್ ಸ್ಟೇಷನರಿ ಏಜೆನ್ಸಿಯಿಂದ | |

| | | | |
|---|---|---|---|
| | ವಿಶ್ವವಿದ್ಯಾಲಯ ಆವರಣದಲ್ಲಿರುವ ಶ್ರೀ ಬುಕ್ಸ್ ಮತ್ತು ಸ್ಟೇಷನರಿ ಏಜೆನ್ಸಿಯವರ (ಅಂಗಡಿಯಲ್ಲಿ) ಖರೀದಿಸಲಾಗಿದೆ. ಸದರಿ ಖರೀದಿಯ ವಿವರವನ್ನು ಅನುಬಂಧ–11ರಲ್ಲಿ ತೋರಿಸಲಾಗಿದೆ.<br>ಕರ್ನಾಟಕ ಸಾದಿಲ್ವಾರು ವೆಚ್ಚದ ಕೈಪಿಡಿ 1958 ನಿಯಮಗಳ ನಿಯಮ 55(49)ರ ರನ್ವಯ ಮತ್ತು ಸರಕಾರದ ಆದೇಶ ಸಂಖ್ಯೆ:ಆಇ.01.ಟಿ.ಸಿ.ಇ 2019 ದಿನಾಂಕ 04–05–2019 ರನ್ವಯ ಕಛೇರಿಗಳಿಗೆ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ರೂ.10,000/–ಗಳ ವರೆಗಿನ ಖರೀದಿಗೆ ಅವಕಾಶವಿರುತ್ತದೆ. ರೂ.10,000/– ಕ್ಕಿಂತ ಮೇಲ್ಪಟ್ಟು ಮತ್ತು 1.00 ಲಕ್ಷಗಳವರೆಗಿನ ಖರೀದಿಗಳನ್ನು ಕಡ್ಡಾಯವಾಗಿ ದರಪಟ್ಟಿ ಕರೆಯುವುದರ ಮೂಲಕ ಖರೀದಿಸಬೇಕಾಗಿರುತ್ತದೆ.<br>ಆದರೆ **ಅನುಬಂಧ–11ರಲ್ಲಿ** ತೋರಿಸಿದಂತೆ ರೂ.1,10,775=00ಗಳ ಸಾಮಗ್ರಿಗಳ ಬಿಲ್ಲುಗಳನ್ನು ವಿಭಜಿಸಿ ದರಪಟ್ಟಿ ಕರೆಯದೇ ನೇರವಾಗಿ ಏಜೆನ್ಸಿಯವರಿಂದ ಖರೀದಿಸಿ ಸದರಿ ನಿಯಮ ಮತ್ತು ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ.ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:28 ದಿನಾಂಕ:11–11–2021 ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. ಕಾರಣ ನಿಯಮಬಾಹಿರವಾಗಿ ಖರೀದಿಸಿದ ಒಟ್ಟು ಮೊತ್ತ **ರೂ.1,10,775/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಖರೀದಿಸಲಾಗಿದೆ. ಮಾನ್ಯ ಕುಲಪತಿ ಅವರು ನಾಡಿನ ಗಣ್ಯರ, ಗೌರವಾನ್ವಿತರ, ಮಂತ್ರಿ ಮಹೋದಯರ ಭೇಟಿ ಸಲುವಾಗಿ ವಿವಿಧ ದಿನಾಂಕಗಳಂದು ಭೇಟಿ ನೀಡಿರುತ್ತಾರೆ. ಈ ಖರೀದಿಯನ್ನು ಮಾನ್ಯ ಕುಲಪತಿ ಅವರು ಕನ್ನಡ ವಿಶ್ವವಿದ್ಯಾಲಯದಿಂದ ವಿವಿಧ ಕಾರ್ಯಕ್ರಮಗಳಿಗೆ ತೆರಳುವಾಗ ಪ್ರತ್ಯೇಕ ಕಾರ್ಯಕ್ರಮಗಳಿಗೆ ಅನುಸಾರವಾಗಿ ಖರೀದಿಸಲಾಗಿರುತ್ತದೆ.<br>ಇವುಗಳ ಖರೀದಿಯನ್ನು ಒಮ್ಮೆಗೆ ಖರೀದಿಸದೇ ಮಾನ್ಯ ಕುಲಪತಿ ಅವರು ಕಾರ್ಯಕ್ರಮ ನಿಗದಿಗೆ ಅನುಗುಣವಾಗಿ ತೆರಳುವಾಗ ಖರೀದಿ ಮಾಡಿರುವುದರಿಂದ ದರಪಟ್ಟಿ ಕರೆಯದೆ ಖರೀದಿಸಲಾಗಿರತ್ತದೆ.<br>ರೂ. 1,10,775/– ಗಳ ವೆಚ್ಚವನ್ನು 2019–20ನೇ ಸಾಲಿನ ಪೂರ್ಣ ಅವಧಿಯಲ್ಲಿ ಹಂತಹಂತವಾಗಿ ಖರೀದಿಸಿರುವುದರಿಂದ ಈ ಮೊತ್ತದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. | |
| **23** | **ಚರಿತ್ರೆ ವಿಭಾಗದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಪ್ರಯಾಣ ಭತ್ಯೆ ಕ್ಲೇಮ್ ಮಾಡಿರುವ ಬಗ್ಗೆ.**<br>2019–20ನೇ ಸಾಲಿನಲ್ಲಿ ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ ಡಾ॥ ವಿರೂಪಾಕ್ಷಿ ಪೂಜಾರಳ್ಳಿ ಇವರು ಸಾಂಸ್ಥಿಕ ಯೋಜನೆ ಕರ್ನಾಟಕ ಅಲಕ್ಷಿತ ಚಾರಿತ್ರಿಕ ಅಧ್ಯಯನ ಯೋಜನೆ ಮತ್ತು ವಿಜಯನಗರ ಕಾಲದ ರಾಜನೀತಿ ಚಾರಿತ್ರಿಕ ಅವಲೋಕನ ಎಂಬ ವೈಯುಕ್ತಿಕ ಯೋಜನೆ ಅಡಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಕರ್ನಾಟಕದ ವಿವಿಧ ಜಿಲ್ಲೆ ಹಾಗೂ ಗ್ರಾಮಗಳಿಗೆ ಭೇಟಿ ನೀಡಿ ಪ್ರಯಾಣ ಮಾಡಿದ್ದಕ್ಕೆ, ಪ್ರಯಾಣ ಭತ್ಯೆ ಬಿಲ್‌ನ್ನು ಕ್ಲೇಮ್ ಮಾಡಿರುತ್ತಾರೆ. ವಿವರ ಈ ಕೆಳಗಿನಂತಿದೆ. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| ಕ್ರ ಸಂ | ಲೆಕ್ಕ ಶೀರ್ಷಿಕೆ | ಚೆಕ್ ಸಂಖ್ಯೆ & ದಿನಾಂಕ | TA ಬಿಲ್‌ನ ಮೊತ್ತ | ಷರಾ |
|---|---|---|---|---|
| 01 | 1300 / 504 | 128160 / 20-01-2020 | 14,602=00 | ಸಾಂಸ್ಥಿಕ ಯೋಜನೆ ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿ ಸಂಗ್ರಹಿಸುವ ಕೆಲಸ. |
| 02 | 1300 / 504 | 131155 / 21-03-2020 | 10,590=00 | ಕರ್ನಾಟಕ ಅಲಕ್ಷಿತ ಸಂಸ್ಥಾನಗಳು, ಚಾರಿತ್ರಿಕ ಅಧ್ಯಯನ, ಸಾಂಸ್ಥಿಕ ಯೋಜನೆಗೆ ಕೈಗೊಂಡ ಕ್ಷೇತ್ರಕಾರ್ಯ |
| 03 | 1300 / 503 | 131155 / 20-03-2020 | 20,616=00 | ವಿಜಯನಗರ ಕಾಲದ ರಾಜನೀತಿ, ಚಾರಿತ್ರಿಕ ಅವಲೋಕನ ಎಂಬ ವೈಯುಕ್ತಿಕ ಯೋಜನೆ ಕೈಗೊಂಡ ಕ್ಷೇತ್ರಕಾರ್ಯ. |
| | | ಒಟ್ಟು | 45,808=00 | |

ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನತೆಗಳು ಈ ಕೆಳಕಂಡಂತಿವೆ.

01. ಸದರಿ ಸಾಂಸ್ಥಿಕ ಹಾಗೂ ವೈಯುಕ್ತಿಕ ಯೋಜನೆಗಳನ್ನು ಕೈಗೊಳ್ಳುವ ಮುನ್ನ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಕ್ಷಮ ಪ್ರಾಧಿಕಾರದವರಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದರೆ ಸದರಿ ಯೋಜನೆಗಳನ್ನು ಕ್ರಿಯಾಯೋಜನೆ ಅನುಮೋದನೆ ಪಡೆಯದೇ ಕೈಗೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.
02. ಸದರಿ ಕ್ಷೇತ್ರಕಾರ್ಯಕ್ಕೆ ಪ್ರವಾಸ ಕೈಗೊಂಡ ನಂತರ ಪ್ರವಾಸದ ದಿನಚರಿ (Tour dairy) ಪ್ರವಾಸದ ಕಾರ್ಯಕ್ರಮ (Tour programe) ಸಕ್ಷಮ ಪ್ರಾಧಿಕಾರದವರಿಂದ ಅನುಮೋದನೆ ಪಡೆಯದೇ ನೇರವಾಗಿ ಪ್ರವಾಸ ಭತ್ಯೆ ಬಿಲ್ಲನ್ನು ಕ್ಲೇಮ್ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.
03. ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಅಧಿಸೂಚನೆಯ ಪತ್ರ ಸಂಖ್ಯೆ:ಕವಿಹಂ: ಕುಸ:ವಾಹನ ದರ:2012-13 ದಿನಾಂಕ:06-06-2012ರನ್ವಯ ಯೋಜನೆಗಳ ಕಾರ್ಯ ಕ್ಷೇತ್ರಕಾರ್ಯಕ್ಕಾಗಿ, ವಿಶ್ವವಿದ್ಯಾಲಯದ ಕೆಲಸ ಕಾರ್ಯಗಳಿಗಾಗಿ ತೆರಳುವ ಅಧ್ಯಾಪಕರು/

| | | | |
|---|---|---|---|
| | ಅಧಿಕಾರಿಗಳಿಗೆ ವೈಯುಕ್ತಿಕ ವಾಹನ ಆಗಿದ್ದಲ್ಲಿ ಪ್ರತಿ ಕಿ.ಮೀ.ಗೆ ರೂ.6/- ರಂತೆ ಹಾಗೂ ಖಾಸಗಿ ಬಾಡಿಗೆ ವಾಹನ ಆಗಿದ್ದಲ್ಲಿ ಪ್ರತಿ ಕಿ.ಮೀ.ಗೆ ರೂ.7/- ರಂತೆ ದರಗಳನ್ನು ದಿನಾಂಕ:23-04-2012 ರಂದು ಜರುಗಿದ 143ನೇಯ ಕಾರ್ಯಕಾರಿ ಸಮಿತಿಯಲ್ಲಿ ದರ ಪರಿಷ್ಕರಿಸಿ ಮಂಜೂರು ಮಾಡಲಾಗಿರುತ್ತದೆ.<br>ಆದರೆ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮಗಳ ನಿಯಮ 20ರನ್ವಯ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನಿಗದಿಯಾಗಿರುವ ವೇತನ ಶ್ರೇಣಿಯನ್ನು ವಿಶ್ವವಿದ್ಯಾಲಯದ ಅನುದಾನ ಆಯೋಗವು ನಿಗದಿಪಡಿಸಿರುವಂತೆ ಮತ್ತು ಕರ್ನಾಟಕ ರಾಜ್ಯ ಸರ್ಕಾರವು ಅಂಗೀಕರಿಸಿರುವಂತೆ ಕಾರ್ಯಕಾರಿ ಸಮಿತಿಯು ಪರಿಷ್ಕರಿಸಬಹುದು. ಅದರಂತೆ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಮತ್ತಿತರ ಭತ್ಯೆಗಳು ಕಾಲ ಕಾಲಕ್ಕೆ ರಾಜ್ಯ ಸರ್ಕಾರವು ನಿಗದಿಪಡಿಸಿರುವಂತೆ ಇರುತ್ತದೆ ಎಂದು ನಿರ್ದೇಶಿಸಲಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ 449 ರಿಂದ 577 ರಲ್ಲಿ ಪ್ರಯಾಣ ಭತ್ಯೆ ಪಾವತಿ ಮಾಡಬೇಕಾದಲ್ಲಿ, ಸರ್ಕಾರಿ ನೌಕರನು ವರ್ಗಾವಣೆಯಾದಾಗ ಹೊರತುಪಡಿಸಿ, ಸ್ವಂತ ಕಾರಿನಲ್ಲಿ ಇತರೆ ಸಂದರ್ಭಗಳಲ್ಲಿ ಪ್ರಯಾಣ ಮಾಡಿದಾಗ ಪ್ರಯಾಣ ಭತ್ಯೆ ಪಾವತಿಸಲು ಅವಕಾಶವಿರುವುದಿಲ್ಲ.<br>ಸದರಿ ಪ್ರಕರಣದಲ್ಲಿ ಪ್ರತಿ ಕಿ.ಮೀ.ಗೆ ರೂ.6/- ರಂತೆ ಪ್ರವಾಸ ಭತ್ಯೆ ಬಿಲ್ಲನ್ನು ಸಿದ್ದಪಡಿಸಿ ಕ್ಲೇಮ್ ಮಾಡಿದ್ದು ಮೇಲೆ ವಿವರಿಸಿದ ವಿಶ್ವವಿದ್ಯಾಲಯದ ನಿಯಮಗಳ ಹಾಗೂ ಕೆ.ಸಿ.ಎಸ್.ಆರ್. ನಿಯಮಗಳ ಉಲ್ಲಂಘನೆ ಮಾಡಲಾಗಿದೆ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:10 ದಿನಾಂಕ: 29-09-2021 ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಜಗತ್ತಿನಾದ್ಯಂತ ಸಾಕಷ್ಟು ಸಾವು-ನೋವುಗಳಾಗಿರುತ್ತವೆ. ಕಾರಣ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಸ್ವಂತ ವಾಹನವನ್ನು ಬಳಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಸದರಿ ಪ್ರಯಾಣದ ದಾಖಲೆಗಳು 2016-17ನೇ ಸಾಲಿಗೆ ಸಂಬಂಧಿಸಿರುವುದರಿಂದ ನೀಡಿದ ಉತ್ತರವು ಸಮಂಜಸವಲ್ಲದ ಕಾರಣ ಕಂಡಿಕೆಯನ್ನು ಮುಂದುವರಿಸಿದೆ. ಪ್ರಯುಕ್ತ ಮೇಲಿನ ಎಲ್ಲಾ ಅಂಶಗಳಿಗೆ ಸೂಕ್ತವಾದ ದಾಖಲೆಗಳೊಂದಿಗೆ ಸ್ಪಷ್ಟೀಕರಣ ನೀಡಲು ಸೂಚಿಸಿದೆ. ಅಲ್ಲಿಯವರೆಗೂ ಪಾವತಿಯಾದ **ಒಟ್ಟು ಮೊತ್ತ ರೂ.45,808/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **24** | **ವಿಚಾರ ಸಂಕಿರಣಕ್ಕೆ ಭಾಗವಹಿಸಿದ ಸಂಶೋಧನಾ ವಿದ್ಯಾರ್ಥಿಗಳ ಪ್ರಯಾಣ ವೆಚ್ಚ ಮತ್ತು ಊಟದ ವೆಚ್ಚ ಪಾವತಿಸಿರುವ ಬಗ್ಗೆ.**<br>**ಉಲ್ಲೇಖ: cheque no 128605 ದಿನಾಂಕ 15-02-2020 ವೋಚರ್ ನಂ.78. ಪುಟ ಸಂ-07. ಕ್ರಮ ಸಂಖ್ಯೆ 41.** | ಕನ್ನಡ ಭಾಷಾಧ್ಯಯನ ವಿಭಾಗವು ದಾವಣಗೆರೆಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಸಹಯೋಗದೊಂದಿಗೆ ದಿನಾಂಕ: 28.02.2020ರಂದು ಕನ್ನಡ ಬೆಳವಣಿಗೆ ಸವಾಲುಗಳು ಮತ್ತು ಸಾಧ್ಯತೆಗಳು ಎನ್ನುವ ವಿಷಯ ಕುರಿತು ವಿಶ್ವವಿದ್ಯಾಲಯದ | |

| | | | |
|---|---|---|---|
| | ಕನ್ನಡ ಭಾಷಾಧ್ಯಯನ ವಿಭಾಗದ ವತಿಯಿಂದ ದಿನಾಂಕ:28-02-2020 ರಂದು ದಾವಣಗೆರೆಯಲ್ಲಿ ಕನ್ನಡ ಬೆಳವಣಿಗೆ ಸವಾಲುಗಳು ಮತ್ತು ಸಾಧ್ಯತೆಗಳು ವಿಷಯದ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ 25 ಸಂಶೋಧನಾ ವಿದ್ಯಾರ್ಥಿಗಳಿಗೆ ತಲಾ ರೂ.500/-ರಂತೆ ರೂ.12,500=00 ಪ್ರಯಾಣ ವೆಚ್ಚ, ಬೆಳಗಿನ ತಿಂಡಿಯ ವೆಚ್ಚ ರೂ.1,680=00 ಮಧ್ಯಾಹ್ನ ಊಟದ ವೆಚ್ಚ ರೂ.7,200=00 ಮತ್ತು ಅತಿಥಿಗಳಿಗೆ ಊಟದ ವೆಚ್ಚ ರೂ.2,000=00 ಪಾವತಿಸಿರುತ್ತಾರೆ.<br>ವಿಚಾರ ಸಂಕಿರಣಗಳಿಗೆ ಭಾಗವಹಿಸುವುದು ಸಂಶೋಧನಾ & ಅಧ್ಯಯನದ ಒಂದು ಭಾಗವಾಗಿರುತ್ತದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಯಾಣ ವೆಚ್ಚ ಮತ್ತು ಊಟದ ವೆಚ್ಚ ನೀಡುವುದಕ್ಕೆ ವಿಶ್ವವಿದ್ಯಾಲಯದ ಯಾವುದೇ ಆದೇಶಗಳಿರುವುದಿಲ್ಲ. ಇದು ನಿಯಮಬಾಹಿರವಾಗಿರುತ್ತದೆ.<br>ವಿಚಾರ ಸಂಕಿರಣಕ್ಕೆ ಹಾಜರಾದ ಅತಿಥಿಗಳಿಗೆ ಪ್ರಯಾಣ ಭತ್ಯೆ ಮತ್ತು ರೂ.500=00 ಸಭಾಭತ್ಯೆ ನೀಡಲಾಗಿರುತ್ತದೆ. ಆದ್ಯಾಗಿಯೂ ರೂ.2,000=00 ಊಟಕ್ಕಾಗಿ ಖರ್ಚು ಮಾಡಿರುವುದು ಲೆಕ್ಕ ತನಿಖೆಯಲ್ಲಿ ಆಕ್ಷೇಪಿಸಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:14 ದಿನಾಂಕ:01-10-2021** ನೀಡಲಾಗಿದೆ. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವಿಶ್ವವಿದ್ಯಾಲಯದ ಉದ್ದೇಶಗಳಿಗೆ ಪೂರಕವಾಗಿ ವಿಭಾಗ ಸಂಶೋಧನಾ ವಿದ್ಯಾರ್ಥಿಗಳನ್ನು ವಿಷಯ ತಜ್ಞರೆಂದು ಪರಿಭಾವಿಸಿ ಖರ್ಚು ಮಾಡಿರುವುದೇ ಎಂದು ತಿಳಿಸಿದ್ದಾರೆ ಆದರೆ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಯಾಣ ವೆಚ್ಚ ಮತ್ತು ಊಟದ ವೆಚ್ಚ ನೀಡುವುದಕ್ಕೆ ವಿಶ್ವವಿದ್ಯಾಲಯದ ಯಾವುದೇ ಆದೇಶಗಳಿರುವುದಿಲ್ಲ ಇದು ನಿಯಮಬಾಹಿರವಾಗಿರುತ್ತದೆ. ಪ್ರಯುಕ್ತ ಕಂಡಿಕೆಯನ್ನು ಮುಂದುವರಿಸಿದೆ. ಪಾವತಿಯಾದ ಮೊತ್ತ ರೂ.**23,380/-** (ರೂ.12,500+1,680+7,200+2000) **ಗಳನ್ನು ವಸೂಲಾತಿಯಲ್ಲಿಡಲಾಗಿದೆ**. | ಉದ್ದೇಶಗಳಿಗನುಗುಣವಾಗಿ ವಿಚಾರ ಸಂಕಿರಣ ನಡೆಸಲಾಗಿದೆ. ಸದರಿ ವಿಚಾರ ಸಂಕಿರಣದಲ್ಲಿ ನಾಡಿನ ಅನೇಕ ಹಿರಿಯ ವಿದ್ವಾಂಸರು ವಿವಿಧ ಗೋಷ್ಠಿಗಳಲ್ಲಿ ಭಗವಹಿಸಿದ್ದರು. ಇದೇ ವಿಷಯದಲ್ಲಿ ಅಧ್ಯಯನ ಕೈಗೊಂಡಿರುವ ಸಂಶೋಧಕರನ್ನು ವಿಷಯ ತಜ್ಞರೆಂದು ಪರಿಭವಿಸಬೇಕೆಂದು ಮತ್ತು ಸಂಶೋಧನಾರ್ಥಿಗಳ ಅಧ್ಯಯನಕ್ಕೆ ಪೂರಕವಾದ ವಿಷಯವಾದ ಕಾರಣ ವಿಚಾರ ಸಂಕಿರಣದಲ್ಲಿ ಸಂವಾದಕರಾಗಿ ಭಾಗವಹಿಸಲು ವಿಭಾಗದ ಸಮಿತಿ ನಿರ್ಣಯಿಸಿದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರಿಂದ ಪೂರ್ವಾನುಮತಿ ಪಡೆದು ಆಯ್ಕೆಮಾಡಲಾಗಿದೆ. (ಮಾನ್ಯ ಕುಲಪತಿಯವರು ಒಪ್ಪಿಗೆ ನೀಡಿದ ಕರಡು ಪ್ರತಿ ಮತ್ತು ವಿಭಾಗದ ಸಮಿತಿಯ ನಿರ್ಣಯ ಪ್ರತಿ ಲಗತ್ತಿಸಿದೆ) ಹೀಗೆ ಭಾಗವಹಿಸಿದ ಸಂವಾದಕರಿಗೆ ಕನ್ನಡ ವಿಶ್ವವಿದ್ಯಾಲಯದಿಂದ ದಾವಣಗೆರೆಗೆ ಹೋಗಿ ಬರುವ ನಿಮಿತ್ತ ಕನಿಷ್ಠ ಮಟ್ಟದ ಪ್ರಯಾಣ ವೆಚ್ಚವಾಗಿ ಪ್ರತಿ ಸಂವಾದಕರಿಗೆ ರೂ. 500/-ಗಳಂತೆ ಒಟ್ಟು ರೂ. 12,500/-ಗಳನ್ನು ಊಟೋಪಚಾರಕ್ಕಾಗಿ ರೂ. 8,880/-ಗಳನ್ನು ಮತ್ತು ಮುಖ್ಯ ಅತಿಥಿಗಳು ವಿಭಾಗದ ಸದಸ್ಯರ ಊಟಕ್ಕಾಗಿ ರೂ. 2,000/-ಗಳನ್ನು ಪಾವತಿಸಲಾಗಿದೆ. ವಿಚಾರ ಸಂಕಿರಣದ ಯಶಸ್ಸಿಗಾಗಿ ಮಾನ್ಯ ಕುಲಪತಿಗಳ ಪೂರ್ವಾನುಮತಿ ಪಡೆದು ಸದುದ್ದೇಶಕ್ಕಾಗಿ ಬಳಸಿದ ಕಾರಣ ರೂ. 23,380/-ಗಳನ್ನು ವಸೂಲಾತಿಯಿಂದ ಕೈ ಬಿಡಬೇಕೆಂದು ಈ ಮೂಲಕ ಕೋರುತ್ತೇನೆ. | |
| **25** | **ಕ್ಲೇಮ್ ಮಾಡಲಾದ ಹೆಚ್ಚುವರಿ ಪ್ರಯಾಣ ಭತ್ಯೆಯನ್ನು ವಸೂಲಿಸುವ ಬಗ್ಗೆ.**<br>ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಅಧಿಸೂಚನೆಯ ಪತ್ರ ಸಂಖ್ಯೆ:ಕವಿಹಂ:ಕುಸ:ವಾಹನ ದರ:2012-2013 ದಿನಾಂಕ:06-06-2012 ರನ್ವಯ ಯೋಜನೆಗಳ ಕ್ಷೇತ್ರ | ಕೆ.ಸಿ.ಎಸ್.ಆರ್. ನಿಯಮ 451ರ ಪ್ರಕಾರ ಹಾಗೂ ಸಾರಿಗೆ ಇಲಾಖೆಯ ಆದೇಶದಂತೆ ಕ್ಲೇಮ್ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

ಕಾರ್ಯಕ್ಕಾಗಿ/ವಿಶ್ವವಿದ್ಯಾಲಯದ ಕೆಲಸ ಕಾರ್ಯಗಳಿಗಾಗಿ ತೆರಳುವ ಅಧ್ಯಾಪಕರು/ಅಧಿಕಾರಿಗಳಿಗೆ ವೈಯುಕ್ತಿಕ ವಾಹನ ಆಗಿದ್ದಲ್ಲಿ ಪ್ರತಿ ಕಿ.ಮಿ.ಗೆ ರೂ.06/–ರಂತೆ ಹಾಗೂ ಖಾಸಗಿ ಬಾಡಿಗೆ ವಾಹನವಾಗಿದ್ದಲ್ಲಿ ಪ್ರತಿ ಕಿ.ಮಿ.ಗೆ ರೂ.07/–ರಂತೆ ದರಗಳನ್ನು ದಿನಾಂಕ:01–06–2012 ರಿಂದ ಅನ್ವಯವಾಗುವಂತೆ ದಿನಾಂಕ23–04–2012 ರಂದು ಜರುಗಿದ 143ನೇ ಕಾರ್ಯಕಾರಿ ಸಮಿತಿಯಲ್ಲಿ ದರ ಪರಿಷ್ಕರಿಸಿ ಮಂಜೂರು ಮಾಡಲಾಗಿರುತ್ತದೆ.

ಆದರೆ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮಗಳ ನಿಯಮ 20 ರನ್ವಯ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನಿಗದಿಯಾಗಿರುವ ವೇತನ ಶ್ರೇಣಿಯನ್ನು ವಿಶ್ವವಿದ್ಯಾಲಯ ಅನುದಾನ ಆಯೋಗವು ನಿಗದಿಪಡಿಸಿರುವಂತೆ ಮತ್ತು ಕರ್ನಾಟಕ ರಾಜ್ಯ ಸರ್ಕಾರವು ಅಂಗೀಕರಿಸಿರುವಂತೆ ಕಾರ್ಯಕಾರಿ ಸಮಿತಿಯು ಪರಿಷ್ಕರಿಸಬಹುದು. ಅದರಂತೆ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಮತ್ತಿತರ ಭತ್ಯೆಗಳು ಕಾಲದಿಂದ ಕಾಲಕ್ಕೆ ರಾಜ್ಯ ಸರ್ಕಾರವು ನಿಗದಿಪಡಿಸಿರುವಂತೆ ಇರುತ್ತದೆ ಎಂದು ನಿರ್ದೇಶಿಸಲಾಗಿರುತ್ತದೆ. KCSR ನಿಯಮ 449 ರಿಂದ 577 ರಲ್ಲಿ ಪ್ರಯಾಣ ಭತ್ಯೆ ಪಾವತಿಮಾಡಬೇಕಾದಲ್ಲಿ ಸರ್ಕಾರಿ ನೌಕರನು ವರ್ಗಾವಣೆಯಾದಾಗ ಹೊರತುಪಡಿಸಿ, ಸ್ವಂತ ಕಾರಿನಲ್ಲಿ ಇತರೆ ಸಂದರ್ಭದಲ್ಲಿ ಪ್ರಯಾಣ ಮಾಡಿದಾಗ ಪ್ರಯಾಣ ಭತ್ಯೆ ಪಾವತಿಸಲು ಅವಕಾಶವಿರುವುದಿಲ್ಲ.

2019–20ನೇ ಸಾಲಿನ ಹೆಚ್ಚಿನ ಮೊತ್ತದ ಪ್ರಯಾಣ ಭತ್ಯೆಯ ವೋಚರ್‌ಗಳನ್ನು ಆಯ್ಕೆ ಮಾಡಿ Random ಆಗಿ ಪರಿಶೀಲಿಸಿದಾಗ ಪ್ರತಿ ಕಿ.ಮಿ.ಗೆ ರೂ.06/–ರಂತೆ ಪ್ರವಾಸ ಭತ್ಯೆ ಬಿಲ್ಲನ್ನು ಸಿದ್ದಪಡಿಸಿ ಕ್ಲೇಮ್ ಮಾಡಿದ್ದು ಮೇಲೆ ವಿವರಿಸಿದ ವಿಶ್ವವಿದ್ಯಾಲಯದ ನಿಯಮಗಳ ಹಾಗೂ KCSR ನಿಯಮಗಳು ಉಲ್ಲಂಘನೆ ಮಾಡಲಾಗಿದೆ.

ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ | ಪಾವತಿ ಮಾಡಬೇಕಾದ ಮೊತ್ತ | ಪಾವತಿಯಾದ ಮೊತ್ತ | ಹೆಚ್ಚುವರಿ ಪಾವತಿಯಾದ ವ್ಯತ್ಯಾಸದ ಮೊತ್ತ |
|---|---|---|---|
| 01 | **1,69,340.00** | **2,98,404.00** | **1,29,064.00** |

(ಅಧಿಕಾರಿ/ಸಿಬ್ಬಂದಿವಾರು ವಿವರವನ್ನು **ಅನುಬಂಧ–12ರಲ್ಲಿ** ನೀಡಲಾಗಿದೆ.) ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:30 ದಿನಾಂಕ:11–11–2021 ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಡಾ॥ ಎ.ಮೋಹನ ಕುಂಟಾರ್ ಪ್ರಾಧ್ಯಾಪಕರು ಭಾ.ಅ.ವಿ ಅವರ ಪ್ರಯಾಣ ಭತ್ಯೆಗೆ ಸಂಬಂಧಿಸಿದಂತೆ, ಕಿ.ಮೀ. ರೂ.6/– ರಂತೆ ವಿಶ್ವವಿದ್ಯಾಲಯದ ಆದೇಶದ ಹಿನ್ನೆಲೆಯಲ್ಲಿ "ಕ್ಲೇಮ್" ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ವಿಶ್ವವಿದ್ಯಾಲಯದ ನಿಯಮಗಳು ಹಾಗೂ ಕೆ.ಸಿ.ಎಸ್.ಆರ್. ನಿಯಮಗಳು ಉಲ್ಲಂಘನೆ ಮಾಡಿರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. ಆದ್ದರಿಂದ

| | | | |
|---|---|---|---|
| | **ಅನುಬಂಧ-12ರಲ್ಲಿ** ವಿವರಿಸಿದ ಪ್ರಕರಣಗಳಲ್ಲಿ ನಿಯಮನುಸಾರ ಪಡೆಯಬಹುದಾದ ಅರ್ಹ ಮೊತ್ತವನ್ನು ಲೆಕ್ಕ ಹಾಕಿ, ಸದರಿ ಮೊತ್ತದಲ್ಲಿ ಈಗಾಗಲೇ ಕ್ಲೇಮ್ ಮಾಡಿರುವ ಮೊತ್ತವನ್ನು ಕಳೆದಾಗ ಹೆಚ್ಚುವರಿಯಾಗಿ ಪಡೆಯಲಾಗಿರುವ ವ್ಯತ್ಯಾಸದ ಮೊತ್ತ **ರೂ. 1,29,064/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | | |
| **26** | **ಡಿಪ್ಲೋಮಾ ನಾಟಕ ಕಲೆ, ಎಂ.ಎ, ಪಿಹೆಚ್.ಡಿ. ಪರೀಕ್ಷೆ ನಡೆಸುವ ಸಂಬಂಧ ಹೆಚ್ಚುವರಿ ಪ್ರಯಾಣ ಭತ್ಯೆ ಮತ್ತು ನಿಯಮಬಾಹಿರವಾಗಿ ವಾಸ್ತವ್ಯಭತ್ಯೆ ಪಡೆದಿರುವ ಬಗ್ಗೆ.**<br>ಅಧ್ಯಯನಾಂಗವಿಭಾಗದಲ್ಲಿ ಎಂ.ಎ, ಪಿಹೆಚ್.ಡಿ. ನಾಟಕ ಕಲೆ ಡಿಪ್ಲೋಮಾ ಪರೀಕ್ಷೆ ನಡೆಸುವ ಸಂಬಂಧ ರೂ.87,000/- ಮುಂಗಡ ಹಣವನ್ನು ನಿರ್ದೇಶಕರು ಅಧ್ಯಯನಾಂಗ ಇವರಿಗೆ ಚೆಕ್ ಸಂಖ್ಯೆ: 119808 ದಿನಾಂಕ:08-09-2019ರ ಮೂಲಕ ನೀಡಲಾಗಿರುತ್ತದೆ. ಸದರಿಯವರು ರೂ.87,000=00ಗಳನ್ನು ಖರ್ಚು ಮಾಡಿ ಹೊಂದಾಣಿಕೆ ಬಿಲ್ಲುಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಪಾವತಿಯಲ್ಲಿ ಹೆಚ್ಚುವರಿ ಪ್ರಯಾಣಭತ್ಯೆ ಮತ್ತು ನಿಯಮಬಾಹಿರವಾಗಿ ವಾಸ್ತವ್ಯಭತ್ಯೆಯನ್ನು ನೀಡಲಾಗಿರುತ್ತದೆ. ವಿವರ ಅನುಬಂಧ-13ದಲ್ಲಿ ನೀಡಲಾಗಿದೆ.<br>ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಅಧಿಸೂಚನೆ ಪತ್ರ ಸಂಖ್ಯೆ:ಕವಿಹಂ:ಕುಸ:ವಾಹನದರ:2012-13 ದಿನಾಂಕ:06-06-2012 ರನ್ವಯ ಯೋಜನೆಗಳ ಕ್ಷೇತ್ರಕಾರ್ಯಕ್ಕಾಗಿ/ವಿಶ್ವವಿದ್ಯಾಲಯದ ಕೆಲಸ ಕಾರ್ಯಗಳಿಗಾಗಿ ತೆರಳುವ ಅಧ್ಯಾಪಕರು/ ಅಧಿಕಾರಿಗಳಿಗೆ ವೈಯುಕ್ತಿಕ ವಾಹನ ಆಗಿದ್ದಲ್ಲಿ ಪ್ರತಿ ಕಿ.ಮಿ.ಗೆ ರೂ.6/-ರಂತೆ ಹಾಗೂ ಖಾಸಗಿ ವಾಹನ ಆಗಿದ್ದಲ್ಲಿ ರೂ.7/- ರಂತೆ ದರಗಳನ್ನು ದಿನಾಂಕ:01-06-2012 ರಿಂದ ಅನ್ವಯವಾಗುವಂತೆ ದಿನಾಂಕ:23-04-2014 ರಂದು ಜರುಗಿದ 143ನೇ ಕಾರ್ಯಕಾರಿ ಸಮಿತಿಯಲ್ಲಿ ದರ ಪರಿಷ್ಕರಿಸಿ ಮಂಜೂರು ಮಾಡಲಾಗಿರುತ್ತದೆ.<br>ಆದರೆ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮಗಳ ನಿಯಮ 20 ರನ್ವಯ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನಿಗದಿಯಾಗಿರುವ ವೇತನ ಶ್ರೇಣಿಯನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ ನಿಗದಿಪಡಿಸಿರುವಂತೆ ಇರುತ್ತದೆ ಎಂದು ನಿರ್ದೇಶಿಸಲಾಗಿರುತ್ತದೆ. KCSR ನಿಯಮ 449 ರಿಂದ 577 ರಲ್ಲಿ ಪ್ರಯಾಣ ಭತ್ಯೆ ಪಾವತಿ ಮಾಡಬೇಕಾದಲ್ಲಿ ಸರ್ಕಾರಿ ನೌಕರನು ವರ್ಗಾವಣೆ ಹೊರತುಪಡಿಸಿ ಸ್ವಂತ ಕಾರಿನಲ್ಲಿ ಇತರೆ ಸಂದರ್ಭದಲ್ಲಿ ಪ್ರಯಾಣ ಮಾಡಿದಾಗ ಪ್ರಯಾಣ ಭತ್ಯೆ ಪಾವತಿಸಲು ಅವಕಾಶವಿರುವದಿಲ್ಲ. ಮೇಲಿನ ಪ್ರಕರಣದಲ್ಲಿ ಪ್ರತಿ ಕಿ.ಮೀಗೆ 6 ರಂತೆ ಪ್ರವಾಸ ಭತ್ಯೆ ಬಿಲ್‌ನ್ನು ಸಿದ್ದಪಡಿಸಿ ಕ್ಲೇಮ್ ಮಾಡಿದ್ದು ವಿಶ್ವವಿದ್ಯಾಲಯದ ನಿಯಮಗಳ ಹಾಗೂ KCSR ನಿಯಮಗಳ ಉಲ್ಲಂಘನೆ ಮಾಡಲಾಗಿರುತ್ತದೆ. | ಕೆ.ಸಿ.ಎಸ್.ಆರ್. ನಿಯಮ 451ರ ಪ್ರಕಾರ ಹಾಗೂ ಸಾರಿಗೆ ಇಲಾಖೆಯ ಆದೇಶದಂತೆ ಕ್ಲೇಮ್ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 60 ದಿನಾಂಕ: 03-12-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಸಮಂಜಸವಾದ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರಿಸಿದೆ. ಆದ್ದರಿಂದ ಅನುಬಂಧ-13ರಲ್ಲಿ ವಿವರಿಸಿದ ಪ್ರಕರಣಗಳಲ್ಲಿ ನಿಯಮಾನುಸಾರ ಪಡೆಯಬಹುದಾದ ಅರ್ಹ ಮೊತ್ತವನ್ನು ಲೆಕ್ಕಹಾಕಿ ಸದರಿ ಮೊತ್ತದಲ್ಲಿ ಈಗಾಗಲೇ ಕ್ಲೇಮ್ ಮಾಡಿರುವ ಮೊತ್ತವನ್ನು ಕಳೆದಾಗ ಹೆಚ್ಚುವರಿಯಾಗಿ ಪಡೆಯಲಾಗಿರುವ **(ಅನುಬಂಧ-13ರಲ್ಲಿ ವಿವರಿಸಿದಂತೆ)** ವ್ಯತ್ಯಾಸದ ಮೊತ್ತವನ್ನು **ರೂ.27,010/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | | |
| **27** | **ಸಭೆ/ಕಾರ್ಯಕ್ರಮಗಳಲ್ಲಿ ಊಟ ಮತ್ತು ಚಹಾಕ್ಕಾಗಿ ಅನಾವಶ್ಯಕ ವೆಚ್ಚ ಮಾಡಿರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯ ವಿವಿಧ ವಿಭಾಗಗಳಲ್ಲಿ ಪಿಹೆಚ್.ಡಿ. ಪ್ರಗತಿ ಪರಿಸೀಲನೆ ಸಭೆ ಪಿಹೆಚ್.ಡಿ. ಕೋರ್ಸಗಳಿಗಾಗಿ, ಪ್ರಶ್ನೆಪತ್ರಿಕೆ ಸಿದ್ದತೆ ಕಾರ್ಯಗಳಿಗಾಗಿ, ಪಿಹೆಚ್.ಡಿ.ಕೋರ್ಸನ ಮೌಖಿಕ ಪರೀಕ್ಷೆಗಾಗಿ ಪಿಹೆಚ್.ಡಿ. ಮಹಾಪ್ರಬಂಧದ ಪರಿಶೀಲನೆ ಸಭೆಗಾಗಿ, ಅಧ್ಯಯನ ಪೀಠಗಳಲ್ಲಿ, ಜಯಂತಿ ಕಾರ್ಯಕ್ರಮಗಳಿಗಾಗಿ ಮತ್ತು ಕೋರ್ಸ್‌ವರ್ಕ್‌ಗಾಗಿ ಆಗಮಿಸಿದ ವಿದ್ವಾಂಸಕರಿಗೆ ಊಟದ ವ್ಯವಸ್ಥೆಗಾಗಿ, ನ್ಯಾಕ್ ಕಮಿಟಿ ಭೇಟಿ ನೀಡಿದ ಸಂದರ್ಭದಲ್ಲಿ, ವಿಚಾರ ಸಂಕಿರಣಕ್ಕಾಗಿ ಹಾಗೂ ಇತರೆ ಸಭೆ/ಕಾರ್ಯಕ್ರಮಗಳಿಗೆ ಊಟ, ಚಹಾ ಇತ್ಯಾದಿಗಳಿಗೆ 2019-20ರಲ್ಲಿ ಸುಮಾರು ರೂ.10,64,825/-ಗಳನ್ನು ಖರ್ಚುಮಾಡಿದ್ದು, ಬಿಲ್ಲುಗಳ ಪಾವತಿಯ ವಿವರವನ್ನು **ಅನುಬಂಧ-14ರಲ್ಲಿ** ನೀಡಲಾಗಿದೆ.<br>ಸದರಿ ಬಿಲ್‌ಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.<br>01. ವಿವಿಧ ವಿಭಾಗಗಳಲ್ಲಿ ಸಭೆ ನಡೆಸಲು ಅಥವಾ ವಿಭಾಗಕ್ಕೆ ಭೇಟಿ ನೀಡಿದ ವಿದ್ವಾಂಸರಿಗೆ/ ಅತಿಥಿಗಳಿಗೆ/ಇತರೆಯವರಿಗೆ ಊಟ ಮತ್ತು ಚಹಾದ ವ್ಯವಸ್ಥೆಯನ್ನು ಕಲ್ಪಿಸಲು ಅವಕಾಶವಿರುವುದಿಲ್ಲ.<br>ಆದರೆ ಸದರಿ ಪ್ರಕರಣಗಳಲ್ಲಿ ಪಿಹೆಚ್.ಡಿ. ವಿಧ್ಯಾರ್ಥಿಗಳಿಗೆ ನೋಂದಣಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರಾಧ್ಯಾಪಕರು ಹಾಗೂ ವಿಭಾಗದ ಸಿಬ್ಬಂದಿಯವರೆಲ್ಲರೂ ಊಟ, ಚಹಾಕ್ಕಾಗಿ ಸುಮಾರು 45 ರಿಂದ 50 ಜನರಿಗೆ ಮತ್ತು ಕೆಲವೊಂದು ಕಾರ್ಯಗಾರ/ ಸಭೆಗಳಿಗೆ 500 ಜನರಿಗೆ ಊಟ ಮತ್ತು ಚಹಾಕ್ಕಾಗಿ ವೆಚ್ಚ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br>02. ವಿಶ್ವವಿದ್ಯಾಲಯದಲ್ಲಿ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರ ವಿಭಾಗಕ್ಕೆ ಅತಿಥಿಗಳು ಆಗಮಿಸಿದಾಗ ಪ್ರತಿ ತಿಂಗಳಿಗೆ ಇಂತಿಷ್ಟು ಮೊತ್ತದ ಔಪಚಾರಿಕ ವೆಚ್ಚವನ್ನು ಸರ್ಕಾರದ ಆದೇಶಗಳನ್ವಯ ಭರಿಸಲು ಅವಕಾಶವಿರುತ್ತದೆ. ಆದರೆ ವಿಭಾಗದ ಮುಖ್ಯಸ್ಥರಿಗೆ ಯಾವುದೇ ಔಪಚಾರಿಕ ವೆಚ್ಚವನ್ನು ಭರಿಸಲು ಸರಕಾರದ ಆದೇಶವಿರುವುದಿಲ್ಲ, ಪ್ರಯುಕ್ತ ಸದರಿ ಪ್ರಕರಣಗಳಲ್ಲಿ ನಿಯಮಬಾಹಿರವಾಗಿ ವೆಚ್ಚಮಾಡಲಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲಾಗಿದೆ. | ಸಾದಿಲ್ವಾರು ವೆಚ್ಚದ ಕೈಪಿಡಿ ಪ್ರಕಾರ ಲಘು ಉಪಹಾರದ ವ್ಯವಸ್ಥೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | 03. ವಿಶ್ವವಿದ್ಯಾಲಯದಲ್ಲಿ/ವಿಭಾಗಗಳಲ್ಲಿ ಜರುಗುವ ಕಾರ್ಯಕ್ರಮ/ಸಭೆಗಳಲ್ಲಿ ಊಟ ಮತ್ತು ಚಹಾವನ್ನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿ ನಳಪಾಕ ವಿಶ್ವವಿದ್ಯಾಲಯ ಅತಿಥಿ ಗೃಹ ಹಾಗೂ ಎಸ್.ಜಿ.ಡಿ. ಕ್ಯಾಂಟಿನ್ ಇವರಿಂದ ಪಡೆಯಲಾಗಿದೆ. ಆದರೆ ಸದರಿಯವರು ಊಟ ಹಾಗೂ ಚಹಾಕ್ಕೆ ನಮೂದಿಸಿದ ದರಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ದರ ಒಪ್ಪಂದ (Rate contract) ಮಾಡಿಕೊಳ್ಳದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>04. ಸರ್ಕಾರದಿಂದ ಆಚರಿಸಲು ಸೂಚಿಸಿದ ಜಯಂತಿಗಳಿಗೆ ಹಾಗೂ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲು ಸರ್ಕಾರದ ನಿರ್ದೇಶನದಂತೆ ವೆಚ್ಚವನ್ನು ಭರಿಸಲು ಅವಕಾಶವಿರುತ್ತದೆ. ಆದರೆ ಸದರಿ ಪ್ರಕರಣಗಳಲ್ಲಿ ವಿಪರೀತ ವೆಚ್ಚ ಭರಿಸಿರುವುದು ಕಂಡು ಬಂದಿರುತ್ತದೆ.<br>ಉದಾಹರಣೆಗೆ: ಅನುಬಂಧ–14ರಲ್ಲಿ ಕ್ರಮಸಂಖ್ಯೆ:73 ರಲ್ಲಿ ರೂ.69,300/– ಕ್ರ.ಸಂ:201ರಲ್ಲಿ ರೂ.28,600/– ಕ್ರ.ಸಂ:267 ರಲ್ಲಿ ರೂ.17,680/– ಕ್ರ.ಸಂ:274 ರಲ್ಲಿ ರೂ.20,900/– ಕ್ರ.ಸಂ:290 ರಲ್ಲಿ80,625/– ಕ್ರ.ಸಂ:291 ರಲ್ಲಿ 26,510/– ಕ್ರ.ಸಂ:297ರಲ್ಲಿ ರೂ.25,500/– ಕ್ರ.ಸಂ:298ರಲ್ಲಿ ರೂ.65,000/–, ಕ್ರ.ಸಂ:299 ರೂ.33,900/– ಕ್ರ.ಸಂ:302ರಲ್ಲಿ ರೂ.41,970/– ಗಳು.<br>05. ಸಭೆ/ಕಾರ್ಯಕ್ರಮಗಳಲ್ಲಿ ಹಾಜರಾದ/ಪಾಲ್ಗೊಂಡ ಸದಸ್ಯರು/ಅತಿಥಿಗಳ/ವಿದ್ವಾಂಸರ/ಸಿಬ್ಬಂದಿಗಳ ಹಾಜರಾತಿಯ ಯಾವುದೇ ದಾಖಲೆಗಳನ್ನು ಬಿಲ್‌ಗಳಿಗೆ ಲಗತ್ತಿಸಿರುವುದಿಲ್ಲ.<br>06. ನ್ಯಾಕ್ ಸಮಿತಿಯು ವಿಶ್ವವಿದ್ಯಾಲಯ/ವಿಭಾಗಗಳಿಗೆ ಭೇಟಿ ಕೊಡುವ ಹಿನ್ನಲೆಯಲ್ಲಿ ಆಯಾ ವಿಭಾಗಗಳಲ್ಲಿ ಪೂರ್ವಸಿದ್ಧತೆಯ ಕೆಲಸ ನಿರ್ವಹಿಸಲು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಊಟ/ಚಹಾ ಇತರೆಗಳಿಗಾಗಿ ವಿಶ್ವವಿದ್ಯಾಲಯದ ಹಣದಿಂದ ಅನಾವಶ್ಯಕ ವೆಚ್ಚವನ್ನು ಭರಿಸಿರುತ್ತಾರೆ. ಉದಾಹರಣೆಗೆ:ಅನುಬಂಧ–14ರಲ್ಲಿ ಕ್ರ.ಸಂ:73ರಲ್ಲಿ ರೂ.69,300/–ಕ್ರ.ಸಂ:86 ರಲ್ಲಿ ರೂ.720/– ಕ್ರ.ಸಂ:120ರಲ್ಲಿ ರೂ.2,280/– ಕ್ರ.ಸಂ:121ರಲ್ಲಿ ರೂ.2,738./– ಹಾಗೂ ಕ್ರ.ಸಂ:277ರಲ್ಲಿ ರೂ.2,010ಗಳು.<br>ಇದಲ್ಲದೇ ವಿಚಾರಸಂಕಿರಣ/ಸಭೆಗಳಿಗೆ ಪರೀಕ್ಷಾ ಕಾರ್ಯಗಳಿಗೆ ಬೇರೆ ವಿಶ್ವವಿದ್ಯಾಲಯಗಳಿಂದ ಆಗಮಿಸಿದ ವಿದ್ವಾಂಸಕರು/ತಜ್ಞರಿಗೆ ಟಿ.ಎ/ಡಿ.ಎ.ಯೊಂದಿಗೆ ಊಟೋಪಚಾರ ವೆಚ್ಚಮಾಡಿದ್ದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 76 ದಿನಾಂಕ: 16–12–2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕಂಡಿಕೆ 27ರ ಕ್ರಮ ಸಂಖ್ಯೆ:139, 140, 198 ರಿಂದ 202, 226 ರಿಂದ 229, 238 ರಿಂದ 243, 256 ರಿಂದ 258, 277 ಮತ್ತು 296 ರಿಂದ 297ಕ್ಕೆ ಮಾನ್ಯ ಕುಲಪತಿಗಳು ಆಡಳಿತಾತ್ಮಕ ಅನುಮೋದನೆ ಪಡೆದು ಮಾಡಲಾಗಿದೆ ಮತ್ತು ಕ್ರಮ ಸಂಖ್ಯೆ:10 ಮತ್ತು 11ಕ್ಕೆ ಕನ್ನಡ ವಿಶ್ವವಿದ್ಯಾಲಯವು ಆವರಣವು ಪಟ್ಟಣ ಪ್ರದೇಶದಿಂದ ದೂರವಿರುವುದರಿಂದ | | |

ಊಟದ ವ್ಯವಸ್ಥೆ ಏರ್ಪಡಿಸಲು ಅನಾನೂಕೂಲವಿದೆ. ಈ ಹಿನ್ನಲೆಯಲ್ಲಿ ಕೋರ್ಸ್‌ಗೆ ಬಂದಿರುವ ಸಂಪನ್ಮೂಲ ವ್ಯಕ್ತಿಗಳಿಗೆ ಊಟದ ವ್ಯವಸ್ಥೆಯನ್ನು ಅಭಿವೃದ್ಧಿ ಅಧ್ಯಯನ ವಿಭಾಗವೇ ವಹಿಸಿಕೊಂಡು ಮಾಡಿರುತ್ತದೆ ಎಂದು ತಿಳಿಸಿದ್ದಾರೆ. ಸದರಿ ಕಂಡಿಕೆಗೆ ಸಮಂಜಸವಲ್ಲದ ಉತ್ತರ ನೀಡಿದ ಪ್ರಯುಕ್ತ ಕಂಡಿಕೆಯನ್ನು ಮುಂದುವರಿಸಿದೆ. ಪ್ರಯುಕ್ತ ವೆಚ್ಚಮಾಡಲಾದ ಮೊತ್ತ **ರೂ.10,64,825/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**28**

**ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದಲ್ಲಿ Ph.D. ವಿದ್ಯಾರ್ಥಿಗಳ ನೊಂದಣಿ ಪ್ರಕ್ರಿಯೆಗೆ ಖರ್ಚು ಮಾಡಿರುವ ಬಗ್ಗೆ.**

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದಲ್ಲಿ ದಿನಾಂಕ:18–09–2019 ರಂದು Ph.D ವಿದ್ಯಾರ್ಥಿಗಳ ಖಾಯಂ ಕಲೋಕಿಯಂ ನೊಂದಣಿ ಪ್ರಕ್ರಿಯೆ ನಡೆಸುವುದಕ್ಕಾಗಿ ವಿಭಾಗದವರಾದ ಶ್ರೀ ವೆಂಕಟೇಶ ಪ್ರಾಧ್ಯಾಪಕರು ಇವರಿಗೆ ಚೆಕ್ ಸಂಖ್ಯೆ:123707 ದಿನಾಂಕ:13–09–2019ರ ಮೂಲಕ ರೂ.5,000=00 ಗಳ ಮುಂಗಡ ನೀಡಲಾಗಿರುತ್ತದೆ. ರೂ.5000=00 ಗಳಲ್ಲಿ ಸದರಿಯವರ 3680/–ನ್ನು ವೆಚ್ಚ ಮಾಡಿ ಬಾಕಿ ಊಳಿದ ಮೊತ್ತ ರೂ.1320=00ಗಳು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸಿರುತ್ತಾರೆ. ವೆಚ್ಚ ಮಾಡಲಾದ ರೂ.3680=00ಗಳ ವಿವರ ಕೆಳಗಿನಂತಿದೆ.

| ಕ್ರ.ಸಂ. | ಏಜೆನ್ಸಿ | ಬಿಲ್ ಸಂಖ್ಯೆ ಮತ್ತು ದಿನಾಂಕ | ಬಿಲ್‌ನ ಮೊತ್ತ | ಷರಾ |
|---|---|---|---|---|
| 1 | ಅನ್ನಪೂರ್ಣೇಶ್ವರಿ ನಳಪಾಕ | 037<br>18–09–2019 | 3420=00 | 45 ಜನರ ಊಟ ಮತ್ತು ಚಹಾದ ಬಿಲ್ಲು |
| 2 | ಶ್ರೀ ಬುಕ್ಸ್ & ಸ್ಟೇಶನರಿ ವಿದ್ಯಾರಣ್ಯ | 173<br>18–09–2019 | 260=00 | ಬಿಸ್ಕಟ್ |
| | | **ಒಟ್ಟು** | **3,680=00** | |

ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನ್ಯತೆಗಳು.

1. ಪಿಹೆಚ್.ಡಿ. ವಿದ್ಯಾರ್ಥಿಗಳ ನೋಂದಣಿ ಪ್ರಕ್ರಿಯೆಯಲ್ಲಿ ಊಟದ ವೆಚ್ಚ ಮಾಡಲು ಅವಕಾಶವಿರುವುದಿಲ್ಲ. ಸದರಿ ವೆಚ್ಚ ಮಾಡಲು ಸರಕಾರದ ಆದೇಶ ಇದ್ದರೆ ಲೆಕ್ಕಪರಿಶೋಧನೆಗೆ ಒದಗಿಸುವುದು.
2. ಸದರಿ ನೋಂದಣಿ ಪ್ರಕ್ರಿಯೆಯ ಬಿಲ್ಲಿನಲ್ಲಿ ನಮೂದಿಸಿದಂತೆ ಒಟ್ಟು 45 ಜನರಿಗೆ ಊಟ ಹಾಗೂ ಚಹಾದ ವ್ಯವಸ್ಥೆಯನ್ನು ನೀಡಲಾಗಿದೆ. ಆದರೆ 45 ಜನರ (ವಿದ್ಯಾರ್ಥಿಗಳ/ಪ್ರಾಧ್ಯಾಪಕರು) ಹಾಜರಾತಿಯ ಪಟ್ಟಿ ಲಗತ್ತಿಸಿರುವುದಿಲ್ಲ.

2019–20ನೇ ಸಾಲಿನಲ್ಲಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದಲ್ಲಿ ದಿ: 18.09.2019ರಂದು ವಿಭಾಗದ ಹಾಗೂ ಮಂಗಳೂರು, ಉಡುಪಿ, ಉಜಿರೆ ಮತ್ತು ಬಾಗಲಕೋಟೆಯ ಅಧ್ಯಯನ ಕೇಂದ್ರಗಳ ಪಿ.ಎಚ್.ಡಿ ವಿದ್ಯಾರ್ಥಿಗಳ ಖಾಯಂ ನೋಂದನೆ ಪ್ರಕ್ರಿಯೆ ನಡೆಸುವುದಕ್ಕಾಗಿ ಚೆಕ್ ಸಂ. 123707 ದಿ:13.09.2019ರಂದು ರೂ. 5000/–ಗಳ ಮುಂಗಡ ಪಡೆದು ವೆಚ್ಚ ಮಾಡಿರುವ ಮೊತ್ತ ರೂ. 3680/–ಗಳಾಗಿದ್ದು ಉಳಿದ ಮೊತ್ತ ರೂ. 1320/–ಗಳನ್ನು ವಿಶ್ವವಿದ್ಯಾಲಯ ನಿಧಿಗೆ ಹಿಂದಿರುಗಿಸಲಾಗಿದೆ.

1. ಪಿ.ಎಚ್.ಡಿ ಕೋರ್ಸ್‌ವರ್ಕ್ ಕಡತದಲ್ಲಿ ಬಾಹ್ಯ ಮಾರ್ಗದರ್ಶಕರಿಗೆ ಔಪಚಾರಿಕ ವೆಚ್ಚ ಮಾಡಲು ಕಂಡಿಕೆ ಸಂ.216ರಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ.
2. ವಿದ್ವಾಂಸರು, ಬಾಹ್ಯ ಮಾರ್ಗದರ್ಶಕರು, ಸಂಯೋಜನಾಧಿಕಾರಿಗಳು, ಹಾಗೂ ವಿಭಾಗದ ಸದಸ್ಯರು ಪಿ.ಎಚ್.ಡಿ ವಿದ್ಯಾರ್ಥಿಗಳ ಖಾಯಂ ನೋಂದಣಿ ಪ್ರಕ್ರಿಯೆ ಕಾರ್ಯಕ್ರಮ ಸಲುವಾಗಿ 45 ಜನರಿಗೆ ಮಧ್ಯಾಹ್ನ (Working Lunch) ಊಟ (ಲಘು ಉಪಹಾರ) ವ್ಯವಸ್ಥೆ ಮಾಡಲಾಗಿತ್ತು. ಜೊತೆಗೆ ಚಹಾ ಮತ್ತು ಬಿಸ್ಕೇಟ್ ವ್ಯವಸ್ಥೆಯೂ ಇತ್ತು.

<table>
<tr>
<td></td>
<td>3. ಶ್ರೀ ಅನ್ನಪೂರ್ಣೇಶ್ವರಿ ನಳಪಾಕ ವಿಶ್ವವಿದ್ಯಾಲಯ ಅತಿಥಿಗೃಹ ಇವರಿಂದ ಊಟ ಮತ್ತು ಚಹಾ ಪಡೆಯಲಾಗಿದೆ. ಆದರೆ ಸದರಿಯವರು ಊಟ ಹಾಗೂ ಚಹಾಕ್ಕೆ ನಮೂದಿಸಿದ ದರಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ದರ ಒಪ್ಪಂದ (Rate contrtact) ಮಾಡಿಕೊಳ್ಳದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:04 ದಿನಾಂಕ:23-09-2021 ನೀಡಲಾಗಿದೆ. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. ಮೇಲಿನ ಎಲ್ಲಾ ಅಂಶಗಳಿಗೆ ಸೂಕ್ತ ದಾಖಾಲಾತಿಗಳೊಂದಿಗೆ ಸ್ಪಷ್ಟೀಕರಣ ನೀಡುವವರೆಗೆ ವೆಚ್ಚ ಮಾಡಲಾದ ಮೊತ್ತವನ್ನು ಅನಾವಶ್ಯಕ ವೆಚ್ಚವೆಂದು ಪರಿಗಣಿಸಿ ರೂ.3,680/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.</td>
<td>3. ಶ್ರೀ ಅನ್ನಪೂರ್ಣೇಶ್ವರಿ ನಳಪಾಕ, ವಿಶ್ವವಿದ್ಯಾಲಯ ಅತಿಥಿಗೃಹ ಇವರಿಂದ ಊಟ ಮತ್ತು ಚಹಾ ಪಡೆಯಲಾಗಿದ್ದು ಈ ವ್ಯವಸ್ಥೆಯ ಸಲುವಾಗಿ ವಿಶ್ವವಿದ್ಯಾಲಯದ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡಿರುತ್ತೇವೆ.<br>ಈ ಹಿನ್ನೆಲೆಯಲ್ಲಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದಲ್ಲಿ ಪಿ.ಎಚ್.ಡಿ ವಿದ್ಯಾರ್ಥಿಗಳ ನೋಂದಣಿ ಪ್ರಕ್ರಿಯೆಗೆ ಖರ್ಚು ಮಾಡಿರುತ್ತೇವೆ ಆದ್ದರಿಂದ ಈ ವಿಷಯವನ್ನು ಕೈಬಿಡಲು ಮಾನ್ಯರಲ್ಲಿ ಕೋರಲಾಗಿದೆ.</td>
<td></td>
</tr>
<tr>
<td>29</td>
<td>Web Hosting ಕುರಿತು.<br>ದರ್ಪಣ ಗಣಕ ಕೇಂದ್ರ ವಿಭಾಗದಿಂದ ಕನ್ನಡ ವಿಶ್ವವಿದ್ಯಾಲಯದ Web Hostingಗಾಗಿ ದಿನಾಂಕ:30-10-2019 ರಂದು ದರಪಟ್ಟಿ ಆಹ್ವಾನ ಮಾಡುವ ಮೂಲಕ ರೂ.28,320=00 ಗಳು ವೆಚ್ಚ ಮಾಡಿರುತ್ತಾರೆ, ಸದರಿ ವೆಚ್ಚದ ವಿವರ ಈ ಕೆಳಗಿನಂತಿದೆ.<br>
<table>
<tr><th>ಕ್ರ.ಸಂ</th><th>ಲೆಕ್ಕ ಶೀರ್ಷಿಕೆ</th><th>ಚೆಕ್ ಸಂಖ್ಯೆ ಮತ್ತು ದಿನಾಂಕ</th><th>ಬಿಲ್ಲಿನ ಮೊತ್ತ</th><th>ಏಜೆನ್ಸಿ ಹೆಸರು</th><th>ಷರಾ</th></tr>
<tr><td>01</td><td>2470<br>427</td><td>127646<br>02-01-2020</td><td>28,320</td><td>SINE Bangalore</td><td>Web Hosting ಗಾಗಿ</td></tr>
</table>
ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನತೆಗಳು ಈ ಕೆಳಗಿನಂತಿವೆ.<br>ದರಪಟ್ಟಿ ಆಹ್ವಾನ ಪತ್ರದಲ್ಲಿ ಒಂದು ವರ್ಷದ ಅವಧಿಗೆ Web Hosting ಎಂದು ಮಾತ್ರ ನಮೂದಿಸಿ ಸೂಚನಾ ಫಲಕಕ್ಕೆ ಲಗತ್ತಿಸುವ ಮೂಲಕ ದರಪಟ್ಟಿ ಆಹ್ವಾನ ಮಾಡಿರುತ್ತಾರೆ. ಆದರೆ ಪಡೆಯಲಾದ ಮೂರು ಏಜೆನ್ಸಿಗಳ ದರಪಟ್ಟಿಗಳಲ್ಲಿ 1) Sine web solutions private ltd. Bangalore, 2) Getmyappz 3) Mindvik Bangalore. ಈ ಎಲ್ಲಾ ಏಜೆನ್ಸಿಗಳು ಬೆಂಗಳೂರಿನ ಏಜೆನ್ಸಿಗಳಾಗಿದ್ದು, ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸೂಚನಾ ಫಲಕಕ್ಕೆ ಲಗತ್ತಿಸಿದ ದರಪಟ್ಟಿ ಆಹ್ವಾನ ಪತ್ರವನ್ನು ನೋಡಿ ಅದರ ದರಪಟ್ಟಿಗಳನ್ನು ಸಲ್ಲಿಸಿರುವುದು ಸಾಧ್ಯವಿರುವುದಿಲ್ಲ, ಅಂದರೆ ಸದರಿ ಏಜೆನ್ಸಿಗಳಿಗೆ ಸಂಪರ್ಕ ಮಾಡಿ ನೇರವಾಗಿ ದರಪಟ್ಟಿಯನ್ನು ಪಡೆದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರಿಂದ ಸದರಿ Web Hostingಗೆ ಅಪಾರದರ್ಶಕತೆಯಿಂದ ನಿಯಮಬಾಹಿರವಾಗಿ ವೆಚ್ಚ ಮಾಡಲಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.</td>
<td>Web Hosting, Web designing and server maintaining ಮೊದಲಾದ service ಗಳನ್ನು ಕೊಡುವ ಯಾವುದೇ ಏಜನ್ಸಿಗಳು ಹೊಸಪೇಟೆಯಲ್ಲಿ ಲಭ್ಯವಿರುವುದಿಲ್ಲ. ಆದ್ದರಿಂದ ಬೆಂಗಳೂರಿನ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕಚೇರಿಯ ನೋಟೀಸ್ ಬೋರ್ಡ್‌ನಲ್ಲಿ ದರಪಟ್ಟಿ ಆಹ್ವಾನಪತ್ರವನ್ನು ಲಗತ್ತಿಸಲಾಗಿತ್ತು. ಬೆಂಗಳೂರಿನ Web Hosting ಏಜನ್ಸಿಗಳು ನಮ್ಮನ್ನು ಸಂಪರ್ಕಿಸಿ ದರಪಟ್ಟಿ ನೀಡಿರುತ್ತಾರೆ. ಬಂದಿರುವ ಮೂರು ದರಪಟ್ಟಿಯಲ್ಲಿ M/S 5ine web solutions Pvt. Bangalore ಇವರು ದರ ಕಡಿಮೆ ಇರುವುದರಿಂದ M/S 5ine web solutions Pvt. Bangalore ಇವರಿಗೆ ಸರಬರಾಜು ಆದೇಶ ನೀಡಲಾಗಿತ್ತು. M/S 5ine web solutions Pvt. Bangalore ಇವರು ತಮ್ಮ ದರಪಟ್ಟಿಯಲ್ಲಿ website server storage size 5GB ಎಂದು ಸ್ಪಷ್ಟವಾಗಿ ನಮೂದಿಸಿದ್ದಾರೆ. ಪ್ರತಿದಿನ ಅಪ್‌ಲೋಡ್ ಮಾಡಿದ ಹಾಗೆ storage capacity</td>
<td></td>
</tr>
</table>

| | | | |
|---|---|---|---|
| | ಅಲ್ಲದೆ ಈ ಮೇಲೆ ವಿವರಿಸಿದಂತೆ ದರಪಟ್ಟಿ ಆಹ್ವಾನ ಪತ್ರದಲ್ಲಿ ಒಂದು ವರ್ಷದ ಅವಧಿಗೆ Web Hostingಎಂದು ಮಾತ್ರ ನಮೂದಿಸಿದ್ದು ಇದರಲ್ಲಿ ಈ ಕೆಳಕಂಡ ಅಂಶಗಳನ್ನು ನಮೂದಿಸಿರುವುದಿಲ್ಲ.<br>ಎಷ್ಟು GB storageನ Web Hosting ಕುರಿತು ನಮೂದಿಸಿರುವುದಿಲ್ಲ.<br>ಎಷ್ಟು ಸಂಖ್ಯೆ e-mail IDಗಳನ್ನು create ಮಾಡುವ ಬಗ್ಗೆ ನಮೂದಿಸಿರುವುದಿಲ್ಲ.<br>Server ಗೆ ಸಂಬಂಧಿಸಿದ ಯಾವುದಾದರೂ ಸಮಸ್ಯೆಗಳು ಬಂದಲ್ಲಿ ಉಚಿತವಾಗಿ ಸೇವೆಯನ್ನು ಒದಗಿಸಬೇಕೆಂಬ ಷರತ್ತನ್ನು ವಿಧಿಸಿರುವುದಿಲ್ಲ.<br>ದರಪಟ್ಟಿ ಆಹ್ವಾನ ಪತ್ರದಲ್ಲಿ ದರಪಟ್ಟಿ ಸಲ್ಲಿಸುವ ಕೊನೆಯ ದಿನಾಂಕವನ್ನು ತಿಳಿಸಿರುವುದಿಲ್ಲ.<br>ದರಪಟ್ಟಿ ಆಹ್ವಾನ ಪತ್ರದಲ್ಲಿ ಏಜೆನ್ಸಿ ಸಲ್ಲಿಸಬೇಕಾದ ದರಗಳು ಎಲ್ಲಾ ತೆರಿಗೆಗಳೊಂದಿಗೆ ಸಲ್ಲಿಸಬೇಕೆಂದು ಷರತ್ತನ್ನು ವಿಧಿಸಿರುವುದಿಲ್ಲ.<br>B) ದರಪಟ್ಟಿ ಆಹ್ವಾನ ಪತ್ರದಲ್ಲಿ Web Hosting ಕಾರ್ಯಕ್ಕಾಗಿ "01 ವರ್ಷದ ಅವಧಿಗೆ" ಎಂದು ನಮೂದಿಸಿದ್ದು ಆದರೆ Sine ಇವರ ದರಪಟ್ಟಿಯನ್ನು ಅಂತಿಮಗೊಳಿಸಿದ್ದು "5 ವರ್ಷದ ಅವಧಿಗೆ" ರೂ.28,320/– ಗಳ ದರಪಟ್ಟಿ ಸಲ್ಲಿಸಿರುತ್ತಾರೆ. ಅಂದರೆ ಸದರಿ ಏಜೆನ್ಸಿಯವರಿಗೆ ರೂ.28,320/–ಗಳ ಬಿಲ್ಲು ಪಾವತಿಯಾಗಿರುತ್ತದೆ. ಅಂದರೆ ಒಂದು ವರ್ಷಕ್ಕೆ ಅಂದಾಜು ರೂ.5,664/–ಗಳನ್ನು ಪಾವತಿ ಮಾಡುವ ಬದಲು ಹೆಚ್ಚುವರಿಯಾಗಿ **ರೂ.22,656=00ಗಳನ್ನು ಪಾವತಿಸಿದನ್ನು ವಸೂಲಾತಿಗೆ ಸೂಚಿಸಲಾಗಿದೆ.**<br>ಸದರಿ ಏಜೆನ್ಸಿಯವರಿಂದ ವಿಶ್ವವಿದ್ಯಾಲಯದವರು ಯಾವುದೇ ಕರಾರು ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ. ಇದರಿಂದ ಯಾವುದೇ ತಾಂತ್ರಿಕ ಸಮಸ್ಯೆಗಳು ಬಂದಲ್ಲಿ ಏಜೆನ್ಸಿಯವರು ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲು ನಿರಾಕರಿಸಿದಾಗ ವಿಶ್ವವಿದ್ಯಾಲಯದವರಿಗೆ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:05 ದಿನಾಂಕ:23–09–2021 ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವಿಶ್ವವಿದ್ಯಾಲಯ NAAC Portal ಗೆ NAAC Reportನ್ನು Upload ಮಾಡುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್ ಡಿಸೈನ್‌ನ್ನು ನ್ಯಾಕ್ ವರದಿಗೆ ಅನುಗುಣವಾಗಿ ತುರ್ತಾಗಿ ಬದಲಾಗಿಸುವಂತೆ ಸೂಚಿಸಿದ್ದ ಹಿನ್ನೆಲೆಯಲ್ಲಿ ಯಾವುದೇ ಕರಾರು ಒಪ್ಪಂದ ಮಾಡಿಕೊಳ್ಳದೇ ಕೊಟೇಶನ್ ಕರೆದು ಸರಬರಾಜು ಆದೇಶ ನೀಡಲಾಗಿದೆ ಎಂದು ನೀಡಿರುವ ಉತ್ತರವು ಸಮಂಜಸವಿಲ್ಲದ ಕಾರಣ ಕಂಡಿಕೆಯನ್ನು ಮುಂದುವರೆಸಿದೆ. ಈ ಮೇಲಿನ ಎಲ್ಲಾ ಅಂಶಗಳಿಗೆ ಸೂಕ್ತವಾದ ದಾಖಲಾತಿಗಳೊಂದಿಗೆ ಸ್ಪಷ್ಟೀಕರಣ ನೀಡುವವರಿಗೆ ಹೆಚ್ಚುವರಿ ಪಾವತಿಯಾದ ಮೊತ್ತ **ರೂ.22,656/–ಗಳನ್ನು ವಸೂಲಾತಿಯಲ್ಲಿಡಲಾಗಿದೆ ಹಾಗೂ ರೂ.5,664/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಬದಲಾಗುತ್ತಿರುತ್ತದೆ. ಆದ್ದರಿಂದ ನಮ್ಮ ವೆಬ್‌ಸೈಟ್‌ಗೆ ಸಂಬಂಧಿಸಿದಂತೆ ಎಲ್ಲ ಮಾಹಿತಿಗಳನ್ನು Host ಮಾಡಿರುತ್ತಾರೆ. M/S 5ine web solutions Pvt. Bangalore ಇವರ ದರಪಟ್ಟಿಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ 10 ಇ–ಮೇಲ್ ಐಡಿಗಳನ್ನು create ಮಾಡಿಕೊಡುವುದಾಗಿ ಸೂಚಿಸಿರುತ್ತಾರೆ. ಆದರೆ ಇವರು 25 Email ID ಗಳನ್ನು create ಮಾಡಿ ಒದಗಿಸಿದ್ದಾರೆ. Annual Maintenance ನಲ್ಲಿ ಒಂದು ವರ್ಷದ ಅವಧಿಯಲ್ಲಿ ಯಾವುದೇ ತಾಂತ್ರಿಕ ತೊಂದರೆಗಳು ಬಂದಾಗ ಪರಿಹರಿಸಲು ದರಪಟ್ಟಿಯಲ್ಲಿ ಒಪ್ಪಿರುತ್ತಾರೆ. M/S 5ine web solutions Pvt. Bangalore Bangalore ಇವರು ದರಪಟ್ಟಿಯಲ್ಲಿ ಒಂದು ವರುಷಕ್ಕೆ One year linux hosting charges including – INR – 28,329-including all applicable taxes ಎಂದು ಸ್ಪಷ್ಟವಾಗಿ ನಮೂದಿಸಿದ್ದಾರೆ. ಇದು ಒಂದು ವರುಷದ ವೆಬ್ ಹೋಸ್ಟಿಂಗ್‌ನ ವೆಚ್ಚವಾಗಿರುತ್ತದೆ. ಸದರಿ ಏಜನ್ಸಿಯವರಿಗೆ ಸರಬರಾಜು ಆದೇಶವನ್ನು ನೀಡುವಾಗ ಮೇಲೆ ನಮೂದಿಸಿರುವ ಎಲ್ಲ ವಿಷಯಗಳನ್ನು ಚರ್ಚಿಸಲಾಗಿದೆ. ಈಗಾಗಲೇ ಸದರಿಯವರು ಬಹಳಷ್ಟು ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸದರಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. | |

| | | | |
|---|---|---|---|
| 30 | **2019–2020ನೇ ಸಾಲಿನ ದೃಶ್ಯಕಲಾ ವಿಭಾಗದಲ್ಲಿ ಬಿಲ್ಲುಗಳಲ್ಲಿ ಹೆಚ್ಚಿನ ಮೊತ್ತ ಕ್ಲೇಮ್ ಮಾಡಿರುವ ಕುರಿತು.** | ದಿನಾಂಕ: 21.09.2021 ರಂದು ಲೆಕ್ಕ ಪರಿಶೋಧನೆಗೆ ನೀಡಲಾಗಿದೆ ಹಾಗೂ ಸದರಿ ಬಿಲ್‌ಗಳ ಪ್ರತಿಯನ್ನು ಇದರ ಜೊತೆಗೆ ಲಗತ್ತಿಸಲಾಗಿದೆ. ಸದರಿ ಲೆಕ್ಕಪರಿಶೋಧನೆಯಲ್ಲಿರುವ ಆಕ್ಷೇಪಣೆ ಮತ್ತು ವಸೂಲಾತಿಯನ್ನು ಕೈಬಿಡಲು ಕೋರಿದೆ. | |

2019–20ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ದೃಶ್ಯಕಲಾ ವಿಭಾಗ, ಹಂಪಿ, ಕನ್ನಡ ವಿಶ್ವವಿದ್ಯಾಲಯದಲ್ಲಿ ಕೆಲವು ವೋಚರ್‌ಗಳ ಬಿಲ್ ಪಾವತಿಯಲ್ಲಿ ಹೆಚ್ಚಿಗೆ ಕ್ಲೇಮ್ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | ಬಿಲ್ ನಂಬರ್/ ದಿನಾಂಕ | ನೀಡಿರುವ ಮೊತ್ತ | ನೀಡಬೇಕಾದ ಮೊತ್ತ | ವ್ಯತ್ಯಾಸ |
|---|---|---|---|---|
| 1 | 412/30–11–2019 Sastha Bazar | 2,350=00 | – | 2,350=00 |
| 2 | 507/ Dade khalendar hardware | 3,633=00 | 3,503.42 | 130=00 |
| 3 | 13/12/2019 JK Digital | 2,368=00 | 180=00 | 2,188=00 |
| 4 | 21/ 14–12–2019 JK Digital | 2,737=00 | 40=00 | 2,697=00 |
| | | | **ಒಟ್ಟು** | **7,365=00** |

ಮೇಲಿನ ತಃಖ್ತೆಯಲ್ಲಿ ವಿವರಿಸಿದಂತೆ ಬಿಲ್‌ಗಳಲ್ಲಿ ನಿಯಮಬಾಹಿರವಾಗಿ ಹೆಚ್ಚಿನ ಮೊತ್ತ ಕ್ಲೇಮ ಮಾಡಿ ಹಣದ ದುರುಪಯೋಗ ಮಾಡಿಕೊಂಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

ಆದ್ದರಿಂದ ಪಾವತಿಯಾದ ಹೆಚ್ಚಿನ ಮೊತ್ತವನ್ನು ಸದರಿ ಮುಖ್ಯಸ್ಥರಿಂದ/ ಸಂಬಂಧಪಟ್ಟವರಿಂದ ವಸೂಲಿಸಿ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:06 ದಿನಾಂಕ:21–09–2021 ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ದೃಶ್ಯಕಲಾ ವಿಭಾಗದ ಕೆಲವು ಬಿಲ್‌ಗಳಲ್ಲಿ ಆದ ನ್ಯೂನ್ಯತೆಗಳ ಬಗ್ಗೆ ವಿವರಣೆ ನೀಡಿದ್ದು, ಯಾವುದೇ ಬಿಲ್‌ಗಳ ಪ್ರತಿಯನ್ನು ಒದಗಿಸದೇ ಇರುವುದರಿಂದ ವಿಭಾಗದವರು ನೀಡಿರುವ ಉತ್ತರ ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸಲಾಗಿದೆ. ಪ್ರಯುಕ್ತ ಪಾವತಿಯಾದ ಮೊತ್ತ **ರೂ.7,365/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.**

| | | | |
|---|---|---|---|
| **31** | **ನಗದು ಪಾವತಿ ಮಾಡಿರುವ ಕುರಿತು.**<br>ಕನ್ನಡ ವಿಶ್ವವಿದ್ಯಾಲಯ ಹಂಪಿ, ದೃಶ್ಯಕಲಾ ವಿಭಾಗದಲ್ಲಿ 2019-20ನೇ ಸಾಲಿನಲ್ಲಿ ಪಾವತಿಯ ದಾಖಲೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿದ್ದು, ಸದರಿ ವಿಭಾಗದಲ್ಲಿ ಸುಮಾರು ರೂ.12,06,746/-ಗಳ ನಗದು ಪಾವತಿ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.<br>ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 72 (ಎ)ರಲ್ಲಿ ವಿವರಿಸಿದಂತೆ "ರಾಜ್ಯ ಸರ್ಕಾರಕ್ಕೆ ಅವರು ಸಲ್ಲಿಸಿದ ಸೇವೆಗಳ ಬಗ್ಗೆ ಅಥವಾ ಮಾಡಿದ ಸರಬರಾಜುಗಳ ಬಗ್ಗೆ ಒಬ್ಬ ವ್ಯಕ್ತಿ, ವ್ಯಾಪಾರ ಸಂಸ್ಥೆ, ಕಂಪನಿ, ಶಾಸನಬದ್ದ ನಿಕಾಯ ಇತ್ಯಾದಿಗಳ ಹೆಸರಿಗೆ ಬರೆದ ಸರ್ಕಾರಿ ನೌಕರರ ಮತ್ತು ನಿವೃತ್ತಿ ವೇತನಗಳ ವೇತನ ಭತ್ಯೆ, ನಿವೃತ್ತಿ ವೇತನ ಇತ್ಯಾದಿಗಳ ಸಂದಾಯದ ಬಗ್ಗೆ ಹೊರತು, ಇತರೆ ಪ್ರತಿಯೊಂದು ಸಂದರ್ಭದಲ್ಲಿ ರೂ.1,000/- ರೂಪಾಯಿಗಳನ್ನು ಮತ್ತು ಅದಕ್ಕಿಂತ ಹೆಚ್ಚಿನ ಪಾವತಿಯನ್ನು ಮಾಡಬೇಕಾದಲ್ಲಿ ಕಡ್ಡಾಯವಾಗಿ ಕ್ರಾಸ್ ಮಾಡಿದ ಚೆಕ್ ಮುಖಾಂತರ ಪಾವತಿಮಾಡಬೇಕಾಗಿರುತ್ತದೆ/ಮಾಡಬೇಕೆಂದು ಸೂಚಿಸಲಾಗಿರುತ್ತದೆ.<br>ಸದರಿ ವಿಭಾಗದಲ್ಲಿ ಆರ್ಥಿಕ ವರ್ಷದ ಎಲ್ಲಾ ಪಾವತಿಯನ್ನು ನಗದು ರೂಪದಲ್ಲಿ ಪಾವತಿ ಮಾಡಿರುವುದು ನಿಯಮ ಬಾಹಿರವಾಗಿರುತ್ತದೆ ಮತ್ತು ಈ ತರಹದ ನಿಯಮಬಾಹಿರ ಪಾವತಿಯಿಂದ ವಿಶ್ವವಿದ್ಯಾಲಯದ ಹಣದ ದುರ್ಬಳಕೆಯಾಗುವ ಸಾಧ್ಯತೆಗಳಿರುತ್ತವೆ. ಆದ್ದರಿಂದ ಸದರಿ ನಗದು ಪಾವತಿಯು ಯಾವ ಆಧಾರದ ಮೇಲೆ ಮಾಡಲಾಗಿದೆ ಎಂಬುವುದರ ವಿವರವಾದ ಮಾಹಿತಿಗಳನ್ನು ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:07 ದಿನಾಂಕ: 21-09-2021 ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ 2019 ರಲ್ಲಿ ನಡೆದ ಹಂಪಿ ಉತ್ಸವದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಹಂಪಿ ಉತ್ಸವ ಸಮಿತಿಯು ಹಂಪಿ ಉತ್ಸವದ ಆಚರಣೆಯ ನಿರ್ಣಯ ಕೊನೆಯ ಗಳಿಗೆಯಲ್ಲಿ ತೀರ್ಮಾನಿಸಿದ್ದು, ಅದೇ ಸಂದರ್ಭದಲ್ಲಿ ಕರ್ನಾಟಕದ ಗಣ್ಯವ್ಯಕ್ತಿಗಳು ನಿಧನದ ಪ್ರಯುಕ್ತ ಮೂರುದಿನಗಳ ಶೋಕಚರಣೆ ಹಾಗೂ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿ ಬಾಹ್ಯ ಸದಸ್ಯರಿಗೆ ಹಾಗೂ ವಿದ್ವಾಂಸರಿಗೆ ಮೊದಲಿನಂತೆ ನಗದು ಮೂಲಕ ಹಣ ನೀಡಲಾಗಿದೆ ಎಂದು ವಿಭಾಗದವರು ನೀಡಿರುವ ಉತ್ತರ ಸಮಂಜಸವಾಗಿರದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಅಲ್ಲಿಯವರೆಗೆ ಪಾವತಿಯಾದ ಮೊತ್ತ **ರೂ.12,06,746/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಹಂಪಿ ಉತ್ಸವದ ಶಿಬಿರದ ಸಮಯದ ಅಭಾವವಿರುವುದರಿಂದ ಅದೇ ಸಮಯದಲ್ಲಿ ಕರ್ನಾಟಕ ಸಕಾರದ ಗಣ್ಯ ವ್ಯಕ್ತಿಯ ನಿಧನದ ಪ್ರಯುಕ್ತ 03 ದಿನಗಳವರೆಗೆ ಶೋಕಾಚರಣೆ ಇರುವುದರಿಂದ ಸರ್ಕಾರದ ಯಾವುದೇ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗದೆ ಕಾರಣ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ಕುಲಪತಿಗಳ ಮೌಖಿಕ ಆದೇಶದ ಮೇರೆಗೆ ಹೆಚ್ಚಿನ ವೆಚ್ಚವನ್ನು ಭರಿಸದೇ ಈ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು.<br>1. ಮಾನ್ಯರ ನಿರ್ದೇಶನದಂತೆ ಸುಮಾರು 50 ಶಿಲ್ಪಕಲೆ ಮತ್ತು ಚಿತ್ರಕಲಾವಿದರ ಹಾಗೂ ಸಹ ಕಲಾವಿದರ ಪ್ರಯಾಣ ವೆಚ್ಚವನ್ನು ಮತ್ತು ದಿನಗೂಲಿ ನೌಕರರಿಗೆ ಮೊತ್ತವನ್ನು ನಗದು ರೂಪದಲ್ಲಿ ಪಾವತಿಸಲಾಗಿದೆ.<br>2. ಶಿಲೆಗಳು ಮತ್ತು ಅದಕ್ಕೆ ಸಂಬಂದಪಟ್ಟ ಪರಿಕರಗಳು ಮತ್ತು ಚಿತ್ರಕಲೆಗೆ ಸಂಬಂದಪಟ್ಟ ಸಾಮಗ್ರಿಗಳ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗಿದೆ.<br>3. ಜಕ್ಕಣ ಶಿಲ್ಪಕಲಾ ಕೇಂದ್ರ ಹೊಸಪೇಟೆ ರೂ. 2,83,500/-ಚೆಕ್ ಸಂಖ್ಯೆ 042373 ದಿನಾಂಕ : 16.01.2020<br>4. ಶ್ರೀ ಬಾಲಾಜಿ ಪ್ರೇಮ್ ಹೊಸಪೇಟೆ ರೂ.88,898/- ರೂ. 40,901/-<br>5. ಊಟೋಪಚಾರದ ವ್ಯವಸ್ಥೆಯನ್ನು ಮಾನ್ಯರ ನಿರ್ದೇರ್ಶನದಂತೆ ಅವರ ಬೇಡಿಕೆಗೆ ಅನುಗುಣವಾಗಿ ಅವರು ನಗದು ರೂಪದಲ್ಲಿ ನೀಡಲಾಗಿದೆ.<br>6. ಅನೇಕ ಸಣ್ಣ ಪುಟ್ಟ ವಸ್ತುಗಳ ಖರೀದಿಗೆ ಬಿಲ್ಲುಗಳಿಲ್ಲರುವುದರಿಂದ ಸದರಿಯವರಿಗೆ ನಗದು | |

| | | | |
|---|---|---|---|
| | | ರೂಪದಲ್ಲಿ ಮೊತ್ತವನ್ನು ನೀಡಿ ರಸೀದಿ ಪಡೆಯಲಾಗಿದೆ.<br>ಹೀಗಾಗಿ 20 ದಿನಗಳವರೆಗೆ ನಡೆದ ಬೇಕಾದ ಶಿಬಿರಗಳು ಸಮಯದ ಅಭಾವದಿಂದ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇಲೆ ಒಂದು ವಾರದಲ್ಲಿ ಮುಗಿದಿರುತ್ತದೆ.<br>**ಹೊಂದಾಣಿಕೆಯಾದ ಕಡತಗಳು**<br>7. ಸಾಂಸ್ಥಿಕ ಯೋಜನೆಗೆ ರೂ. 20,000/- ಚೆಕ್ ಸಂಖ್ಯೆ 0423755 /28.01.2020 ಕ್ಷೇತ್ರಕಾರ್ಯಕ್ಕೆ ಬಳಸಿ ಹೊಂದಾಣಿಕೆ ಮಾಡಿಸಲಾಗಿದೆ.<br>8. ಸಾದಿಲ್ವಾರು, ಪರೀಕ್ಷಾ ಮಂಡಳಿ ವೆಚ್ಚ ಹಾಗೂ ನ್ಯಾಕ್ ಹೆಚ್ಚುವರಿ ಮೊತ್ತ ರೂ. 12,735/- ಚೆಕ್ ಸಂಖ್ಯೆ : 116181<br>9. ವಿಶೇಷ ಉಪನ್ಯಾಸ ರೂ. 9,716/- ಚರಕ್ ಸಂಖ್ಯೆ 042379.<br>ಈ ಹಿನ್ನೆಲೆಯಲ್ಲಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. | |
| **32** | **ಕರ್ನಾಟಕ ವೈಭವ ಕಾರ್ಯಕ್ರಮಕ್ಕೆ ಸಹಾಯಧನವನ್ನು ನೀಡಿರುವ ಬಗ್ಗೆ.**<br>ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಬೆಂಗಳೂರು ಇವರ ಪತ್ರ ಸಂಖ್ಯೆ:ಕರಾಉಶಿಪ/ಕರ್ನಾಟಕ ವೈಭವ/2019-20/692 ದಿನಾಂಕ 23-10-2019 ರನ್ವಯ ಕರ್ನಾಟಕ ವೈಭವ ವೈಚಾರಿಕ ಹಬ್ಬವನ್ನು ದಿನಾಂಕ: 15, 16 ಮತ್ತು 17-11-2019 ರಂದು ಕೆ.ಎಲ್.ಇ. ಸಂಸ್ಥೆಯ ರಾಜರಾಜೇಶ್ವರಿ ಮಹಾವಿದ್ಯಾಲಯ ರಾಣೆಬೆನ್ನೂರುನಲ್ಲಿ ಆಯೋಜಿಸಲಾಗಿದೆ ಎಂದು ಹಾಗೂ ಸದರಿ ವೈಚಾರಿಕ ಹಬ್ಬಕ್ಕೆ ವಿಶ್ವವಿದ್ಯಾಲಯದಿಂದ ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಆಸಕ್ತರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾತ್ರ ನಿರ್ದೇಶಿಸಿರುತ್ತಾರೆ.<br>ಮುಂದುವರಿದಂತೆ ಡಾ॥ ನಾರಾಯಣ ಪವಾರ ಸಂಯೋಜಕರು ಪರಿವರ್ತನಾ ರಾಣೆಬೆನ್ನೂರು ಇವರ ಮನವಿ ಪತ್ರದ ಅನ್ವಯ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭೆಯ ಮಾನ್ಯ ಉನ್ನತ ಶಿಕ್ಷಣ ಸಚಿವರ ಮೌಖಿಕ ಸೂಚನೆಯಂತೆ ವಿಶ್ವವಿದ್ಯಾಲಯದಿಂದ ಕನಿಷ್ಠ 2 ಲಕ್ಷ ರೂ ಅನುದಾನವನ್ನು ನೀಡುವಂತೆ ವಿಶ್ವವಿದ್ಯಾಲಯಕ್ಕೆ ಕೋರಿರುತ್ತಾರೆ. ಅದರಂತೆ ದಿನಾಂಕ:13-11-2020 ರಂದು ನಡೆದ | ದಿನಾಂಕ: 23.10.2019ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಕರ್ನಾಟಕ ವೈಭವ ವೈಚಾರಿಕತೆ ಹಬ್ಬಕ್ಕಾಗಿ ಸನ್ಮಾನ್ಯ ಉಪರಾಷ್ಟ್ರಪತಿಗಳಾದ ಶ್ರೀ ವೆಂಕಯ್ಯನಾಯ್ಡು ಅವರು ಉದ್ಘಾಟಿಸಲಿದ್ದು ಈ ವೈಚಾರಿಕ ಹಬ್ಬಕ್ಕೆ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಆಸಕ್ತರು ಸಕ್ರಿಯವಾಗಿ ಪಾಲ್ಗೊಳ್ಳಲು ಕ್ರಮವಹಿಸುವಂತೆ ಮಾನ್ಯ ಕುಲಪತಿಯವರಿಗೆ ಪತ್ರ ಬರೆದಿರುತ್ತಾರೆ. ವಿಶ್ವವಿದ್ಯಾಲಯಕ್ಕೆ ದಿನಾಂಕ 27.12.2019ರಂದು ಸಂಯೋಜಕರು ಪರಿವರ್ತನಾ ಸಂಸ್ಥೆ, ರಾಣಿಬೆನ್ನೂರು ಇವರು ಕುಲಪತಿಯವರಿಗೆ ಪತ್ರ ಬರೆದು | |

ಕಾರ್ಯಕಾರಿ ಸಮಿತಿ 202ನೇ ಸಭೆಯಲ್ಲಿ ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ರೂ.1.00 ಲಕ್ಷಗಳ ಸಹಾಯಧನವನ್ನು ರಾಣೆಬೆನ್ನೂರಿನ ನಾಗಶಾಂತಿ ವಿದ್ಯಾಸಂಸ್ಥೆಗೆ ನೀಡಲು ತೀರ್ಮಾನಿಸಿರುತ್ತಾರೆ.

ರೂ.1 ಲಕ್ಷಗಳ ಪಾವತಿ ವಿವರ ಈ ಕೆಳಗಿನಂತಿದೆ.

| **ಕ್ರ. ಸಂ** | **ಲೆಕ್ಕ ಶೀರ್ಷಿಕೆ** | **ಚೆಕ್ ಸಂಖ್ಯೆ/ ದಿನಾಂಕ** | **ಸಂಸ್ಥೆ ಹೆಸರು** | **ಪಾವತಿ ಮೊತ್ತ** |
|---|---|---|---|---|
| 1 | 2050<br>201 | 108219<br>17-03-2020 | ಜ್ಞಾನ ಸಂಗಮ (ಪರಿವರ್ತನಾ ನಾಗಶಾಂತಿ) | 1,00,000 |

01. (ನಾಗಶಾಂತಿ) ಸಂಸ್ಥೆಯವರು ಆಯೋಜಿಸಿರುವ ಬಗ್ಗೆ ಹಾಗೂ ಸರಕಾರದಿಂದ ಲಿಖಿತ ರೂಪದಲ್ಲಿ ಯಾವುದೇ ನಿರ್ದೇಶನ/ಆದೇಶವಿಲ್ಲದೆ ನೇರವಾಗಿ ಸಂಸ್ಥೆಯವರಿಗೆ ಪಾವತಿಸಿದ್ದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.

**02**. ಲೆಕ್ಕ ಶೀರ್ಷಿಕೆ 2050/201ರ ಅಡಿಯಲ್ಲಿ ಸದರಿ ವೆಚ್ಚವನ್ನು ಭರಿಸಲಾಗಿದ್ದು, ಆದರೆ ಸದರಿ ಲೆಕ್ಕಶೀರ್ಷಿಕೆಯು **"ವಿಚಾರಣ ಸಂಕಿರಣ ವೆಚ್ಚಗಳು"** ಉದ್ದೇಶಕ್ಕಾಗಿ ಮಾತ್ರ ವೆಚ್ಚ ಭರಿಸಬೇಕಾಗಿದ್ದು ಇಲ್ಲಿ ಸಹಾಯಧನವೆಂದು ಪಾವತಿ ಮಾಡಿ ತಪ್ಪಾಗಿ ವೆಚ್ಚ ಮಾಡಲಾಗಿರುತ್ತದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:09 ದಿನಾಂಕ:29-09-2021 ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕರ್ನಾಟಕ ವೈಭವ ಹಬ್ಬಕ್ಕೆ ಉನ್ನತ ಶಿಕ್ಷಣ ಪರಿಷತ್ತು ಬೆಂಗಳೂರು ಇವರ ಪತ್ರ ಮತ್ತು ಪರಿವರ್ತನೆ ಸಂಸ್ಥೆಯವರು ಪತ್ರದನ್ವಯ ಹಾಗೂ ಮಾನ್ಯ ಕುಲಪತಿಯವರ ಆದೇಶದನ್ವಯ ಕಾರ್ಯಕಾರಿ ಸಮಿತಿಯಲ್ಲಿ ಅನುಮೋದನೆ ಪಡೆದು ನೀಡಲಾಗಿದೆ ಎಂದು ತಿಳಿಸಿದ್ದು, ಆದರೆ ಸಂಬಂಧಿಸಿದ ಆದೇಶ ಪ್ರತಿಗಳು ಲಗತ್ತಿಸದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿ, ಸದರಿ ಮೊತ್ತ **ರೂ.1,00,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ವಿಶ್ವವಿದ್ಯಾಲಯದಿಂದ ಕನಿಷ್ಠ ರೂ. 2,00,000.00ಗಳ ಅನುದಾನವನ್ನು ನೀಡಲು ವಿನಂತಿಸಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಬರೆದಿರುವ ಪತ್ರ (ನೆರಳಚ್ಚು ಪ್ರತಿ ಲಗತ್ತಿಸಿದೆ) ಮತ್ತು ಪರಿವರ್ತನಾ ಸಂಸ್ಥೆಯವರು ಬರೆದಿರುವ ಪತ್ರ (ನೆರಳಚ್ಚು ಪ್ರತಿ ಲಗತ್ತಿಸಿದೆ) ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಮಾನ್ಯ ಕುಲಪತಿಯವರು ದಿನಾಂಕ 26.12.2019 ರಂದು ತಿಳಿಸಿರುವ ಹಿನ್ನೆಲೆಯಲ್ಲಿ 202 ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲಾಯಿತು (ನೆರಳಚ್ಚು ಪ್ರತಿ ಲಗತ್ತಿಸಿದೆ) ದಿನಾಂಕ 13.01.2020 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯ ಕೈಗೊಳ್ಳಲಾಗಿದೆ.

ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸದ್ಯ ವಿಶ್ವವಿದ್ಯಾಲಯದ ಪ್ರತಿನಿಧಿಗಳಾಗಿ ಭಾಗವಹಿಸುವ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಪ್ರಯಾಣ ವೆಚ್ಚಗಳನ್ನು ಭರಿಸುವ ಮೂಲಕ ಸದರಿ ಕಾರ್ಯಕ್ರಮಕ್ಕೆ ನೆರವು ನೀಡಲು ಸಭೆಯು ಅನುಮೋದಿಸಿತು. ಪರಿವರ್ತನಾ ಸಂಸ್ಥೆಯವರು ಬರೆದ ಪತ್ರದಲ್ಲಿ ಕಂಡಿಕೆ ಸಂಖ್ಯೆ: 03ರಲ್ಲಿ ದಿನಾಂಕ 18.01.2020ರಂದು ನಡೆಯುವ ಗೋಷ್ಠಿಗೆ ತಮ್ಮ ವಿಶ್ವವಿದ್ಯಾಲಯದಿಂದ 50 ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಕಳುಹಿಸಲು ಕೋರಿ ಇವರಿಗೆ ಯಾವುದೇ ನೋಂದಣಿ ಶುಲ್ಕ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಇವೆಲ್ಲ ಕಾರಣದಿಂದ ವಿಶ್ವವಿದ್ಯಾಲಯದಿಂದ 50 ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಕಳುಹಿಸಲು ಕೋರಿ ಇವರಿಗೆ ಯಾವುದೇ ನೋಂದಣಿ ಶುಲ್ಕ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಇವೆಲ್ಲ ಕಾರಣದಿಂದ

<table>
<tr><td></td><td></td><td>ವಿಶ್ವವಿದ್ಯಾಲಯದಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಕನ್ನಡದ ಕೆಲಸ ಹಾಗೂ ಮಾನ್ಯ ಉಪರಾಷ್ಟ್ರಪತಿಗಳು ಇದರ ಉದ್ಘಾಟನೆ ಮಾಡುವ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಪರಿವರ್ತನಾ ಸಂಸ್ಥೆಯವರು ಕೇಳಿರುವ ರೂ. 2,00,000.00 ಅನುದಾನ ಬದಲಾಗಿ ಕಾರ್ಯಕಾರಿ ಸಮಿತಿಯ ಹಾಗೂ ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ರೂ. 1,00,000.00 ಅನುದಾನ ನೀಡಲಾಗಿದೆ. ವಿಶ್ವವಿದ್ಯಾಲಯದ ಲೆಕ್ಕಶೀರ್ಷಿಕೆಯಲ್ಲಿ ಸಹಾಯಧನ ವೆಚ್ಚವಿಲ್ಲದೆ ಇರುವುದರಿಂದ ವಿಚಾರ ಸಂಕಿರಣ ವೆಚ್ಚದಡಿಯಲ್ಲಿ ಪಾವತಿಸಲಾಗಿದೆ. ಈ ಮೇಲಿನ ವಿವರಣೆಯನ್ವಯ ಈ ಮೇಲಿನ ಕಂಡಿಕೆಯನ್ನು ಕೈಬಿಡಲು ಮಾನ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ.</td><td></td></tr>
<tr><td>33</td><td>ವಸ್ತು ಸಂಗ್ರಹಾಲಯ ಮತ್ತು ಪ್ರವಾಸೋದ್ಯಮ ಸಂಶೋಧನಾ ಕೇಂದ್ರದಲ್ಲಿ ಅನಾವಶ್ಯಕ ವೆಚ್ಚ ಮಾಡಿರುವ ಕುರಿತು.<br>ವಸ್ತು ಸಂಗ್ರಹಾಲಯ ಮತ್ತು ಪ್ರವಾಸೋದ್ಯಮ ಕೇಂದ್ರದ ಕಟ್ಟಡದಲ್ಲಿ ನ್ಯಾಕ(ಪೀರ್) ಟೀಮ್ ಭೇಟಿ ನೀಡುವುದರ ಹಿನ್ನೆಲೆಯಲ್ಲಿ ವಸ್ತುಗಳ ಸ್ವಚ್ಛತೆ ಮತ್ತು ಸಂರಕ್ಷಣೆಗಾಗಿ ರೂ.90,000/–ಗಳ ಮುಂಗಡ ಹಣವನ್ನು ವಿಭಾಗದ ನಿರ್ದೇಶಕರಾದ ಡಾ. ವಾಸುದೇವ ಬಡಿಗೇರ್ ಇವರಿಗೆ ಚೆಕ್ ಸಂ:125557 ದಿನಾಂಕ:17–10–2019 ರ ಮೂಲಕ ನೀಡಲಾಗಿರುತ್ತದೆ. ಸದರಿ ಅವರು ರೂ.90,000/–ಗಳನ್ನು ಖರ್ಚು ಮಾಡಿ ಹೊಂದಾಣಿಕೆ ಬಿಲ್ಲಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು, ವಿವರ ಈ ಕೆಳಗಿನಂತಿದೆ.<br>
<table>
<tr><th>ಕ್ರ.ಸಂ.</th><th>ಮುಂಗಡ ಹಣ ಪಡೆದವರ ಹೆಸರು</th><th>ಓಚರ್ ಸಂಖ್ಯೆ ಮತ್ತು ದಿನಾಂಕ</th><th>ಓಚರನ ಮೊತ್ತ</th></tr>
<tr><td>01</td><td>ಡಾ॥ ವಾಸುದೇವ ಬಡಿಗೇರ(ನಿರ್ದೇಶಕರು)</td><td>260<br>15–02–2020</td><td>90,000</td></tr>
</table>
(ಬಿಲ್ಲುವಾರು ವಿವರ ಅನುಬಂಧ–15 ರಲ್ಲಿ ನೀಡಲಾಗಿರುತ್ತದೆ)</td><td>ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರು ಸೂಚಿಸಿದ ಹಿನ್ನೆಲೆಯಲ್ಲಿ ವಸ್ತುಸಂಗ್ರಹಾಲಯದ ವಸ್ತುಗಳು ಮತ್ತು ಕಲಾಕೃತಿಗಳ ಸ್ವಚ್ಛತೆ ಹಾಗೂ ಸಂರಕ್ಷಣೆಗೆ ಬೇಕಾಗುವ ಸಾಮಗ್ರಿಗಳ ಖರೀದಿ, ಲೇಬರ್‌ಗಳ ವೇತನಕ್ಕೆ ಬಳಕೆ ಮಾಡಿರುವುದನ್ನು ಜೊತೆಗೆ ನ್ಯಾಕ್ ಸಮಿತಿ ಕಾರ್ಯ ನಿರ್ವಹಿಸಿದ ಬಗ್ಗೆ ತಿಳಿಸಲಾಯಿತು. ಅದೇ ದಿನದಂದು ಲೆಕ್ಕಪರಿಶೋಧನಾ ತಂಡವು ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದಾಗ ವಸ್ತುಗಳ ಸ್ವಚ್ಛತೆ ಮತ್ತು ಸಂರಕ್ಷಣೆ ಮಾಡಿರುವುದನ್ನು ಪರಿಶೀಲಿಸಿತು. ಈ ಹಿನ್ನೆಲೆಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿಯನ್ನು ಕೈ ಬಿಡಲು ಕೇಳಿಕೊಳ್ಳಲಾಯಿತು. ಲೆಕ್ಕ ಪರಿಶೋಧನಾ ತಂಡವು ನಮ್ಮ ಕೋರಿಕೆಗೆ ಸಮ್ಮತಿ ಸೂಚಿಸಿದ್ದರಿಂದ ಪ್ರಸ್ತುತ ಆಕ್ಷೇಪಣೆ ಮತ್ತು ವಸೂಲಾತಿಯನ್ನು ಕೈಬಿಡಲು ಕೋರಿದೆ.</td><td></td></tr>
</table>

| | | | |
|---|---|---|---|
| | ಸದರಿ ಪಾವತಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ವಿವರ ಈ ಕೆಳಗಿನಂತಿದೆ.<br>01) **ಅನುಬಂಧ-15ರಲ್ಲಿ** ವಿವರಿಸಿರುವಂತೆ ಕ್ರಮ ಸಂಖ್ಯೆ 1 ರಿಂದ 11 ರ ವರೆಗಿನ ಪಾವತಿಯನ್ನು ಸ್ವಚ್ಚತಾ ಕೆಲಸಕ್ಕಾಗಿ ಪ್ರತಿದಿನಕ್ಕೆ ರೂ.800/-,ರೂ.500/-, ರೂ.250/- & ರೂ.210/- ರಂತೆ ಒಟ್ಟು ರೂ.71,100/- ಗಳನ್ನು ಕೈ ರಸೀದಿಯನ್ನು ಪಡೆದು ಪಾವತಿ ಮಾಡಲಾಗಿರುತ್ತದೆ.<br>ಸದರಿ ಪಾವತಿಗೆ ಸಂಬಂಧಿಸಿದಂತೆ ಪ್ರತಿ ದಿನಕ್ಕೆ ನೀಡಲಾದ ದರಗಳನ್ನು DSR ಆಧಾರದ ಮೇಲೆ ಪಡೆಯದೇ ಹಾಗೂ ವಿಶ್ವವಿದ್ಯಾಲಯದ ತಾಂತ್ರಿಕ ಶಾಖೆಯವರಿಂದ ಅಭಿಪ್ರಾಯವನ್ನು ಪಡೆಯದೇ ದರ ನಿಗದಿಪಡಿಸಿದ್ದನ್ನು ಆಕ್ಷೇಪಿಸಲಾಗಿದೆ.<br>ಅಲ್ಲದೆ ವಿಶ್ವವಿದ್ಯಾಲಯದವರು ನೀಡಲಾದ ಮಾಹಿತಿ ಅನ್ವಯ ಸದರಿ ವಿಭಾಗದಲ್ಲಿ ಒಬ್ಬ ಖಾಯಂ ಗ್ರೂಪ್ 'ಡಿ' ಸಿಬ್ಬಂದಿಯು ಕಾರ್ಯನಿರ್ವಹಿಸುತ್ತಿದ್ದು, ತಿಳಿದುಬಂದಿರುತ್ತದೆ. ಸದರಿ ವಿಭಾಗದಲ್ಲಿ ಒಬ್ಬ ಖಾಯಂ ಗ್ರೂಪ್ ಡಿ ಸಿಬ್ಬಂದಿಯು ಕೆಲಸ ನಿರ್ವಹಿಸುತ್ತಿರುವಾಗ 20 ಜನ ಸ್ವಚ್ಚತಾ ಸಿಬ್ಬಂದಿಗಳನ್ನು ನಿಯೋಜಿಸಿ ಕೆಲಸ ಪಡೆದು ರೂ.71,100/-ಗಳನ್ನು ಪಾವತಿ ಮಾಡಿರುವುದನ್ನು ಅನಾವಶ್ಯಕ ವೆಚ್ಚವೆಂದು ಪರಿಗಣಿಸಿ ಸಂಬಂಧಪಟ್ಟ ವಿಭಾಗದ ನಿರ್ದೇಶಕರಿಂದ ವಸೂಲಿಸಲು ಸೂಚಿಸಿದೆ.<br>ಸರಕಾರದ ಆದೇಶ ಸಂ:ಆಇ:01 ಪಿಸಿಇ 2019,ಬೆಂಗಳೂರು ದಿನಾಂಕ:04-05-2019 ರನ್ವಯ ಹಾಗೂ ಸಾದಿಲ್ವಾರು ವೆಚ್ಚ ಕೈಪಿಡಿ 1958 ನಿಯಮಗಳ ನಿಯಮ 55 (49)(ಎ)ರ ಅನ್ವಯ ಕಛೇರಿಗಳಲ್ಲಿ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ರೂ.10,000/-ಗಳವರೆಗಿನ ಖರೀದಿಗೆ ಅವಕಾಶವಿರುತ್ತದೆ. ರೂ.10,000/- ಕ್ಕಿಂತ ಮೇಲ್ಪಟ್ಟು ಮತ್ತು ರೂ.1 ಲಕ್ಷಗಳ ವರೆಗಿನ ಖರೀದಿಗಳನ್ನು ಕಡ್ಡಾಯವಾಗಿ ದರಪಟ್ಟಿ ಕರೆಯುವುದರ ಮೂಲಕ ಖರೀದಿಸಬೇಕಾಗಿರುತ್ತದೆ.<br>ಆದರೆ **ಅನುಬಂಧ-15 ರಲ್ಲಿ** ಕ್ರಮ ಸಂಖ್ಯೆ.12 ರಲ್ಲಿ ರೂ.18,937/-ಗಳ ಹಾರ್ಡವೇರ್ ಸಾಮಗ್ರಿಗಳನ್ನು ದರಪಟ್ಟಿ ಕರೆಯದೇ ನೇರವಾಗಿ ಖರೀದಿಸಿ ಸದರಿ ನಿಯಮದ ಉಲ್ಲಂಘನೆ ಮಾಡಿರುತ್ತಾರೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:24 ದಿನಾಂಕ:10-11-2021 ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ವಸ್ತು ಸಂಗ್ರಹಾಲಯದ ವಸ್ತುಗಳ ಸ್ವಚ್ಛತೆ ಹಾಗೂ ಸಂರಕ್ಷಣೆಗೆ ಬೇಕಾದ ಸಾಮಗ್ರಿಗಳ ಖರೀದಿ, ಲೇಬರ್‌ಗಳ ವೇತನಕ್ಕೆ ಬಳಕೆ ಮಾಡಿರುವುದನ್ನು ಜೊತೆಗೆ ನ್ಯಾಕ್ ಸಮಿತಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ತುರ್ತಾಗಿ ಕೆಲಸ ನಿರ್ವಹಿಸಿದ ಬಗ್ಗೆ ತಿಳಿಸಲಾಯಿತು. ಆದರೆ ಸದರಿ ವಿಭಾಗದಲ್ಲಿ ವೆಚ್ಚಗಳನ್ನು ಮಾಡಲು ಯಾವುದೇ ರೀತಿಯ ಘಟನೋತ್ತರ ಮಂಜೂರಾತಿಗಳೂ ಹಾಗೂ ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ ಉಲ್ಲಂಘನೆ ಮಾಡಿ ಖರೀದಿ ಮಾಡಿರುವುದು ಕಂಡುಬಂದಿದ ಪ್ರಯುಕ್ತ ಕಂಡಿಕೆಯನ್ನು | | |

| | | | |
|---|---|---|---|
| | ಮುಂದುವರಿಸಿದೆ. ಸೂಕ್ತ ದಾಖಲಾತಿಗಳೊಂದಿಗೆ ನೀಡುವವರೆಗೂ **ರೂ.18,937/-ಗಳನ್ನು ಆಕ್ಷೇಪಣೆ** ಮತ್ತು **ರೂ.71,100/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | | |
| 34 | **ಕುಲಪತಿಗಳ ಆಪ್ತಕಾರ್ಯದರ್ಶಿ ವಿಭಾಗದಲ್ಲಿ ನಗದು ಪುಸ್ತಕವನ್ನು ನಿರ್ವಹಿಸದೇ ಇರುವ ಕುರಿತು.**<br>ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 331ರ ಪ್ರಕಾರ ನಗದು ಪುಸ್ತಕವನ್ನು ಪ್ರತಿ ನಿತ್ಯವೂ ಬರೆಯತಕ್ಕದ್ದು, ಪ್ರತಿಯೊಂದು ಜಮೆ ಅಥವಾ ವೆಚ್ಚಕ್ಕೆ ಸಂಬಂಧಿಸಿದ ನಮೂದನ್ನು ವ್ಯವಹಾರಕ್ಕೆ ತಕ್ಕಂತೆ ಏಕಕಾಲದಲ್ಲಿ ಮಾಡತಕ್ಕದ್ದು, ಪ್ರತಿ ದಿನವೂ ಪ್ರಾರಂಭದ ಶಿಲ್ಕ್‌ನ್ನು ಜಮೆಗಳ ಸಾಲಿನಲ್ಲಿ ತಂದು ಆ ದಿನದ ವ್ಯವಹಾರ ಕಾಲಂದಲ್ಲಿ ಸ್ವೀಕರಿಸಿಕೊಂಡ ಮೊತ್ತಗಳನ್ನು ಜಮೆಗಳ ಸಾಲಿನಲ್ಲಿ ಅವುಗಳ ಸ್ವೀಕೃತಿಗಳ ಅನುಕ್ರಮದಲ್ಲಿ ಬರೆಯತಕ್ಕದ್ದು ಹಾಗೆಯೇ ಪ್ರತಿ ಬಾಬ್ತಿನ ಬಗ್ಗೆ ಮಾಡಿದ ವೆಚ್ಚ ಅವುಗಳ ಎದುರಿಗೆ ಸಂವಾದಿ ವೋಚರ್ ನಂಬರ್‌ನ್ನು ಸೂಚಿಸಿ ವೆಚ್ಚದ ಸಾಲಿನಲ್ಲಿ ಬರೆಯತಕ್ಕದ್ದು, ಪ್ರತಿ ದಿನವೂ ನಗದು ಪುಸ್ತಕವನ್ನು ಪೂರ್ಣಗೊಳಿಸಿ ಶಿಲ್ಕನ್ನು ಬರೆಯತಕ್ಕದ್ದು, ತಿಂಗಳ ಕೊನೆಯಗೆ ತಿಂಗಳ ಕೊನೆಯ ದಿನದ ವ್ಯವಹಾರವು ಪೂರ್ತಿಗೊಂಡ ತರುವಾಯ ಪ್ರತಿದಿನದ ಕೊನೆಯಲ್ಲಿ ಪೂರ್ಣಗೊಳಿಸುವಂತೆಯೇ ನಗದು ಪುಸ್ತಕ ಪೂರ್ಣಗೊಳಿಸತಕ್ಕದ್ದು ಮತ್ತು ನಗದು ಶಿಲ್ಕುಗಳಿಗನುಗುಣವಾಗಿ ವಿವರವಾಗಿ ಬಾಬ್ತುಗಳ ವಿವರವನ್ನು ಕೊಡತಕ್ಕದ್ದು ಎಂದು ತಿಳಿಸಿದೆ.<br>ಅದೇ ರೀತಿ ಆರ್ಥಿಕ ವರ್ಷದ ಕೊನೆಯ ದಿನಾಂಕದಂದು (31-03-2020)ಕ್ಕೆ ಲೆಕ್ಕ ಸಮನ್ವಯ (Bank Reconcilation Statement) ಮಾಡಿ ನಗದು ಪುಸ್ತಕಕ್ಕೆ ಮತ್ತು ಬ್ಯಾಂಕ್ ಪಾಸ್ ಬುಕ್‌ಗೆ ಜಮೆ ಹಾಗೂ ಖರ್ಚು ಆಗದೇ ಇರುವ ಚೆಕ್‌ಗಳ ಸಂಖ್ಯೆ ನಗದು ಪುಸ್ತಕದಲ್ಲಿ ನಮೂದಿಸಬೇಕು.<br>ನಗದು ಪುಸ್ತಕವನ್ನು ಈ ಮೇಲೆ ತಿಳಿಸಿದ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದದ ಪ್ರಕಾರ ನಿರ್ವಹಿಸದೇ ಇರುವದರಿಂದ ನಿಯಮ ಉಲ್ಲಂಘನೆಯಾಗಿರುತ್ತದೆ.<br>ಆದರೆ ಕುಲಪತಿಗಳ ಆಪ್ತ ಕಾರ್ಯದರ್ಶಿ ವಿಭಾಗದವರು ಬ್ಯಾಂಕ್ ಆಫ್ ಇಂಡಿಯಾ ಕಮಲಾಪುರ ಶಾಖೆಯಲ್ಲಿ ಉಳಿತಾಯ ಖಾತೆ ಸಂಖ್ಯೆ: 840010110000381 ಹೊಂದಿದ್ದು, ಸದರಿ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ.<br>**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:29 ದಿನಾಂಕ: 11-11-2021 ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಮೇಲೆ ತಿಳಿಸಿದ KFC ಅನುಚ್ಛೇದ 331ರ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸುವುದು. ಅಲ್ಲಿಯವರೆಗೆ ಬ್ಯಾಂಕ್ ಸ್ಟೇಟ್‌ಮೆಂಟ್‌ನ ಅನ್ವಯ 2019-20ನೇ ಸಾಲಿನಲ್ಲಿ ಪಾವತಿಯಾದ ಮೊತ್ತ **ರೂ.16,03,528/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | 2019-20ನೇ ಸಾಲಿನಲ್ಲಿ ಮಾನ್ಯ ಕುಲಪತಿಗಳ ಆಪ್ತಶಾಖೆಯ ವಿಭಾಗದಿಂದ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಉಳಿತಾಯ ಖಾತೆ ಸಂಖ್ಯೆ: 842210110000381 ನಿರ್ವಹಿಸಲಾಗುತ್ತಿದ್ದು, ತಾಂತ್ರಿಕ ಕಾರಣ ಮತ್ತು ಕಾರ್ಯ ಒತ್ತಡದಿಂದಾಗಿ ನಗದು ಪುಸ್ತಕ ನಿರ್ವಹಿಸಿರುವುದಿಲ್ಲ. ಇನ್ನು ಮುಂದೆ ಕುಲಪತಿ ಆಪ್ತಶಾಖೆಯ ವಿಭಾಗದಿಂದ ನಗದು ಪುಸ್ತಕವನ್ನು ನಿರ್ವಹಿಸಲಾಗುವುದು. ಆದ್ದರಿಂದ ಈ ಶಾಖೆಯಿಂದ ಪಾವತಿಯಾದ ರೂ. 16,03,528/-ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. | |

**35**

**ಶ್ರೀಮತಿ ಅಮರಮ್ಮ ಸಿ. ಅಟೆಂಡರ್ ಇವರ ಸಂಭಾವನೆಯನ್ನು ನಿಯಮಾನುಸಾರ ಪಾವತಿ ಮಾಡದೇ ಇರುವ ಬಗ್ಗೆ.**

ಕನ್ನಡ ವಿಶ್ವವಿದ್ಯಾಲಯ ಮಹಿಳಾ ಅಧ್ಯಯನ ವಿಭಾಗದಲ್ಲಿ ಅಟೆಂಡರ್ ಆಗಿ ಕೆಲಸ ನಿರ್ವಹಿಸಿದ್ದಕ್ಕೆ ಶ್ರೀಮತಿ ಅಮರಮ್ಮ ಸಿ. ಇವರಿಗೆ ಪ್ರತಿ ತಿಂಗಳಿಗೆ ಸಂಭಾವನೆ ರೂ.9,100/– ಗಳಂತೆ 2019–20ನೇ ಸಾಲಿನಲ್ಲಿ UGC ಅನುದಾನದಡಿ ಒಟ್ಟು ರೂ.89,796/–ಗಳನ್ನು ಪಾವತಿ ಮಾಡಲಾಗಿದ್ದು, ವಿವರ ಈ ಕೆಳಗಿನಂತಿದೆ.

| | | | | |
|---|---|---|---|---|
| 1 | 4100–12 | 087363<br>25–04–019 | 9,100=00 | ಮಾರ್ಚ್–2019ರ ಮಾಹೆಯ ಸಂಭಾವನೆ. |
| 2 | 4100–12 | 087364<br>25–07–2019 | 35,803=00 | ಏಪ್ರಿಲ್–2019 ರಿಂದ ಜುಲೈ–2019ರ ವರೆಗಿನ ಸಂಭಾವನೆ |
| 3 | 4100–12 | 087365<br>16–10–2019 | 17,593=00 | ಆಗಸ್ಟ್–2019 ರಿಂದ ಸೆಪ್ಟೆಂಬರ್–2019 ರವರೆಗಿನ ಸಂಭಾವನೆ |
| 4 | 4100–12 | 087371<br>04–02–2010 | 27,300=00 | ಅಕ್ಟೋಬರ್–2019 ರಿಂದ ಡಿಸೆಂಬರ್ –2019 ರವರೆಗಿನ ಸಂಭಾವನೆ |
| | | **ಒಟ್ಟು** | **89,796=00** | |

ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ವಿವರ ಈ ಕೆಳಗಿನಂತಿದೆ.

01. **ಸದರಿಯವರ ಸಂಭಾವನೆಯ** ಪಾವತಿಯನ್ನು ಹೊರಮೂಲ ಸಂಸ್ಥೆಯಿಂದ (Man Power Agency) ಸೇವೆಯನ್ನು ಪಡೆದು ಬಿಲ್ಲು ಪಾವತಿ ಮಾಡುವ ಬದಲಾಗಿ ನೇರವಾಗಿ ಶ್ರೀಮತಿ ಅಮರಮ್ಮ ಸಿ. ಅಟೆಂಡರ್ ಇವರಿಗೆ ಪಾವತಿ ಮಾಡಿರುವುದನ್ನು ಆಕ್ಷೇಪಿಸಿದೆ.
02. **ಕಾರ್ಮಿಕ ಇಲಾಖೆಯಿಂದ ನಿಗದಿಪಡಿಸಿದ ಕನಿಷ್ಠ ಕೂಲಿ** ವೇತನ (Minimum Wages) ನೀಡುವ ಬದಲು ಸದರಿಯವರಿಗೆ ಪಾವತಿ ಮಾಡುತ್ತಿರುವ ರೂ.9,100/– (ಪ್ರತಿ ಮಾಹೆಗೆ)ಗಳನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗಿದೆ ಎನ್ನುವ ಬಗ್ಗೆ ವಿವರಣೆ ನೀಡುವುದು.

2019–20ನೇ ವರ್ಷದ ಲೆಕ್ಕ ಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿರುವ 2002–03ರಿಂದ 2019–20ರ ವರೆಗಿನ ಆಡಿಟ್ ವರದಿಗಳ ಆಕ್ಷೇಪನೆಗೆ ಸ್ಪಷ್ಟೀಕರಣದೊಮದಿಗೆ ಸಲ್ಲಿಸುತ್ತಿರುವ ಅನುಪಾಲನಾ ವರದಿ ಈ ಕೆಳಗಿನಂತಿದೆ.

1. ಯುಜಿಸಿಯು 12ನೇ ಪಂಚವಾರ್ಷಿಕ ಯೋಜನೆ ಸಂಬಂಧಿ ಭಾರತದ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಮಹಿಳಾ ಅಧ್ಯಯನದ ಬೆಳವಣಿಗೆ ಕುರಿತ ಮಾರ್ಗಸೂಚಿಯಲ್ಲಿ ಮಹಿಳಾ ಅಧ್ಯಯನ ಕೇಂದ್ರದ ಅಟೆಂಡರ್ ಹುದ್ದೆಯ ಸೇವೆಯನ್ನು ಹೊರ ಮೂಲದಿಂದ ಪಡೆಯಲು ಅವಕಾಶವಿರುವುದಿಲ್ಲ.
2. ಯುಜಿ.ಸಿ12ನೇ ಪಂಚವಾರ್ಷಿಕ ಯೋಜನೆ ಮಾರ್ಗಸೂಚಿಯ ಪ್ರಕಾರ ಮಹಿಳಾ ಅಧ್ಯಯನ ಕೇಂದ್ರದ ಅಟೆಂಡರ್ ಹುದ್ದೆಗೆ ವೇತನ ನಿಗದಿ ಮತ್ತು ಪಾವತಿಸಲು ಕೇಂದ್ರದ ಸಲಹಾ ಸಮಿತಿ ನಿರ್ಣಯಗಳನ್ನು ಸಕ್ಷಮ ಪ್ರಾಧಿಕಾರದಲ್ಲಿ ಅನುಮೋದನೆಗೊಂಡು ಆದೇಶಗಳನ್ನು ಪಾಲನೆಗೆ ಅವಕಾಶವಿದೆಯೇ ಹೊರತು ಅದರ ಬದಲಾಗಿ ಬೇರೆ ಇಲಾಖೆಯ ಆದೇಶಗಳನ್ನು ಅಳವಡಿಸಿಕೊಳ್ಳಲು ಯುಜಿಸಿಯು ಯಾವುದೇ ಆದೇಶಗಳನ್ನು ನಮ್ಮ ಸಂಸ್ಥೆಗೆ ನೀಡಿರುವುದಿಲ್ಲ.
3. ಪಿ.ಎಫ್ ಮತ್ತು ಇಎಸ್ಐಸಿ ವಂತಿಕೆಯನ್ನು ಕಡಿತಗೊಳಿಸುವ ಬಗ್ಗೆ ಮಹಿಳಾ ಅಧ್ಯಯನ ಕೇಂದ್ರದ ಯುಜಿಸಿಯ 12ನೇ ಪಂಚವಾರ್ಷಿಕ

| | | | |
|---|---|---|---|
| | 03. PF ಮತ್ತು ESIC ಆಕ್ಟನ್ ಅನ್ವಯ ಸದರಿ ಸಿಬ್ಬಂದಿಯವರ ಸಂಭಾವನೆ ಬಿಲ್ಲಿನಲ್ಲಿ ಕಡ್ಡಾಯವಾಗಿ PF & ESIC ವಂತಿಗೆಯನ್ನು ಕಡಿತಗೊಳಿಸಬೇಕಾಗಿರುತ್ತದೆ. ಆದರೆ ಸದರಿಯವರ ಬಿಲ್ಲಿನಲ್ಲಿ ಯಾವುದೇ ಕಡಿತಗಳನ್ನು ಮಾಡದೇ ಇರುವುದಕ್ಕೆ ವಿವರಣೆ ನೀಡುವುದು.<br>04. ಸದರಿ ಸಿಬ್ಬಂದಿಯವರಿಗೆ ಮಂಜೂರಾತಿ ಹುದ್ದೆಯ ಎದುರಾಗಿ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ಹಾಗೂ ನೇಮಕಾತಿ ಪ್ರಕ್ರಿಯೆಯ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>05. ಸದರಿ ಬಿಲ್ಲಿನ ಪಾವತಿಯನ್ನು UGC ಅನುದಾನದ ಅಡಿಯಲ್ಲಿ ಪಾವತಿಸಲು ಅವಕಾಶವಿರುವ ಬಗ್ಗೆ ಯಾವುದೇ ಆದೇಶ, ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:43 ದಿನಾಂಕ: 18–11–2021 ನೀಡಲಾಗಿದೆ** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಅಮರಮ್ಮ ಸಿ ಯುಜಿಸಿ ಪ್ರಾಯೋಜಿತ ಮಹಿಳಾ ಅಧ್ಯಯನ ಕೇಂದ್ರ ಅವರ ನೇಮಕಾತಿ ಯುಜಿಸಿ 12ನೇ ಪಂಚವಾರ್ಷಿಕ ಯೋಜನೆ ಹಾಗೂ ಅವರ ಮುಂದುವರಿಕೆಯ ಭಾಗವಾಗಿ ಅಟೆಂಡರ್ ಆಗಿ ನೇಮಕ ಹೊಂದಿದ್ದಾರೆ. ಸದರಿಯವರ ಪ್ರತಿ ಶೈಕ್ಷಣಿಕ ವರ್ಷದ ಬಳಕೆ ಪ್ರಮಾಣ ಪತ್ರವನ್ನು (ಯುಸಿ) ಪ್ರತ್ಯೇಕ ಆಡಿಟ್ ರಿಪೋರ್ಟ್‌ನೊಂದಿಗೆ ಯುಜಿಸಿ ನೇರವಾಗಿ ಸಲ್ಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಆದರೆ ಸದರಿಯವರಿಗೆ ನೇರವಾಗಿ ಪಾವತಿಸಿರುವುದು, ಕಾರ್ಮಿಕ ಇಲಾಖೆಯಿಂದ ನಿಗದಿಪಡಿಸಿದ ಕನಿಷ್ಟ ಕೂಲಿ ವೇತನ ನೀಡದೆ ಇರುವುದು ಹಾಗೂ ವೇತನದಲ್ಲಿ ಪಿ.ಎಫ್. ಮತ್ತು ಇ.ಎಸ್.ಐ ವಂತಿಗೆ ಕಡಿತಗೊಳಿಸದೇ ಇರುವುದಕ್ಕೆ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. ಮೇಲಿನ ಎಲ್ಲಾ ಅಂಶಗಳಿಗೆ ಸೂಕ್ತವಾದ ದಾಖಲಾತಿಗಳೊಂದಿಗೆ ಸ್ಪಷ್ಟೀಕರಣ ನೀಡುವವರೆಗೆ ಪಾವತಿಯಾದ **ಮೊತ್ತ ರೂ.89,796/– ಆಕ್ಷೇಪಣೆಯಲ್ಲಿಡಲಾಗಿದೆ.** | ಯೋಜನೆಯ ಮಾರ್ಗಸೂಚಿಯಲ್ಲಿ ಈ ಬಗ್ಗೆ ಯಾವುದೇ ನಿರ್ದೇಶನಗಳನ್ನು ತಿಳಿಸಿರುವುದಿಲ್ಲ.<br>4. ಸದರಿ ಸಿಬ್ಬಂದಿಯ ಹುದ್ದೆಯಾದ ಅಟೆಂಡರ್ ಹುದ್ದೆಯು ಮಹಿಳಾ ಅಧ್ಯಯನ ಕೇಂದ್ರಕ್ಕೆ ಮಂಜೂರಾಗಿರುವ ಬಗ್ಗೆ ಮಾನ್ಯ ಕುಲಸಚಿವರಿಗೆ ದಿ:06.03.2012ರಂದು ಬಂದಿರುವ ಆದೇಶವನ್ನು ಲಗತ್ತಿಸಿದೆ. ಇದರಲ್ಲಿ ಸದರಿ ಹುದ್ದೆಯು ಮಂಜೂರಾಗಿರುತ್ತದೆ. ಹಾಗೆಯೇ ಮಂಜೂರಾದ ಹುದ್ದೆಗೆ ಎದುರಾಗಿ ನೇಮಕಾತಿ ಮಾಡಿರುವ ಸಮಿತಿ ಅಧಿಸುಚನೆ, ನಡಾವಳಿ ಹಾಗೂ ದಿನಾಂಕ: 02.03.2013ರಂದು ನೀಡಿರುವ ಅಟೆಂಡರ್ ನೇಮಕಾತಿಯ ಆದೇಶದ ಪ್ರತಿಯನ್ನು ಲಗತ್ತಿಸಿದೆ.<br>5. ಯುಜಿಸಿಯ ಅನುದಾನದ ಅಡಿಯಲ್ಲಿ ಅಟೆಂಡರ್ ಹುದ್ದೆಗೆ ವೇತನ ಪಾವತಿಸಲು ಅವಕಾಶವಿರುವ ಪತ್ರವನ್ನು ಲಗತ್ತಿಸಿದೆ.<br><br>ಮೇಲಿನ ಸ್ಪಷ್ಟೀಕರಣದ ಮತ್ತು ದಾಖಲೆಗಳನ್ನು ಪರಿಗಣಿಸಿ ಯುಜಿಸಿ ನಿಯಮದನ್ವಯ ಮಹಿಳಾ ಅಧ್ಯಯನ ಕೇಂದ್ರದ ಅಟೆಂಡರ್ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಅಮರಮ್ಮ ಸಿ ಇವರಿಗೆ 2019–20ನೇ ಸಾಲಿನಲ್ಲಿ ವೇತನ ಪಾವತಿಯಾಗಿರುವ ಮೊತ್ತ ರೂ. 89796/– ನಿಯಮಾನುಸಾರ ಆಗಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆ ಕೈಬಿಡಬೇಕೆಂದು ಈ ಮೂಲಕ ಕೋರಲಾಗಿದೆ. | |

| | | | |
|---|---|---|---|
| 36 | **ಚಿತ್ರಕಲಾ ವಿಭಾಗದ ವಿವಿಧ ಕೋರ್ಸ್‌ಗಳ ಪರೀಕ್ಷಾ ಕಾರ್ಯಗಳಿಗಾಗಿ ಅಧ್ಯಾಪಕರಿಗೆ ಮುಂಗಡವಾಗಿ ನಗದು ರೂಪದಲ್ಲಿ ಭತ್ಯೆಗಳನ್ನು ಪಾವತಿಸಿದ ಬಗ್ಗೆ.**<br>ಚಿತ್ರಕಲಾ ವಿಭಾಗದ (ಶಿಲ್ಪವನ ಅಭಿವೃದ್ಧಿ ಚಿತ್ರಕಲಾ ವಿಭಾಗ) ವಿವಿಧ ಕೋರ್ಸ್‌ಗಳ ಪರೀಕ್ಷಾ ಕಾರ್ಯಗಳಾದ ಬಿ.ವಿ.ಎ. ಪದವಿ ಮತ್ತು ಡಿಪ್ಲೋಮಾ ಕೋರ್ಸ್‌ನ ಪರೀಕ್ಷೆ ಮಂಡಳಿ ಸಭೆ, ಬಿ.ವಿ.ಎ. ಪದವಿ ಹಾಗೂ ಡಿಪ್ಲೋಮಾ ಕೋರ್ಸ್‌ಗಳ ಪ್ರಶ್ನೆಪತ್ರಿಕೆ ಸಿದ್ದಪಡಿಸುವ ಕಾರ್ಯ, ವಾರ್ಷಿಕ ಪರೀಕ್ಷೆಗಳ ನಿಮಿತ್ತ 3 ವಿಭಾಗಗಳ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ವಿತರಿಸಲು ತಗುಲಿದ ಕಾರ್ಯದ ವಾರ್ಷಿಕ ಪರೀಕ್ಷೆಗಳ ನಿಮಿತ್ತ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ತನಿಖಾಧಿಕಾರಿಗಳು, 3 ವಿಭಾಗದ ವಿಶೇಷ ತನಿಖಾಧಿಕಾರಿಗಳ ಮತ್ತು ಅತಿ ಸೂಕ್ಷ್ಮ ಪರೀಕ್ಷಾ ಕೇಂದ್ರಗಳಿಗೆ ತನಿಖಾಧಿಕಾರಿಗಳ ಕಾರ್ಯ ಹಾಗೂ ವಾರ್ಷಿಕ ಪರೀಕ್ಷಾ ಮೌಲ್ಯಮಾಪನ ಕಾರ್ಯಗಳಿಗಾಗಿ ಅಧ್ಯಾಪಕರಿಗೆ ಮುಂಗಡವಾಗಿ ನಗದು ರೂಪದಲ್ಲಿ ಭತ್ಯೆಗಳ (ಪ್ರಯಾಣ ಭತ್ಯೆ, ದಿನಭತ್ಯೆ, ಸಭಾ ಭತ್ಯೆ ಮತ್ತು ವಾಸ್ತವ್ಯ ಭತ್ಯೆ)ನ್ನು ಪಾವತಿಸಿದ್ದು ವಿವರವನ್ನು **ಅನುಬಂಧ-16ರಲ್ಲಿ** ನೀಡಲಾಗಿದೆ.<br>**"**ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 72 (ಎ)ರಲ್ಲಿ ವಿವರಿಸಿದಂತೆ**"** ರಾಜ್ಯ ಸರ್ಕಾರಕ್ಕೆ ಅವರು ಸಲ್ಲಿಸಿದ ಸೇವೆಗಳ ಬಗ್ಗೆ ಅಥವಾ ಮಾಡಿದ ಸರಬರಾಜುಗಳ ಬಗ್ಗೆ ಒಬ್ಬ ವ್ಯಕ್ತಿ, ವ್ಯಾಪಾರ ಸಂಸ್ಥೆ, ಕಂಪನಿ, ಶಾಸನಬದ್ಧ ನಿರ್ಣಯ ಇತ್ಯಾದಿಗಳ ಹೆಸರಿಗೆ ಬರೆದ ಸರಕಾರಿ ನೌಕರರ ಮತು ನಿವೃತ್ತಿ ವೇತನಗಳ ವೇತನ ಭತ್ಯೆ ನಿವೃತ್ತಿ ವೇತನ ಇತ್ಯಾದಿಗಳ ಸಂದಾಯದ ಹೊರತು, ಇತರೆ ಪ್ರತಿಯೊಂದು ಸಂದರ್ಭದಲ್ಲಿ ರೂ.1,000/-ಗಳನ್ನು ಮತ್ತು ಅದಕ್ಕಿಂತ ಹೆಚ್ಚಿನ ಪಾವತಿಯನ್ನು ಮಾಡಬೇಕಾದಲ್ಲಿ ಕಡ್ಡಾಯವಾಗಿ ಕ್ರಾಸ್ ಮಾಡಿದ ಚೆಕ್ ಮುಖಾಂತರ ಪಾವತಿಸಬೇಕೆಂದು ಸೂಚಿಸಲಾಗಿರುತ್ತದೆ.<br>ಆದರೆ ಚಿತ್ರಕಲಾ ವಿಭಾಗದ ಪರೀಕ್ಷಾ ಕಾರ್ಯಗಳಿಗಾಗಿ ಅಧ್ಯಾಪಕರಿಗೆ ಮುಂಗಡ ರೂಪದಲ್ಲಿ ಒಟ್ಟು ಮೊತ್ತ ರೂ.4,73,694/- ಗಳನ್ನು ನಗದು ರೂಪದಲ್ಲಿ ಪಾವತಿ ಮಾಡಿ ಸದರಿ ಅನುಚ್ಛೇದ ಉಲ್ಲಂಘನೆ ಮಾಡಲಾಗಿದೆ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:44 ದಿನಾಂಕ: 18-11-2021 ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ 2019-20ನೇ ಸಾಲಿನಲ್ಲಿ ನಡೆದ ವಾರ್ಷಿಕ ಪರೀಕ್ಷೆ ಕೇಂದ್ರಗಳಿಗೆ ತನಿಖಾಧಿಕಾರಿಗಳಾಗಿ ತೆರಳಿದ ಅಧಿಕಾರಿಗಳಿಗೆ ಹಾಗೂ ಪರೀಕ್ಷಾ ಮೌಲ್ಯ ಮಾಪನ ಕಾರ್ಯದಲ್ಲಿ ತೊಡದಿದ ಸಿಬ್ಬಂದಿಗಳಿಗೆ ವಾಹನ ಬಾಡಿಗೆ ಇಂಧನ ಇತ್ಯಾದಿಗಳಿಗೆ ಹಾಗೂ ಪರೀಕ್ಷಾ ಕಾರ್ಯಕ್ಕೆ ಆಗಮಿಸಿದ ಸಿಬ್ಬಂದಿಗಳಿಗೆ ಪ್ರಯಾಣ ಭತ್ಯೆ ಹಾಗೂ ಇತರೆ ಭತ್ಯೆಯನ್ನು ಅಗತ್ಯತೆಯ ಅನುಗುಣವಾಗಿ ಮಾನ್ಯ ಕುಸಚಿವರು ಮತ್ತು ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಪಾವತಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 72 (ಎ) ರ ಉಲ್ಲಂಘಿಸಿ ನಗದು | ಕೆ.ಸಿ.ಎಸ್.ಆರ್. ನಿಯಮ 451ರ ಪ್ರಕಾರ ಹಾಗೂ ಸಾರಿಗೆ ಇಲಾಖೆಯ ಆದೇಶದಂತೆ ಕ್ಲೇಮ್ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

ರೂಪದಲ್ಲಿ ಭತ್ಯೆಗಳನ್ನು ಪಾವತಿ ಮಾಡಿರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. ಪ್ರಯುಕ್ತ ಪಾವತಿಯಾದ ಮೊತ್ತ **ರೂ.4,73,694/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**37**

**ಎಸ್.ಸಿ.ಪಿ/ಟಿ.ಎಸ್.ಪಿ. ಹಣಬಳಕೆ ಪ್ರಮಾಣ ಪತ್ರ ಮತ್ತು ವಾರ್ಷಿಕ ಲೆಕ್ಕಪತ್ರದಲ್ಲಿರುವ ವೆಚ್ಚಗಳ ಮೊತ್ತಗಳಲ್ಲಿ ಕಂಡುಬಂದಿರುವ ವ್ಯತ್ಯಾಸದ ಕುರಿತು.**

2019–20ನೇ ಸಾಲಿನ ಎಸ್.ಸಿ.ಪಿ/ಟಿ.ಎಸ್.ಪಿ.ಯ ಹಣ ಬಳಕೆ ಪ್ರಮಾಣ ಪತ್ರ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಕೆಲವೊಂದು ವೆಚ್ಚಗಳ ಮೊತ್ತಗಳಲ್ಲಿ ವ್ಯತ್ಯಾಸ ಇರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಲೆಕ್ಕ ಶೀರ್ಷಿಕೆ | ವಿವರ | | ವಾರ್ಷಿಕ ಲೆಕ್ಕಪತ್ರ ದನ್ವಯ (ವೆಚ್ಚದ ಮೊತ್ತ) | ಹಣಬಳಕೆ ಪ್ರಮಾಣ ಪತ್ರ (ವೆಚ್ಚದ ಮೊತ್ತ) | ವ್ಯತ್ಯಾಸದ ಮೊತ್ತ |
|---|---|---|---|---|---|---|
| | | ಕ್ರ. ಸಂ. | ಲೆಕ್ಕ ಶೀರ್ಷಿಕೆ & ವಿವರ | | | |
| I | **2021** ಎಸ್.ಸಿ/ ಎಸ್.ಪಿ) | 1 | 3100–053– ಕಛೇರಿ ನಿರ್ವಹಣೆ | 14,140 | 7,825 | 6,315 |
| | (SCSP) | 2 | 3100–452– ಮಾಸಿಕ ಆರ್ಥಿಕ ನೆರವು | 55,81,810 | 50,54,803 | 5,27,007 |
| | | 3 | 3100–451– ವಿದ್ಯಾರ್ಥಿಗಳ ಪ್ರಯಾಣ ಭತ್ಯೆ | 7,314 | 1,314 | 6,000 |
| | | 4 | 3100–107– ಅಂಬೇಡ್ಕರ್ ಹಾಗೂ ಜಗಜೀವನ್ ರಾಮ ಇವರ ಜಯಂತಿ ಆಚರಣೆ ವೆಚ್ಚಗಳು. | 15,010 | – | 15,010 |
| | | 5 | 3100– ಪ್ರೋತ್ಸಾಹ ಧನ | 14,895 | – | 14,895 |

ಎಸ್.ಸಿ.ಪಿ/ಟಿ.ಎಸ್.ಪಿ.ಯ ಹಣ ಬಳಕೆ ಪ್ರಮಾಣ ಪತ್ರ ಮತ್ತು ವಾರ್ಷಿಕ ಲೆಕ್ಕಪತ್ರಗಳ ಕೆಲವೊಂದು ವೆಚ್ಚಗಳ ಮೊತ್ತಗಳಲ್ಲಿ ವ್ಯತ್ಯಾಸ ಇರುವುದಕ್ಕೆ ಕಾರಣ ವಾರ್ಷಿಕ ಲೆಕ್ಕಪತ್ರಗಳು 2019–20ನೇ ಸಾಲಿನದು ಇರುತ್ತದೆ. ಆದರೆ ಹಣ ಬಳಕೆ ಪ್ರಮಾಣ ಪತ್ರದಲ್ಲಿ 2018–19ನೇ ಸಾಲಿನ ಪ್ರಾರಂಭದ ಶಿಲ್ಕು ಒಳಗೊಂಡಿದ್ದು ಅದನ್ನು ಸೇರಿ ಬಳಕೆ ಪ್ರಮಾಣ ಪತ್ರದಲ್ಲಿ ಇರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ತಮ್ಮನ್ನು ಕೋರುತ್ತಿದ್ದೇನೆ

| | | | | | | |
|---|---|---|---|---|---|---|
| | | | **ಒಟ್ಟು (I)** | **56,33,169** | **50,63,942** | **5,69,227** |
| II | "––" | 6 | 3100–ವಸತಿ ನಿಲಯ ನಿರ್ವಹಣೆ ವೆಚ್ಚ | 1,19,606 | 1,30,106 | 10,500 |
| | | | **ಒಟ್ಟು (II)** | **1,19,606** | **1,30,106** | **10,500** |
| III | "––" | 7 | 3200–452 ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ಸಾದಿಲ್ವಾರು | 2,400 | – | 2,400 |
| | | | **ಒಟ್ಟು (III)** | **2,400** | **–** | **2,400** |
| IV | "––" | 8 | 3200–454 ಮಾಸಿಕ ಆರ್ಥಿಕ ನೆರವು | 15,24,125 | 17,47,773 | 2,23,648 |
| | | | **ಒಟ್ಟು (IV)** | **15,24,125** | **17,47,773** | **2,23,648** |
| | | | **ಒಟ್ಟಾರೆ (I ರಿಂದ IV)** | **–** | **–** | **8,05,775** |

ಮೇಲೆ ವಿವರಿಸಿದಂತೆ 1) ಕ್ರಮಸಂಖ್ಯೆ Iರಲ್ಲಿರುವ ಎಸ್.ಸಿ.ಎಸ್.ಪಿ.ಯ ವಾರ್ಷಿಕ ಲೆಕ್ಕಪತ್ರದಲ್ಲಿ ಮೊತ್ತ ರೂ.56,33,169/–ಗಳು ಹೆಚ್ಚಿಗೆ ವೆಚ್ಚ ಹಾಗೂ ಹಣ ಬಳಕೆ ಪ್ರಮಾಣ ಪತ್ರದಲ್ಲಿ ಮೊತ್ತ ರೂ.50,63,942/–ಗಳ ಕಡಿಮೆ ಮೊತ್ತದ ವೆಚ್ಚದ ಲೆಕ್ಕ ಸಲ್ಲಿಸಿರುತ್ತಾರೆ. ಹೀಗೆ ಒಟ್ಟಾರೆ ಮೊತ್ತ ರೂ.5,69,227/–ಗಳ ವ್ಯತ್ಯಾಸದ ಮೊತ್ತ ಕಂಡುಬಂದಿರುತ್ತದೆ.

2) ಕ್ರಮಸಂಖ್ಯೆ II ರಲ್ಲಿರುವ ಎಸ್.ಸಿ.ಎಸ್.ಪಿ.ಯ ವಾರ್ಷಿಕ ಲೆಕ್ಕಪತ್ರದಲ್ಲಿ ಮೊತ್ತ ರೂ.1,19,606/–ಗಳು ಕಡಿಮೆ ವೆಚ್ಚ ಹಾಗೂ ಹಣ ಬಳಕೆ ಪ್ರಮಾಣ ಪತ್ರದಲ್ಲಿ ಮೊತ್ತ ರೂ. 1,30,106/–ಗಳ ಹೆಚ್ಚಿಗೆ ಮೊತ್ತದ ವೆಚ್ಚದ ಲೆಕ್ಕ ಸಲ್ಲಿಸಿರುತ್ತಾರೆ ಹೀಗೆ ಒಟ್ಟಾರೆ ಮೊತ್ತ ರೂ. 10,500/–ಗಳ ವ್ಯತ್ಯಾಸದ ಮೊತ್ತ ಕಂಡುಬಂದಿರುತ್ತದೆ.

3) ಕ್ರಮ ಸಂಖ್ಯೆ IIIರಲ್ಲಿರುವ ಟಿ.ಎಸ್.ಪಿ.ಯ ವಾರ್ಷಿಕ ಲೆಕ್ಕಪತ್ರದಲ್ಲಿ ಮೊತ್ತ ರೂ. 2400/–ಗಳ ಹೆಚ್ಚಿಗೆ ವೆಚ್ಚ ಹಾಗೂ ಹಣ ಬಳಕೆ ಪ್ರಮಾಣ ಪತ್ರದಲ್ಲಿ ಯಾವುದೇ ವೆಚ್ಚ ಮಾಹಿತಿ ಸಲ್ಲಿಸದೇ ಇರುವುದು ಕಂಡುಬಂದಿರುತ್ತದೆ ಹೀಗೆ ಒಟ್ಟಾರೆ ಮೊತ್ತ ರೂ.2,400/–ಗಳ ವ್ಯತ್ಯಾಸದ ಮೊತ್ತ ಕಂಡುಬಂದಿರುತ್ತದೆ.

| | | | |
|---|---|---|---|
| | 4) ಕ್ರಮಸಂಖ್ಯೆ IVರಲ್ಲಿರುವ ಟಿ.ಎಸ್.ಪಿ.ಯ ವಾರ್ಷಿಕ ಲೆಕ್ಕಪತ್ರದಲ್ಲಿ ಮೊತ್ತ ರೂ.15,24,125/ ಗಳು ಕಡಿಮೆ ವೆಚ್ಚ ಹಾಗೂ ಹಣ ಬಳಕೆ ಪ್ರಮಾಣ ಪತ್ರದಲ್ಲಿ ಮೊತ್ತ ರೂ. 17,47,773/–ಗಳ ಹೆಚ್ಚಿಗೆ ಮೊತ್ತದ ವೆಚ್ಚದ ಲೆಕ್ಕ ಸಲ್ಲಿಸಿರುತ್ತಾರೆ. ಹೀಗೆ ಒಟ್ಟಾರೆ ಮೊತ್ತ ರೂ. 2,23,648/–ಗಳ ವ್ಯತ್ಯಾಸದ ಮೊತ್ತ ಕಂಡುಬಂದಿರುತ್ತದೆ.<br>ಈ ಕುರಿತು ಲೆಕ್ಕಪರಿಶೋಧನೆಯ ವಿಚಾರಣೆ **ಪತ್ರ ಸಂಖ್ಯೆ:47 ದಿನಾಂಕ:23–11–2021** ರಂದು ನೀಡಲಾಗಿದೆ. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೆ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ವ್ಯತ್ಯಾಸದ ಒಟ್ಟು ಮೊತ್ತ **ರೂ.8,05,775/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **38** | **ಸರಕಾರದ ಪತ್ರಗಾರ ಇಲಾಖೆಯ ಪ.ಜಾ/ಪ.ಪಂ ಯೋಜನೆಗೆ ಬೇಕಾದ ಮಾಹಿತಿಯನ್ನು ನೀಡಿದ ವಕ್ತೃರಿಗೆ ಗೌರವ ಸಂಭಾವನೆ ಪಾವತಿಸಿದ ಕುರಿತು.**<br>2019–20ನೇ ಸಾಲಿನಲ್ಲಿ ಇತರೆ ಅನುದಾನದಡಿ ಸರಕಾರದ ಪತ್ರಗಾರ ಇಲಾಖೆಯ ಪ.ಜಾ/ಪ.ಪಂ ಯೋಜನೆಯಾದ ದಲಿತ ಬುಡಕಟ್ಟು ಸಾಂಸ್ಕೃತಿಕ ವೀರರ ಮತ್ತು ಪ್ರಚಲಿತ ದಲಿತ ಬುಡಕಟ್ಟು ನಾಯಕರ ಜೀವನ ಮತ್ತು ಹೋರಾಟ ಕೊಡಗು ಪ್ರದೇಶದ ಚಾರಿತ್ರಿಕ ಅಧ್ಯಯನ ಎಂಬ ಯೋಜನೆಗೆ ಬೇಕಾದ ಮಾಹಿತಿಗಳನ್ನು ನೀಡಿದ ವಕ್ತೃರಿಗೆ ಗೌರವ ಸಂಭಾವನೆ ಪಾವತಿ ಮಾಡಲಾಗಿದೆ. ವಿವರ **ಅನುಬಂಧ–17 ರಲ್ಲಿ** ನೀಡಲಾಗಿದೆ.<br>**ಅನುಬಂಧ–17ರಲ್ಲಿ** ವಿವರಿಸಿದಂತೆ ಸದರಿ ಯೋಜನೆಗೆ ಸಂಬಂಧಪಟ್ಟ ಮಾಹಿತಿ ನೀಡಲು ಪ್ರತಿಯೊಬ್ಬರಿಗೆ ಮೊತ್ತ ರೂ.3,000/– ರಂತೆ ಗೌರವ ಸಂಭಾವನೆ ಪಾವತಿ ಮಾಡಿದ್ದು, ಹೀಗೆ ಪಾವತಿ ಮಾಡಿದ ಮೊತ್ತವು ಸರಕಾರದ ಪತ್ರಗಾರ ಇಲಾಖೆಯಿಂದ ಅನುಮೋದನೆ ಪಡೆದ ಆದೇಶ ಪತ್ರದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲು ಸೂಚಿಸಿದೆ.<br>ಮುಂದುವರೆದು ಈ ಕುರಿತು ಸರ್ಕಾರದಿಂದ ಸ್ಪಷ್ಟ ಆದೇಶಗಳಿದ್ದರೆ ಅದನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು ಹಾಗೂ ಪಾವತಿ ಮಾಡಿದ ಸಮಿತಿಯ ಅನುಮೋದನೆ ಪಡೆದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲು ಸೂಚಿಸಿದೆ.<br>ಸದರಿ ಯೋಜನೆಗೆ ಸಂಬಂಧಿಸಿದಂತೆ ಪ್ರತಿಯೊಬ್ಬ ವಕ್ತೃರಿಗೆ ಮೊತ್ತ ರೂ.3,000/– ರಂತೆ ಗೌರವ ಸಂಭಾವನೆ ಪಾವತಿ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br>ಈ ಕುರಿತು ಲೆಕ್ಕಪರಿಶೋಧನೆಯ **ವಿಚಾರಣೆ ಪತ್ರ ಸಂಖ್ಯೆ:52 ದಿನಾಂಕ:29–11–2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕರ್ನಾಟಕ ರಾಜ್ಯ ಪತ್ರಗಾರ ನಿರ್ದೇಶನಾಲಯವು ತಮ್ಮ ಉಲ್ಲೇಖದಲ್ಲಿ ಪ್ರಸ್ತಾವನೆಯು ದಿನಾಂಕ:10–01–2019 ರಂದು ಎಂದು ನಮೂದಿಸಿರುತ್ತಾರೆ ಹಾಗೂ ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಸ್ತಾವನೆಯಲ್ಲಿ ಕೇಳಿರುವ ಮೊತ್ತಕ್ಕೆ ಮಂಜೂರು ಮಾಡಿರುತ್ತಾರೆ. ಅದರೆ ಚರಿತ್ರೆ | 1. ಪ್ರಸ್ತಾವನೆಯ ದಿನಾಂಕವು 07.01.2019 ಆಗಿರುತ್ತದೆ. ತಮ್ಮ ಆಕ್ಷೇಪಣೆಯಲ್ಲಿ ಅದು 07.01.2018 ಎಂದು ನಮೂದಾಗಿರುತ್ತದೆ (ಅಡಕ–1)<br>2. 07.01.2019ರಂದು ಕಳುಹಿಸಿದ ಪ್ರಸ್ತಾವನೆಯ ಪ್ರತಿಯನ್ನು ಮಾನ್ಯ ಕುಲಸಚಿವರು ಕಡತದ ಮೂಲಕ ಅಂಗೀಕರಿಸಿ, ಅದನ್ನು 17.01.2019ರಂದು ಕರ್ನಾಟಕ ರಾಜ್ಯ ಪತ್ರಾಗಾರಕ್ಕೆ ಕಳುಹಿಸಿರುತ್ತಾರೆ (ಅಡಕ–2)<br>3. ಚರಿತ್ರೆ ವಿಭಾಗವು ಮತ್ತು ಆಡಳಿತಾಂಗದಿಂದ ಮಾನ್ಯ ಕುಲಸಚಿವರು ನಿಯಮಾನುಸಾರ ಪತ್ರಗಳನ್ನು ಪತ್ರಾಗಾರ ಇಲಾಖೆಯ ಮಾನ್ಯ ನಿರ್ದೇಶಕರಿಗೆ ಕಳುಹಿಸಿದ್ದಾರೆ. ಆದರೆ ಮಾನ್ಯ ನಿರ್ದೇಶಕರು ತಮ್ಮ ಪತ್ರದಲ್ಲಿ ನೀಡಿರುವ ಉಲ್ಲೇಖದಲ್ಲಿ ದಿನಾಂಕವು ವ್ಯತ್ಯಾಸವಾಗಿರುತ್ತದೆ ಅಷ್ಟೆ. ಇದರಲ್ಲಿ ಲೋಪವಿರುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಂಶೋಧಕರಾಗಿ ಚರಿತ್ರೆ ವಿಭಾಗದ ಪ್ರಾಧ್ಯಾಪಕರು ಸಂಶೋಧನಾ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿ, ಕೃತಿಯನ್ನು ಹೊರತಂದಿದ್ದಾರೆ. ಈ ಹಿನ್ನೆಲೆಯಲ್ಲಿ ತಾವು ಆಕ್ಷೇಪಣೆಯನ್ನು ಕೈಬಿಡಬೇಕೆಂದು ತಮ್ಮಲ್ಲಿ ಕೋರುತ್ತಿದ್ದೇನೆ. | |

| | | | |
|---|---|---|---|
| | ವಿಭಾಗ ಮತ್ತು ಮುಖ್ಯ ಸಂಶೋಧಕರು ಕನ್ನಡ ವಿಶ್ವವಿದ್ಯಾಲಯ ಹಂಪಿಯವರ ಲೆಕ್ಕಪರಿಶೋಧನೆಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದಾಗ ಪ್ರಸ್ತಾವನೆಯ ದಿನಾಂಕ:07-01-2018 ಎಂದು ನಮೂದಿಸಿರುವುದರಿಂದ ಎರಡು ದಿನಾಂಕಗಳಲ್ಲಿ ವ್ಯತ್ಯಾಸ ಕಂಡುಬಂದಿರುವುದರಿಂದ ಸದರಿ ಉತ್ತರವು ಮಾನ್ಯ ಮಾಡಲು ಬರುವುದಿಲ್ಲ ಕಂಡಿಕೆ ಮುಂದುವರಿಸಿದೆ. ಪ್ರಯುಕ್ತ ಸದರಿ ಯೋಜನೆಗೆ ಪಾವತಿಯಾದ ಗೌರವ ಸಂಭಾವನೆ ಒಟ್ಟು ಮೊತ್ತ **ರೂ.51,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | 4. ಪ್ರತಿಯೊಬ್ಬ ವಕ್ತೃವಿಗೆ ರೂ. 3000/-ದಂತೆ ಗೌರವ ಸಂಭಾವನೆಯನ್ನು ನೀಡುವ ಪ್ರಸ್ತಾವವನ್ನು 07.01.2019 ರಂದು ಪತ್ರಾಗಾರ ನಿರ್ದೇಶನಾಲಯಕ್ಕೆ ಸಲ್ಲಿಸಿದ ಅಂದಾಜು ವೆಚ್ಚದಲ್ಲಿ ತೋರಿಸಲಾಗಿದೆ. ಹೀಗೆ ತೋರಿಸಲಾದ ರೂ. 5,50,000/-ಗಳಿಗೆ ಮಾನ್ಯ ಕುಲಸಚಿವರು ಮತ್ತು ಮಾನ್ಯ ಕುಲಪತಿಯವರು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದಾರೆ(ಅಡಕ-2) ಹಾಗೆಯೇ ರಾಜ್ಯ ಪತ್ರಾಗಾರ ನಿರ್ದೇಶಕರು ದಿನಾಂಕ 11.03.2019ರಂದು ನೀಡಿರುವ ಮಂಜೂರಾತಿಯಲ್ಲಿ ರೂ. 5,50,000/- ಮೊತ್ತಕ್ಕೆ ಅಂಗೀಕಾರ ನೀಡಿರುತ್ತಾರೆ. ಸದರಿ ಅಂದಾಜು ವೆಚ್ಚದಲ್ಲಿ ವಕ್ತೃಗಳಿಗೆ ನೀಡುವ ಅಂದಾಜು ವೆಚ್ಚ ರೂ. 51,000/-ಗಳಿಗೆ ಅನುಮೋದನೆಯಾಗಿರುತ್ತದೆ. ಮಾನ್ಯ ನಿರ್ದೇಶಕರ 11.03.2019ರ ಪತ್ರದಲ್ಲಿ ಸೂಚಿಸಿರುವ ಆದೇಶದಂತೆ ಹಾಗೂ ವಿಶ್ವವಿದ್ಯಾಲಯದ ನಿಯಮದಂತೆ ಕೊಡಗಿನ ಬೆಟ್ಟಗುಡ್ಡಗಳಲ್ಲಿ ವಾಸವಿರುವ ವಕ್ತೃಗಳಿಗೆ ಸದರಿ ಮೊತ್ತವನ್ನು ಪಾವತಿಸಲಾಗಿದೆ ಎನ್ನುವ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಸದರಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ತಮ್ಮನ್ನು ಕೋರುತ್ತಿದ್ದೇನೆ. | |
| **39** | **ನೂತನ ಪಿಂಚಣಿ ಯೋಜನೆ (NPS)ನ್ನು ಸರಕಾರದ ಆದೇಶಗಳನ್ವಯ/ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸದೇ ಇರುವ ಕುರಿತು.**<br>ಸರಕಾರದ ಆದೇಶ ಸಂಖ್ಯೆ:FD(SPL)04 PET 2005 ಬೆಂಗಳೂರು ದಿನಾಂಕ:31-03-2006 ರನ್ವಯ ರಾಜ್ಯ ಸರ್ಕಾರದ ಸೇವೆಗೆ ದಿನಾಂಕ:01-04-2006 ರಂದು ಅಥವಾ ತರುವಾಯ ಸೇರುವ ಎಲ್ಲಾ ನೇಮಕಾತಿದಾರರಿಗೆ ಕಡ್ಡಾಯಗೊಳ್ಳುವಂತೆ ಸರ್ಕಾರಿ ನೌಕರನು ಮೂಲವೇತನ ಮತ್ತು ಅದರ ಮೇಲೆ ಲಭ್ಯವಾಗುವ ತುಟ್ಟಿಭತ್ಯೆಯ ಶೇ.10ರಷ್ಟನ್ನು ಕೊಡುಗೆಯಾಗಿ ವಂತಿಗೆಯನ್ನು ನೀಡಬೇಕಾಗಿರುತ್ತದೆ. | 2023-24ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ 33 ಎನ್.ಪಿ.ಎಸ್ ಬೋಧಕ ಮತ್ತು ಆಡಳಿತ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು.<br>ಸದರಿಯವರಿಗೆ ಸರ್ಕಾರಿ ನೌಕರರ NPS ಕಡಿತವನ್ನು ಟ್ರಸ್ಟಿ ಬ್ಯಾಂಕ್‌ಗೆ ವರ್ಗಾಯಿಸುವ ವಿಧಾನ, Pension Fund Regulatory and Development Authority (PFRDA)ಯನ್ನು ಅಳವಡಿಸಿಲಾಗಿದೆ. ಎಲ್ಲಾ | |

ಸರಕಾರದ ಆದೇಶ ಸಂಖ್ಯೆ: ಆಇ37PEN2019 ಬೆಂಗಳೂರು ದಿನಾಂಕ:31–08–2019 ರನ್ವಯ ವಿಶ್ವವಿದ್ಯಾಲಯದ ಎಲ್ಲಾ NPS ಅಧಿಕಾರಿ/ನೌಕರರಿಗೆ ಸರ್ಕಾರದ ವಂತಿಗೆಯನ್ನು ದಿನಾಂಕ:01–04–2019 ರಿಂದ ಜಾರಿಗೆ ಬರುವಂತೆ ಶೇ.10 ರಿಂದ ಶೇ.14ಕ್ಕೆ (ಮೂಲ ವೇತನ + ತುಟ್ಟಿ ಭತ್ಯೆ) ಹೆಚ್ಚಿಸಿ ಆದೇಶಿಸಿರುತ್ತಾರೆ.

ಆದರೆ 2019–20ನೇ ಸಾಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಬಿಲ್ಲನ್ನು ಪರಿಶೀಲಿಸಿದಾಗ NPS ಸಿಬ್ಬಂದಿಗಳ ವೇತನ ಬಿಲ್ಲಿನಲ್ಲಿ ಮೂಲ ವೇತನಕ್ಕೆ ಮಾತ್ರ ಶೇ.10 ರಷ್ಟು ವಂತಿಗೆಯನ್ನು ಕಟಾವಣೆ ಮಾಡುತ್ತಿದ್ದು ಮೂಲ ವೇತನ ಮತ್ತು ತುಟ್ಟಿಭತ್ಯೆಗೆ ಶೇಕಡಾ 10ರಷ್ಟು ಕಟಾವಣೆ ಮಾಡಬೇಕಾದ ಮೊತ್ತದಲ್ಲಿ ಈಗಾಗಲೇ ಕಟಾಯಿಸಿದ ಮೊತ್ತವನ್ನು ತೆಗೆದು ವ್ಯತ್ಯಾಸದ ಮೊತ್ತವನ್ನು ಸಿಬ್ಬಂದಿಗಳಿಂದ ವಸೂಲಿಸಬೇಕಾಗಿದ್ದು, ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ಸಿಬ್ಬಂದಿಗಳ ವಿವರ | ಸಿಬ್ಬಂದಿಗಳ ಸಂಖ್ಯೆ | ಕಟಾಯಿಸಬೇಕಾದ ಮೊತ್ತ (ಮೂಲವೇತನ + ತುಟ್ಟಿ ಭತ್ಯೆಗೆ ಶೇ.10) | ಈಗಾಗಲೇ ಕಟಾಯಿಸಿದ ಮೊತ್ತ | ಸಿಬ್ಬಂದಿಗಳಿಂದ ವಸೂಲಿಸಬೇಕಾದ ವ್ಯತ್ಯಾಸದ ಮೊತ್ತ |
|---|---|---|---|---|---|
| 01 | ಬೋಧಕ ಸಿಬ್ಬಂದಿಗಳು | 10 | 10,22,368 | 7,94,599 | 2,27,769 |
| 02 | ಬೋಧಕೇತರ ಸಿಬ್ಬಂದಿಗಳು | 17 | 5,85,510 | 4,79,323 | 1,06,187 |
| | **ಒಟ್ಟು** | **27** | **16,07,878** | **12,73,922** | **3,33,956** |

(ಸಿಬ್ಬಂದಿವಾರು ವಿವರವನ್ನು **ಅನುಬಂಧ–18 ರಲ್ಲಿ** ನೀಡಲಾಗಿದೆ)

ಬಾಕಿ ಉಳಿದ ವ್ಯತ್ಯಾಸದ ಮೊತ್ತ ರೂ.3,33,956/–ಗಳನ್ನು ಸಿಬ್ಬಂದಿಗಳ ವೇತನದಿಂದ ಕಟಾಯಿಸಲು ಸೂಚಿಸಿದೆ. ಅಲ್ಲದೇ ವಿಶ್ವವಿದ್ಯಾಲಯವು ನೀಡಬೇಕಾದ (ಮೂಲ ವೇತನ+ತುಟ್ಟಿ ಭತ್ಯೆ = 1,40,82,550 +19,96,229 ರೂ.1,60,78,779ಕ್ಕೆ) ಶೇ.14ರಷ್ಟು ವಂತಿಗೆ ಹಣ ರೂ.22,51,029/–ಗಳನ್ನು ಭರಿಸಲು ಸೂಚಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆಇ 03 ಸೇನೀಸೆ2010 ಬೆಂಗಳೂರು ದಿನಾಂಕ:12–10–2010 ರನ್ವಯ ಸರ್ಕಾರಿ ನೌಕರನು ಹಾಗೂ ಸರ್ಕಾರ/ವಿಶ್ವವಿದ್ಯಾಲಯವು ನೀಡುತ್ತಿರುವ ಕೊಡುಗೆ ಹಣವನ್ನು ಹೊಸ ವ್ಯಾಖ್ಯಾನಿಸಿದ ಕೊಡುಗೆ ಯೋಜನೆಯ ನಿಧಿಯನ್ನು "Pension Fund Regulatory and Development Authority (PFRDA)ಯು ನಿರ್ವಹಿಸುತ್ತದೆ. ಈ ಯೋಜನೆಯ ಅನ್ವಯ

ಸಿಬ್ಬಂದಿಗಳಿಗೆ NSDL ಮೂಲಕ ಪ್ರತ್ಯೇಕ ಪ್ರಾನ್ ಖ್ಯಾತೆಯನ್ನು ತೆಗೆದುಕೊಡಲಾಗಿದೆ.

ಈ ಹಿನ್ನೆಲೆಯಲ್ಲಿ ಎಲ್ಲಾ NPS ಅಧಿಕಾರಿ/ನೌಕರರಿಗೆ ಸರ್ಕಾರದ ವಂತಿಗೆಯನ್ನು ದಿನಾಂಕ:01–04–2019 ರಿಂದ ಜಾರಿಗೆ ಬರುವಂತೆ ಶೇ.10 ರಿಂದ ಶೇ.14ಕ್ಕೆ (ಮೂಲವೇತನ + ತುಟ್ಟಿಭತ್ಯೆ) ಸಿಬ್ಬಂದಿಗಳ ಸಂಬಳದಲ್ಲಿ ಕಡಿತಗೊಳಿಸಿ ಅವರ ಪ್ರಾನ್ ಖಾತೆಗೆ ಏಪ್ರಿಲ್ 2023ರಿಂದ ಇಲ್ಲಿಯವರೆಗೆ ನೀಡಲಾಗಿದೆ.

ಈ ಹಿಂದಿನ 2006ರಿಂದ 2023 ಮಾರ್ಚ್‌ವರೆಗೆ ವಂತಿಕೆಯನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೈಬಿಡುವಂತೆ ಕೋರಿಲಾಗಿದೆ.

| | | | |
|---|---|---|---|
| | ಸರ್ಕಾರಿ ನೌಕರನು ಸಾಮಾನ್ಯವಾಗಿ ವಯೋನಿವೃತ್ತಿಯ ದಿನಾಂಕದಂದು ಯೋಜನೆಯಿಂದ ನಿರ್ಗಮಿಸುತ್ತಾರೆ. ನಿರ್ಗಮನಗೊಳ್ಳುವ ಸಮಯದಲ್ಲಿ ಸರ್ಕಾರಿ ನೌಕರನು ಕಡ್ಡಾಯವಾಗಿ ಪಿಂಚಣಿ ಸಂಪತ್ತಿನ ಶೇ.40ರಷ್ಟು ಮೊಬಲಗನ್ನು ವರ್ಷಾಸನಗಳಲ್ಲಿ (Annuity) ತೊಡಗಿಸಬೇಕಾಗುತ್ತದೆ. ಇದರಿಂದ ಅವರ ಜೀವಿತಾವಧಿಯಲ್ಲಿ ಪಿಂಚಣಿ ಮತ್ತು ತರುವಾಯ ಅವರ ಅವಲಂಬಿತರಿಗೆ ಕುಟುಂಬ ನಿವೃತ್ತಿ ವೇತನ ದೊರೆಯುತ್ತದೆ. ಉಳಿದ ಪಿಂಚಣಿ ಸಂಪತ್ತನ್ನು (ಶೇ.60) ಸರ್ಕಾರಿ ನೌಕರರಿಗೆ ಹಿಂದಿರುಗಿಸಲಾಗುವುದು. ಸರ್ಕಾರಿ ನೌಕರರನ್ನು ಸೇವೇಯಲ್ಲಿದ್ದಾಗಲೇ ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ಇಡಿಗಂಟಿನ ಪರಿಹಾರವನ್ನು ನೀಡಲು ಮಂಜೂರಾತಿ ನೀಡಿ ಸರ್ಕಾರವು ಆದೇಶಿಸಿರುತ್ತದೆ.<br><br>ಆದರೆ ವಿಶ್ವವಿದ್ಯಾಲಯದ NPS ಸಿಬ್ಬಂದಿಗಳ ವೇತನದಿಂದ ಕಟಾವಣೆ ಮಾಡುತಿದ್ದ ವಂತಿಗೆ ಹಣ ಹಾಗೂ ವಿಶ್ವವಿದ್ಯಾಲಯ ವಂತಿಗೆ ಹಣವನ್ನು ಬ್ಯಾಂಕ್ ಆಫ್ ಇಂಡಿಯಾದ ಸಾಮಾನ್ಯ ಉಳಿತಾಯ ಖಾತೆ ಸಂಖ್ಯೆ:842210110010127 ರಲ್ಲಿ ಜಮಾ ಮಾಡಲಾಗುತ್ತದೆ. ವಿಶ್ವವಿದ್ಯಾಲಯದ NPS ಸಿಬ್ಬಂದಿಯು ಸೇವಾ ನಿವೃತ್ತಿ ಹೊಂದಿದಲ್ಲಿ ಅಥವಾ ಸೇವೆಯಲ್ಲಿರುವಾಗಲೇ ಮೃತಪಟ್ಟಲ್ಲಿ/ಸೇವೆಯಿಂದ ನಿರ್ಗಮಿಸಿದ್ದಲ್ಲಿ ಸಿಬ್ಬಂದಿಗಳು ಮಾನ್ಯ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಲ್ಲಿ ವಿಶ್ವವಿದ್ಯಾಲಯದ ಸಾಮಾನ್ಯ ಉಳಿತಾಯ ಖಾತೆಯಿಂದ ಸದರಿ ನೌಕರನಿಗೆ ಪಡೆಯಲು ಅರ್ಹವಾದ ಮೊಬಲಗನ್ನು/ಪರಿಹಾರವನ್ನು ಸಂದಾಯ ಮಾಡಲು ವಿಶ್ವವಿದ್ಯಾಲಯಕ್ಕೆ ಸಾಧ್ಯವಾಗುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ:FD(SPL)219 PEN 2012 ಬೆಂಗಳೂರು ದಿನಾಂಕ:30-01-2014 ಮತ್ತು ಸರ್ಕಾರದ ಸೂತ್ತೋಲೆ ಸಂಖ್ಯೆ:FD (SPL)209 PEN 2012(P) ಬೆಂಗಳೂರು. ದಿನಾಂಕ: 27-04-2016 ರನ್ವಯ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರ NPS ಕಡಿತವನ್ನು ಟ್ರಸ್ಟಿ ಬ್ಯಾಂಕ್‌ಗೆ ವರ್ಗಾಯಿಸುವ ವಿಧಾನ, Pension Fund Regulatory and Development Authority (PFRDA)ಯನ್ನು ಅಳವಡಿಸುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಿದ್ದು, ಸರ್ಕಾರಿ ಆದೇಶ ಮತ್ತು ಸೂತ್ತೋಲೆಗಳನ್ವಯ NPS ಅನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.<br><br>ಸರ್ಕಾರದ ಆದೇಶ ಸಂಖ್ಯೆ:FD(SPL) 219 PEN21/012 ದಿನಾಂಕ:30-01-2014 ರನ್ವಯ ಇಲ್ಲಿಯವರೆಗೂ ಕಡಿತಗೊಳಿಸಿದ ಸಿಬ್ಬಂದಿಗಳ NPS ವಂತಿಗೆ ಮತ್ತು ವಿಶ್ವವಿದ್ಯಾಲಯದ/ ಸರ್ಕಾರದ ವಂತಿಗೆಯ ಒಟ್ಟು ಮೊತ್ತಕ್ಕೆ ಶೇ.8 ರಷ್ಟು Compound Intrest ಸೇರಿಸಿ ಕೂಡಲೇ NPSನ Central Record Keeping Agency (CRA)systemಗೆ ಸಂದಾಯ ಮಾಡಲು ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 53 ದಿನಾಂಕ: 02-12-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. | | |

| | | | |
|---|---|---|---|
| | ಅಲ್ಲಿಯವರೆಗೆರೂ.**3,33,953/–**ಗಳನ್ನು ವಸೂಲಾತಿಯಲ್ಲಿಡಲಾಗಿದೆ ಹಾಗೂ ರೂ.**22,51,029/–**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | | |
| **40** | **2019–20ನೇ ಸಾಲಿನ ಪ್ರಸಾರಾಂಗ ವಿಭಾಗದ ಸ್ವೀಕೃತಿಯಲ್ಲಿ ಮತ್ತು ವಾರ್ಷಿಕ ಲೆಕ್ಕಪತ್ರಗಳ ಸ್ವೀಕೃತಿಯಲ್ಲಿ ಕಂಡುಬಂದ ನ್ಯೂನತೆಗಳ ಕುರಿತು.** | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

2019–20ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಸಾರಾಂಗ ವಿಭಾಗದ ನಿಯತಕಾಲಿಕೆ ಹಾಗೂ ಪ್ರಕಟಣೆಗಳ ಮಾರಾಟ ಮತ್ತು ಇತರೆ ಸ್ವೀಕೃತಿಯ ಆದಾಯಕ್ಕೂ ಮತ್ತು ವಾರ್ಷಿಕ ಲೆಕ್ಕಪತ್ರಗಳ ಸ್ವೀಕೃತಿಗೂ ವ್ಯತ್ಯಾಸ ಕಂಡುಬಂದಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ | ಕಛೇರಿ | ವಿಭಾಗದ ದಾಖಲೆಗಳ ಪ್ರಕಾರ | ವಾರ್ಷಿಕ ಲೆಕ್ಕ ಪತ್ರಗಳ ಪ್ರಕಾರ | ವ್ಯತ್ಯಾಸ |
|---|---|---|---|---|
| 1 | ಕೇಂದ್ರ ಕಛೇರಿ ಹಂಪಿ | ರೂ. 15,14,544<br>+ 40,00,000<br>55,14,544 | ರೂ.51,23,230 | 3,91,314 |
| 2 | ಬೆಂಗಳೂರು ಕಛೇರಿ | ರೂ.19,19,268 | ರೂ.15,35,985 | 3,83,283 |
| | | | **ಒಟ್ಟು** | **7,74,597** |

ಮೇಲಿನ ತಃಖ್ತೆಯಲ್ಲಿ ವಿವರಿಸಿದಂತೆ ಸದರಿ ಪ್ರಸಾರಾಂಗ ಕೇಂದ್ರ ಕಛೇರಿ ಹಂಪಿ ಮತ್ತು ಬೆಂಗಳೂರು ಪ್ರಸಾರಾಂಗ ಕಛೇರಿ ಎರಡೂ ಕಛೇರಿಯ ಸ್ವೀಕೃತಿಗಳನ್ನು ಪರಿಶೀಲಿಸಿದ್ದು ಮತ್ತು ಸದರಿ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದ್ದು, ನ್ಯೂನ್ಯತೆಗಳು ಈ ಕೆಳಗಿನಂತಿರುತ್ತದೆ.

01. ಪ್ರಸಾರಾಂಗ ವಿಭಾಗ ಹಂಪಿ ಕೇಂದ್ರ ಕಛೇರಿಯಲ್ಲಿ ನಿಯತಕಾಲಿಕ ಮತ್ತು ಪುಸ್ತಕ ಮಾರಾಟದ ಸ್ವೀಕೃತಿಗಳನ್ನು ಪರಿಶೀಲಿಸಿದ್ದು, ವಾರ್ಷಿಕ ಲೆಕ್ಕಪತ್ರಗಳಲ್ಲಿ ರೂ.51,23,230=00 ನಮೂದಿಸಿರುತ್ತಾರೆ. ಆದರೆ ವಿಭಾಗದ ಸ್ವೀಕೃತಿಯಲ್ಲಿ ಒಟ್ಟು ರೂ.15,14,544=00ಗಳ ಸ್ವೀಕೃತಿ (ಸಾಲದ ಮಾರಟ ಹೊರತುಪಡಿಸಿ) ಮತ್ತು ಸದರಿ ಖಾತೆಯ ನಗದು ಪುಸ್ತಕದಲ್ಲಿ ನಮೂದಿಸಿದಂತೆ ಡಾ॥ಬಿ.ಆರ್.ಅಂಬೇಡ್ಕರ್ ಅನುದಾನ ಸ್ವೀಕೃತಿ ರೂ.40,00,000/– ಎರಡು ಸೇರಿ ಒಟ್ಟು ಸ್ವೀಕೃತಿ ರೂ.55,14,544/–ಗಳಾಗುತ್ತದೆ. ಆದರೆ ವಾರ್ಷಿಕ ಲೆಕ್ಕಪತ್ರಗಳಲ್ಲಿ ರೂ.3,91,314=00ಗಳ ಕಡಿಮೆ ಸ್ವೀಕೃತಿ ತೋರಿಸಿರುವುದು ಕಂಡುಬಂದಿರುತ್ತದೆ.

| | | | |
|---|---|---|---|
| | 02. ಸದರಿ ಪ್ರಸಾರಾಂಗ ಖಾತೆಯಲ್ಲಿ ರೂ.40,00,000/– ಗಳ ಅನುದಾನ ಸ್ವೀಕೃತಿಯಾಗಿದ್ದು ಸದರಿ ಅನುದಾನ ಯಾವ ಉದ್ದೇಶಕ್ಕೆ ಬಿಡುಗಡೆಯಾಗಿದೆ ಎಂಬುದಕ್ಕೆ ಸರಕಾರದ ಅನುದಾನ ಬಿಡುಗಡೆಯ ಆದೇಶ ಪ್ರತಿ ಲೆಕ್ಕಪರಿಶೋಧನೆಗೆ ಒದಗಿಸುವುದು.<br>03. ಬೆಂಗಳೂರು ಕಛೇರಿಯ ಸ್ವೀಕೃತಿಯಲ್ಲಿಯೂ ಕೂಡ ರೂ.3,83,283/–ಗಳ ಕಡಿಮೆ ಮೊತ್ತ ವಾರ್ಷಿಕ ಲೆಕ್ಕಪತ್ರಗಳಲ್ಲಿ ತೋರಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.<br>ಸದರಿ ಪ್ರಸಾರಾಂಗ ಖಾತೆಗೆ ಬಿಡುಗಡೆಯಾದ ಅನುದಾನಗಳ ವಿವರಗಳನ್ನು ಸರಕಾರದ ಆದೇಶ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:55 ದಿನಾಂಕ:02–12–2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. ವಾರ್ಷಿಕ ಲೆಕ್ಕಪತ್ರಗಳಲ್ಲಿ ಸ್ವೀಕೃತಿಗಳನ್ನು ಕಡಿಮೆ ತೋರಿಸಿರುವುದರಿಂದ ವ್ಯತ್ಯಾಸದ **ಮೊತ್ತ ರೂ.7,74,597/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **41** | **ವೋಚರಗಳಿಲ್ಲದೇ ಬಿಲ್‌ಗಳನ್ನು ಪಾವತಿ ಮಾಡಿರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಕುಲಪತಿಗಳ ಗೃಹಕಛೇರಿಯ ಔಪಚಾರಿಕ ವೆಚ್ಚಕ್ಕಾಗಿ 2019–20ನೇ ಸಾಲಿನಲ್ಲಿ ರೂ.2,40,000/– ಗಳನ್ನು ಖರ್ಚು ಮಡಿದ್ದು, ವಿವರವನ್ನು **ಅನುಬಂಧ–19ರಲ್ಲಿ** ನೀಡಲಾಗಿದೆ.<br>ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನತೆಗಳ ವಿವರ ಈ ಕೆಳಗಿನಂತಿದೆ.<br>01. ರೂ.2,40,000/–ಗಳ ವೋಚರಗಳನ್ನು ಪರಿಶೀಲಿಸಿದಾಗ ಪ್ರತಿ ಮಾಹೆಗೆ ರೂ.20,000/–ಗಳನ್ನು ಕುಲಪತಿಗಳ ಗೃಹ ಕಛೇರಿಯ ಔಪಚಾರಿಕ ವೆಚ್ಚವಾಗಿದೆ ಎಂದು ಕೈ ರಸೀದಿಯನ್ನು (Hand Reciept) ಕುಲಪತಿಗಳ ಆಪ್ತಕಾರ್ಯದರ್ಶಿಗಳಿಂದ ಪಡೆದು ಪಾವತಿ ಮಾಡಲಾಗಿರುತ್ತದೆ.<br>ಆದರೆ ಸದರಿ ಹಣದಿಂದ ಯಾವ ಯಾವ ಸಾಮಗ್ರಿಗಳನ್ನು ಖರೀದಿಸಲಾಗಿದೆ ಯಾವ ಏಜೆನ್ಸಿಗಳಿಗೆ/ ವ್ಯಕ್ತಿಗಳಿಗೆ ಪಾವತಿ ಮಾಡಲಾಗಿದೇ ಎನ್ನುವ ಬಗ್ಗೆ ಯಾವುದೇ ಬಿಲ್ಲುಗಳನ್ನು ಪಡೆಯದೇ ಕೈರಸೀದಿಗಳ ಎದುರಾಗಿ ಹಣ ಪಾವತಿಸಿದ್ದು ನಿಯಮಬಾಹಿರವಾಗಿರುತ್ತದೆ.<br>02. ಪ್ರತಿ ಮಾಹೆಗೆ ರೂ.20,000/–ಗಳ ಔಪಚಾರಿಕ ವೆಚ್ಚ ಮಾಡಲು ಸರಕಾರದ ಆದೇಶವಿದ್ದರೆ ಲೆಕ್ಕಪರಿಶೋಧನೆಗೆ ಒದಗಿಸುವುದು.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 56 ದಿನಾಂಕ: 02–12–2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. ಮೇಲಿನ ಅಂಶಗಳಿಗೆ ಸೂಕ್ತ ದಾಖಲಾತಿಗಳೊಂದಿಗೆ ಸ್ಪಷ್ಟೀಕರಣ ನೀಡುವವರೆಗೆ **ರೂ.2,40,000/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | ದಿನಾಂಕ 27.11.2015 ರಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾನ್ಯ ಕುಲಪತಿಗಳ ಗೃಹ ಕಚೇರಿಗೆ ಔಪಚಾರಿಕ ಮತ್ತಿತರೆ ವೆಚ್ಚ ಕುರಿತು ರೂ. 20,000/– ಗಳನ್ನು ನಿಗದಿಪಡಿಸಲಾಗಿದೆ. ಈ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.<br>ಇತ್ತೀಚಿನ ದೈನಂದಿನ ಗೃಹಬಳಕೆ ಮತ್ತು ಔಪಚಾರಿಕ ವೆಚ್ಚಗಳ ಬೆಲೆಯಲ್ಲಿ ಗಣನೀಯ ಹೆಚ್ಚಳವಾಗಿದ್ದು, ಗೃಹ ಕಚೇರಿ ವೆಚ್ಚಕ್ಕೆ ಪಡೆದ ಹಣವನ್ನು ಕುಲಪತಿಗಳ ಆಪ್ತಶಾಖೆಗೆ ಸಹ ಅಗತ್ಯಕ್ಕೆ ಅನುಗುಣವಾಗಿ ಬಳಸಿಕೊಳ್ಳಲಾಗುತ್ತಿದೆ. ದಾಖಲೆಗಳನ್ನು ಪರಿಶೀಲನೆಗೆ ಸಲ್ಲಿಸಿರುವುದಿಲ್ಲ ಎನ್ನುವುದು ತಾಂತ್ರಿಕ ವ್ಯತ್ಯಯವಾಗಿದ್ದು, ಈ ಬಗ್ಗೆ ಕ್ರಮವಹಿಸಲಾಗುವುದು. ಪ್ರತ್ಯೇಕ ನಗದು ಪುಸ್ತಕದ ಬಗ್ಗೆ ಇನ್ನು ಮುಂದೆ ಕ್ರಮವಹಿಸಲಾಗುವುದು.<br>ಈ ಹಿನ್ನೆಲೆಯಲ್ಲಿ ರೂ. 2,40,000/–(ರೂ. ಎರಡು ಲಕ್ಷದ ನಲವತ್ತು ಸಾವಿರ ಮಾತ್ರ)ಗಳ ಮೊತ್ತದ ವಸೂಲಾತಿಯನ್ನು ಕೈ ಬಿಡುವಂತೆ ಕೋರಲಾಗಿದೆ. | |

<table>
<tr>
<td>42</td>
<td>
ಬಾಕಿ ಇರುವ ಪ್ರವೇಶ ಶುಲ್ಕವನ್ನು ವಸೂಲಿಸುವ ಬಗ್ಗೆ.<br>
ಕನ್ನಡ ವಿಶ್ವವಿದ್ಯಾಲಯ ಹಂಪಿಯ ಅಧ್ಯಾಯನಾಂಗ ವಿಭಾಗದ 2019–20ನೇ ಸಾಲಿನಲ್ಲಿ ಜರುಗಿದ ಡಿಪ್ಲೋಮಾ, ಸ್ನಾತಕೋತ್ತರ ಪದವಿ, ಎಮ್.ಫಿಲ್, ಎಮ್.ಎ, ಪಿಹೆಚ್.ಡಿ, ಕೋರ್ಸಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಪಡೆಯಬೇಕಾದ ಪ್ರವೇಶ ಶುಲ್ಕ ಪಡೆಯಲಾದ/ಸ್ವೀಕರಿಸಿದ ಪ್ರವೇಶ ಶುಲ್ಕ ಹಾಗೂ ಬಾಕಿ ಇರುವ/ವಸೂಲಿಸಬೇಕಾದ ಪ್ರವೇಶ ಶುಲ್ಕದ ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ.ಸಂ</th><th>ವಿದ್ಯಾರ್ಥಿಗಳ ಸಂಖ್ಯೆ</th><th>ಬೇಡಿಕೆ</th><th>ಸ್ವೀಕೃತಿ (ವಾರ್ಷಿಕ ಲೆಕ್ಕಪತ್ರದನ್ವಯ)</th><th>ಬಾಕಿ</th></tr>
<tr><td>01</td><td>1317</td><td>67,48,300</td><td>54,78,575</td><td>12,69,725</td></tr>
</table>
(ಕೋರ್ಸವಾರು ವಿವರ ಅನುಬಂಧ–20ರಲ್ಲಿ ನೀಡಲಾಗಿದೆ)<br>
ಒಟ್ಟು ರೂ.67,48,300/–ಗಳ ಬೇಡಿಕೆ ಮೊತ್ತದಲ್ಲಿ 2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದನ್ವಯ ರೂ.54,78,575/–ಗಳು ಸ್ವೀಕೃತಿಯಾಗಿದ್ದು, ಇನ್ನೂ ರೂ.12,69,725/–ಗಳ ಬಾಕಿ ಶುಲ್ಕವು ವಸೂಲಿಸಲು ಸೂಚಿಸಿದೆ. ಸದರಿ ಪ್ರವೇಶ ಶುಲ್ಕದ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.<br>
01. ವಿಶ್ವವಿದ್ಯಾಲಯದಲ್ಲಿ ನಡೆಸಲಾಗುತ್ತಿರುವ ವಿವಿಧ ಕೋರ್ಸಗಳಿಗೆ ಸಂಬಂಧಿಸಿದಂತೆ ಪ್ರತಿ ಶೈಕ್ಷಣಿಕ ವರ್ಷಕ್ಕೆ ಕೋರ್ಸವಾರು ಪ್ರವೇಶ ಶುಲ್ಕವನ್ನು ನಿಗದಿಪಡಿಸುವುದು. ನಿಗದಿಪಡಿಸಲಾದ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಭರಿಸಲು ವಿದ್ಯಾರ್ಥಿಗಳಿಗೆ ಶುಲ್ಕ ಭರಿಸುವ ಕೊನೆಯ ದಿನಾಂಕವನ್ನು ನಮೂದಿಸುವುದು, ಕೊನೆಯ ದಿನಾಂಕದ ತರುವಾಯ ಭರಿಸಲಾಗುವ ಶುಲ್ಕಕ್ಕೆ ದಂಡ ವಿಧಿಸುವ/ದಂಡದೊಂದಿಗೆ ಭರಿಸಬೇಕಾದ ಮತ್ತು ಇತರೆ ಸಂಬಂಧಿಸಿದ ಎಲ್ಲಾ ವಿವರಗಳನ್ನೊಳಗೊಂಡ ಅಧಿಸೂಚನೆಯನ್ನು ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ/ಪ್ರವೇಶಾತಿಯ ಸಮಯದಲ್ಲಿ ಹೊರಡಿಸಬೇಕಾಗುತ್ತದೆ. ಆದರೆ ಅಧ್ಯಯನಾಂಗ ವಿಭಾಗದಿಂದ/ವಿಶ್ವವಿದ್ಯಾಲಯದಿಂದ ಯಾವುದೇ ಅಧಿಸೂಚನೆಯನ್ನು ಹೊರಡಿಸದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ.<br>
02. ಪ್ರವೇಶ ಶುಲ್ಕವನ್ನು ಪ್ರಸ್ತುತವಾಗಿ ವಿದ್ಯಾರ್ಥಿಗಳು ಹಣಕಾಸು ವಿಭಾಗದಲ್ಲಿ ನಗದು ರೂಪದಲ್ಲಿ ಶುಲ್ಕವನ್ನು ಪಾವತಿಸಿ ದ್ವಿಪ್ರತಿಯ ನಗದು ರಸೀದಿಗಳನ್ನು ಪಡೆದು, ಅದರಲ್ಲಿ ಒಂದು ಪ್ರತಿಯನ್ನು ವಿಭಾಗದ ಮುಖ್ಯಸ್ಥರಿಗೆ, ಮತ್ತೊಂದು ಪ್ರತಿಯನ್ನು ವಿದ್ಯಾರ್ಥಿ ಪ್ರತಿಯಾಗಿ ಪಡೆಯುತ್ತಿದ್ದಾರೆ. ಮುಂದುವರೆದಂತೆ ವಿಭಾಗದ ಮುಖ್ಯಸ್ಥರು ಸದರಿ ನಗದು ರಸೀದಿಯನ್ನು ವಿದ್ಯಾರ್ಥಿಗಳಿಂದ ಪಡೆದ ನಂತರ ಪ್ರವೇಶಾತಿ ವಹಿಯಲ್ಲಿ (Admission Register) ವಿವರಗಳನ್ನು ನಮೂದಿಸದೇ ವಿದ್ಯಾರ್ಥಿವಾರು ವೈಯುಕ್ತಿಕ ಕಡತ ಸಿದ್ದಪಡಿಸಿ ಅಧ್ಯಯನಾಂಗ ವಿಭಾಗಕ್ಕೆ ಕಳುಹಿಸಲಾಗುತ್ತಿದೆ.
</td>
<td>ಆಕ್ಷೇಪಣೆಯಲ್ಲಿ ಸೂಚಿಸಿರುವಂತೆ ಎಲ್ಲಾ ವಿದ್ಯಾರ್ಥಿಗಳನ್ನು ಸಮಗ್ರವಾಗಿ ತೆಗೆದುಕೊಳ್ಳಲಾಗಿದೆ. ಆದರೆ ಪಜಾ/ಪಪಂ, ಪ್ರ–1, ಓಬಿಸಿ ಮತ್ತು ಸಾಮಾನ್ಯ ವರ್ಗದ ಎಲ್ಲಾ ವಿದ್ಯಾರ್ಥಿಗಳು ಇರುತ್ತಾರೆ. ಪಜಾ/ಪಪಂ/ಪ್ರ–1 ಮತ್ತು ಓಬಿಸಿ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ವಿನಾಯತಿ ಇರುತ್ತದೆ. ಕಾರಣ ಯಾವುದೇ ಲೋಪವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.</td>
<td></td>
</tr>
</table>

| | | | |
|---|---|---|---|
| | ಇದರಿಂದ ಆಯಾ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ಮತ್ತು ಪ್ರವೇಶ ಶುಲ್ಕದ ನಿಖರವಾದ ಮಾಹಿತಿಯನ್ನು ಅಧ್ಯಯನಾಂಗ ವಿಭಾಗದಲ್ಲಿ ನಿರ್ವಹಣೆ ಮಾಡಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳಿಂದ ಪಡೆಯಬೇಕಾದ ಪ್ರವೇಶ ಶುಲ್ಕ, ಪಡೆಯಲಾದ ಪ್ರವೇಶ ಶುಲ್ಕ ವಿವರ, ಬಾಕಿ ಇರುವ ಪ್ರವೇಶ ಶುಲ್ಕದ ವಿವರ ಮತ್ತು ಇತರ ಅವಶ್ಯಕ ಮಾಹಿತಿಯ ವಿವರವನ್ನು ವಿಭಾಗದ ಮುಖ್ಯಸ್ಥರು ನಿರ್ವಹಿಸದೇ ಅಧ್ಯಯನಾಂಗ ವಿಭಾಗದಲ್ಲಿ ನಿರ್ವಹಿಸುತ್ತಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 57 ದಿನಾಂಕ: 03-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಪ್ರವೇಶ ಶುಲ್ಕವನ್ನು ಸಂದಾಯ ಮಾಡಲು ಅನುಸರಿಸುತ್ತಿರುವ ಸದರಿ ಪದ್ಧತಿಯನ್ನು ಬದಲಾಯಿಸಿ ನೇರವಾಗಿ ವಿದ್ಯಾರ್ಥಿಗಳಿಂದಲೇ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಶುಲ್ಕ ಪಾವತಿಯ ಪದ್ಧತಿಯನ್ನು ವೆಬ್‌ಸೈಟ್‌ನ(System Softwere)ನಲ್ಲಿ ಅಳವಡಿಸಬಹುದಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ನೀಡಲಾಗಿದೆ. ಅಲ್ಲಿಯವರೆಗೆ ಬಾಕಿ ಇರುವ ಪ್ರವೇಶ ಶುಲ್ಕ **ರೂ.12,69,725/-ಗಳ ವಸೂಲಾತಿಯಲ್ಲಿಡಲಾಗಿದೆ.** | | |
| **43** | **ಬಾಕಿ ಇರುವ ಪರೀಕ್ಷಾ ಶುಲ್ಕವನ್ನು ವಸೂಲಿಸುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯ ಅಧ್ಯಯನಾಂಗ ವಿಭಾಗದ 2019-20ನೇ ಸಾಲಿನಲ್ಲಿ ಜರುಗಿದ ಡಿಪ್ಲೋಮಾ, ಸ್ನಾತಕೋತ್ತರ ಪದವಿ, ಎಮ್.ಫಿಲ್, ಎಮ್.ಎ. ಪಿಹೆಚ್.ಡಿ. ಕೋರ್ಸಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಪಡೆಯಬೇಕಾದ ಪರೀಕ್ಷಾ ಶುಲ್ಕ ಪಡೆಯಲಾದ/ಸ್ವೀಕರಿಸಿದ ಪರೀಕ್ಷಾ ಶುಲ್ಕ ಹಾಗೂ ಬಾಕಿ ಇರುವ/ವಸೂಲಿಸಬೇಕಾದ ಪರೀಕ್ಷಾ ಶುಲ್ಕದ ವಿವರ ಈ ಕೆಳಗಿನಂತಿದೆ.<br><table><tr><th>ಕ್ರ.ಸಂ</th><th>ವಿದ್ಯಾರ್ಥಿಗಳ ಸಂಖ್ಯೆ</th><th>ಬೇಡಿಕೆ</th><th>ಸ್ವೀಕೃತಿ. ವಾರ್ಷಿಕ ಲೆಕ್ಕಪತ್ರದನ್ವಯ</th><th>ಬಾಕಿ</th></tr><tr><td>01</td><td>3609</td><td>22,01,000</td><td>10,02,752</td><td>11,98,248</td></tr></table>(ಕೋರ್ಸವಾರು ವಿವರ <u>**ಅನುಬಂಧ-21ರಲ್ಲಿ**</u> ನೀಡಲಾಗಿದೆ)<br>ಒಟ್ಟು ರೂ.22,01,000/-ಗಳ ಬೇಡಿಕೆ ಮೊತ್ತದಲ್ಲಿ 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದನ್ವಯ ರೂ.10,02,248/-ಗಳು ಸ್ವಿಕೃತಿಯಾಗಿದ್ದು, ಇನ್ನೂ **ರೂ.11,98,248/-ಗಳ ಬಾಕಿ ಶುಲ್ಕವು ವಸೂಲಿಸಲು ಸೂಚಿಸಿದೆ.** | ಆಕ್ಷೇಪಣೆಯಲ್ಲಿ ಸೂಚಿಸಿರುವಂತೆ ಎಲ್ಲಾ ವಿದ್ಯಾರ್ಥಿಗಳನ್ನು ಸಮಗ್ರವಾಗಿ ತೆಗೆದುಕೊಳ್ಳಲಾಗಿದೆ. ಆದರೆ ಪಜಾ/ಪಪಂ, ಪ್ರ-1, ಓಬಿಸಿ ಮತ್ತು ಸಾಮಾನ್ಯ ವರ್ಗದ ಎಲ್ಲಾ ವಿದ್ಯಾರ್ಥಿಗಳು ಇರುತ್ತಾರೆ. ಪಜಾ/ಪಪಂ/ಪ್ರ1 ಮತ್ತು ಓಬಿಸಿ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ವಿನಾಯತಿ ಇರುತ್ತದೆ. ಕಾರಣ ಯಾವುದೇ ಲೋಪವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | ಸದರಿ ಪರೀಕ್ಷಾ ಶುಲ್ಕದ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತವೆ.<br>01. ವಿಶ್ವವಿದ್ಯಾಲಯದಲ್ಲಿ ನಡೆಸಲಾಗುತ್ತಿರುವ ವಿವಿಧ ಕೋರ್ಸುಗಳಿಗೆ ಸಂಬಂಧಿಸಿದಂತೆ ಪ್ರತಿ ಶೈಕ್ಷಣಿಕ ವರ್ಷಕ್ಕೆ ಕೋರ್ಸವಾರು ಪರೀಕ್ಷಾ ಶುಲ್ಕವನ್ನು ನಿಗದಿಪಡಿಸುವುದು, ನಿಗದಿಪಡಿಸಲಾದ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಭರಿಸಲು ವಿದ್ಯಾರ್ಥಿಗಳಿಗೆ ಶುಲ್ಕ ಭರಿಸುವ ಕೊನೆಯ ದಿನಾಂಕವನ್ನು ನಮೂದಿಸುವುದು, ಕೊನೆಯ ದಿನಾಂಕದ ತರುವಾಯ ಭರಿಸಲಾಗುವ ಶುಲ್ಕಕ್ಕೆ ದಂಡ ವಿಧಿಸುವ/ದಂಡದೊಂದಿಗೆ ಭರಿಸಬೇಕಾದ ಮತ್ತು ಇತರೆ ಸಂಬಂಧಿಸಿದ ಎಲ್ಲಾ ವಿವರವನ್ನೊಳಗೊಂಡ ಅಧಿಸೂಚನೆಯನ್ನು ಪರೀಕ್ಷೆಯ ಪೂರ್ವದಲ್ಲಿ ಹೊರಡಿಸಬೇಕಾಗಿರುತ್ತದೆ. ಆದರೆ ಅಧ್ಯಯನಾಂಗ ವಿಭಾಗದಿಂದ/ವಿಶ್ವವಿದ್ಯಾಲಯದಿಂದ ಯಾವುದೇ ಅಧಿಸೂಚನೆಯನ್ನು ಹೊರಡಿಸದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ.<br>02. ಪರೀಕ್ಷಾ ಶುಲ್ಕವನ್ನು ಪ್ರಸ್ತುತವಾಗಿ ವಿದ್ಯಾರ್ಥಿಗಳು ಹಣಕಾಸು ವಿಭಾಗದಲ್ಲಿ ನಗದು ರೂಪದಲ್ಲಿ ಶುಲ್ಕವನ್ನು ಪಾವತಿಸಿ. ದ್ವಿ ಪ್ರತಿಯ ನಗದು ರಸೀದಿಯನ್ನು ಪಡೆದು, ಅದರಲ್ಲಿ ಒಂದು ಪ್ರತಿಯನ್ನು ವಿಭಾಗದ ಮುಖ್ಯಸ್ಥರಿಗೆ, ಮತ್ತೊಂದು ಪ್ರತಿಯನ್ನು ವಿದ್ಯಾರ್ಥಿ ಪ್ರತಿಯಾಗಿ ಪಡೆಯುತ್ತಿದ್ದಾರೆ, ಮುಂದುವರೆದಂತೆ ವಿಭಾಗದ ಮುಖ್ಯಸ್ಥರು ಸದರಿ ನಗದು ರಸೀದಿಯನ್ನು ವಿದ್ಯಾರ್ಥಿಗಳಿಂದ ಪಡೆದ ನಂತರ ಪರೀಕ್ಷಾ ಶುಲ್ಕದ ವಹಿಯಲ್ಲಿ ವಿವರಗಳನ್ನು ನಮೂದಿಸದೇ ವಿದ್ಯಾರ್ಥಿವಾರು ವೈಯುಕ್ತಿಕ ಕಡತ ಸಿದ್ದಪಡಿಸಿ ಅಧ್ಯಯನಾಂಗ ವಿಭಾಗಕ್ಕೆ ಕಳುಹಿಸಲಾಗುತ್ತಿದೆ. ಇದರಿಂದ ಆಯಾ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ/ಪರೀಕ್ಷಾ ಶುಲ್ಕ ಭರಿಸಿದ ನಿಖರವಾದ ಮಾಹಿತಿಯನ್ನು ಅಧ್ಯಯಾನಾಂಗ ವಿಭಾಗದಲ್ಲಿ ನಿರ್ವಹಣೆ ಮಾಡಿರುವುದಿಲ್ಲ.<br>ಆದ್ದರಿಂದ ವಿದ್ಯಾರ್ಥಿಗಳಿಂದ ಪಡೆಯಬೇಕಾದ ಪರೀಕ್ಷಾ ಶುಲ್ಕ, ಪಡೆಯಲಾದ ಪರೀಕ್ಷಾ ಶುಲ್ಕ ಹಾಗೂ ಬಾಕಿ ಇರುವ ಪರೀಕ್ಷಾ ಶುಲ್ಕದ ವಿವರವನ್ನು ವಿಭಾಗದ ಮುಖ್ಯಸ್ಥರು ನಿರ್ವಹಿಸದಿರುವುದು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 58 ದಿನಾಂಕ: 03-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಕಾರಣ ಪರೀಕ್ಷಾ ಶುಲ್ಕವನ್ನು ಸಂದಾಯ ಮಾಡಲು ಅನುಸರಿಸುತ್ತಿರುವ ಸದರಿ ಪದ್ದತಿಯನ್ನು ಬದಲಾಯಿಸಿ ನೇರವಾಗಿ ವಿದ್ಯಾರ್ಥಿಗಳಿಂದಲೇ ವಿಶ್ವವಿದ್ಯಾಲಯದ ವೆಬ್‌ಸೈಟನಲ್ಲಿ Online ಮುಖಾಂತರ ಶುಲ್ಕ ಪಾವತಿಯ ಪದ್ದತಿಯನ್ನು ವೆಬ್‌ಸೈಟನ System Software ನಲ್ಲಿ ಅಳವಡಿಸಬಹುದಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ನೀಡಲಾಗಿದೆ. ಅಲ್ಲಿಯವರೆಗೆ **ರೂ.11,98,248/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | | |

| | | | |
|---|---|---|---|
| 44 | **ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ದಾಖಲೆಗಳನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಕೇಂದ್ರ ಆಡಳಿತ ಕಛೇರಿಯಲ್ಲಿರುವ ವಿಷಯ ನಿರ್ವಾಹಕರು/ಸಿಬ್ಬಂದಿಯವರನ್ನು ಹೊರತುಪಡಿಸಿ ಇತರೆ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧೀಕ್ಷಕರು, ಹಿರಿಯ ಸಹಾಯಕರು ಹಾಗೂ ಕಿರಿಯ ಸಹಾಯಕರು ಕೆಲಸದ ಪ್ರಭಾರದ ಬಗ್ಗೆ ಈ ಕೆಳಕಂಡ ಅಂಶಗಳು ಗಮನಿಸಲಾಗಿದೆ.<br>01. ವಿಭಾಗಗಳಲ್ಲಿ ಕಡ್ಡಾಯವಾಗಿ ನಿರ್ವಹಿಸಬೇಕಾದ ಅವಶ್ಯಕ ದಾಖಲೆಗಳಾದ ನಗದು ಪುಸ್ತಕ, ದಾಸ್ತಾನು ಪುಸ್ತಕ, ಪ್ರವೇಶ ದಾಖಲಾತಿ, ಚೆಕ್‌ರಿಜಿಸ್ಟರ್, ಸಾದಿಲ್ವಾರು ರಿಜಿಸ್ಟರ್, ಸ್ವೀಕೃತಿಗೊಂಡ ಪ್ರವೇಶ ಶುಲ್ಕದ ನಕಲು ಪ್ರತಿ, ವೆಚ್ಚಮಾಡಿದ ನಕಲು ವೋಚರಗಳು ಮತ್ತು ಇತರೆ ದಾಖಲೆಗಳನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿರುತ್ತಾರೆ.<br>02. ವಿಭಾಗವಾರು ಲೆಕ್ಕಪರಿಶೋಧನೆ ಕೈಗೊಂಡಾಗ ವಿಭಾಗಗಳಲ್ಲಿ ಪ್ರಸ್ತಕವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಇತರೆ ವಿಭಾಗದಿಂದ ವರ್ಗಾವಣೆಗೊಂಡಿರುವುದಾಗಿ ಹಾಗೂ ಹಿಂದಿನ ವಿಷಯ ನಿರ್ವಾಹಕರು ಯಾವುದೇ ದಾಖಲೆಗಳನ್ನು/ಪ್ರಭಾರವನ್ನು ನೀಡಿರುವುದಿಲ್ಲವೆಂದು/ ದಾಖಲಾತಿಗಳನ್ನು ಅಪಡೇಟ್ ಮಾಡಿಲ್ಲವೆಂದು ಕಾರಣ ಹೇಳಿ ಲೆಕ್ಕಪರಿಶೋಧನೆಗೆ ಅಪೂರ್ಣ ದಾಖಲೆಗಳನ್ನು ಸಲ್ಲಿಸಿರುವುದು ಅಥವಾ ದಾಖಲೆಗಳನ್ನು ಒದಗಿಸದೇ ಇರುವುದು ಆಕ್ಷೇಪಿಸಿದೆ. ಪ್ರಯುಕ್ತ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ವಿಭಾಗಗಳ ಆಂತರಿಕ ಲೆಕ್ಕಪರಿಶೋಧನೆಯನ್ನು ಪ್ರತಿವರ್ಷ ಕೈಗೊಳ್ಳಲು ತಿಳಿಸಿದೆ.<br>ಸದರಿ ಸಿಬ್ಬಂದಿಯವರಿಗೆ ಕೆಲಸದ ಹಂಚಿಕೆ/ಪ್ರಭಾರ ನೀಡಿದ ಯಾವುದೇ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಅಲ್ಲದೇ ವಿಭಾಗಗಳಲ್ಲಿ ಮೇಲೆ ತಿಳಿಸಿದ ಅವಶ್ಯಕ ದಾಖಲೆಗಳನ್ನು ಪ್ರತಿ ತಿಂಗಳಲ್ಲಿ ಮೂರು ಅಥವಾ ನಾಲ್ಕು ದಿನಗಳಲ್ಲಿ ನಿರ್ವಹಿಸಬಹುದಾಗಿದೆ. ಆದರೆ ಈ ಮೂರು ಅಥವಾ ನಾಲ್ಕು ದಿನದಗಳ ಕೆಲಸಕ್ಕೆ ಇಡೀ ಒಂದು ತಿಂಗಳ ವೇತನ ನೀಡಿ ನಿಶ್ಫಲ ವೆಚ್ಚ ಮಾಡಲಾಗಿರುತ್ತದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ.<br>ಆದ್ದರಿಂದ ಸದರಿ ವಿಭಾಗದ ಕಾರ್ಯಚರಣೆಗೆ (ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ) ಮಾಡಲಾದ ವೆಚ್ಚ **ರೂ.77,51,160/-ಗಳನ್ನು** ನಿಶ್ಫಲ ವೆಚ್ಚವೆಂದು ಪರಿಗಣಿಸಲಾಗಿದೆ. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

ವೇತನ ವೆಚ್ಚದ ವಿವರವನ್ನು ಈ ಕೆಳಗಿನಂತೆ ಅಂದಾಜಿಸಲಾಗಿದೆ.

| **ಕ್ರ.ಸಂ.** | **ಹುದ್ದೆ** | **ಪ್ರತಿ ಮಾಹೆಗೆ** | **2019-20ನೇ ಸಾಲಿನಲ್ಲಿ ಅಂದಾಜಿಸಿದ ಒಟ್ಟು ಮೊತ್ತ.** |
|---|---|---|---|
| 1 | ಅಧಿಕ್ಷಕರು(1) | 67,734 | 8,12,808 |
| 2 | ಹಿರಿಯ ಸಹಾಯಕರು(6ಜನ) | 2,98,974 | 35,87,688 |
| 3 | ಕಿರಿಯ ಸಹಾಯಕರು & ವಿಶ್ರಾಂತಿಗೃಹ ಮೇಲ್ವಿಚಾರಕರು ಹಾಗೂ ಬೆರಳಚ್ಚುಗಾರರು | 2,79,222 | 33,50,664 |
| | ಒಟ್ಟು | 6,45,930 | 77,51,160 |

(ಸಿಬ್ಬಂದಿವಾರು ವಿವರ **ಅನುಬಂಧ-22ರಲ್ಲಿ** ನೀಡಲಾಗಿದೆ)

ಮೇಲೆ ವಿವರಿಸಿದಂತೆ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 1-ಅಧೀಕ್ಷಕರು, 6-ಹಿರಿಯ ಸಹಾಯಕರು, 7-ಕಿರಿಯ ಸಹಾಯಕರು, 1-ಬೆರಳಚ್ಚುಗಾರರು, 1-ವಿಶ್ರಾಂತಿಗೃಹ ಮೇಲ್ವಿಚಾರಕರು ಒಟ್ಟು 16 ಸಿಬ್ಬಂದಿಗಳನ್ನು, ಪ್ರತಿ 6 ರಿಂದ 8 ವಿಭಾಗಗಳಿಗೆ ಒಬ್ಬ ಹಿರಿಯ/ಕಿರಿಯ ಸಹಾಯಕರನ್ನು ನಿಯೋಜಿಸಿ ಉಳಿದ ಹೆಚ್ಚುವರಿ ಸಿಬ್ಬಂದಿಗಳನ್ನು ಇತರೆ ವಿಭಾಗಗಳಾದ ಹಣಕಾಸು ವಿಭಾಗ, ಸಿಬ್ಬಂದಿ ವಿಭಾಗ ಅಥವಾ ಹೆಚ್ಚು ಕೆಲಸವಿರುವ ಮುಖ್ಯ ಘಟಕ/ವಿಭಾಗಗಳಲ್ಲಿ ನಿಯೋಜಿಸಲು ತಿಳಿಸಿದೆ ಅಥವಾ ಸದರಿ ಹುದ್ದೆಗಳನ್ನು ಹೆಚ್ಚುವರಿ ಹುದ್ದೆಗಳೆಂದು ಪರಿಗಣಿಸಿ ಸರ್ಕಾರಕ್ಕೆ ಅಧ್ಯರ್ಪಿಸಲು ನಿಯಮಾನುಸಾರ ಕ್ರಮಕೈಗೊಳ್ಳಲು ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 61 ದಿನಾಂಕ: 07-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಕ್ರಮ ಸಂಖ್ಯೆ:14 ಅನ್ನಪೂರ್ಣ ಕಮ್ಮಾರವರುಕಿರಿಯ ಸಹಾಯಕರು, ಮಹಿಳಾ ಅಧ್ಯಯನ ವಿಭಾಗ ಇವರು ಸದರಿಯವರ ಎಲ್ಲ ಕಾರ್ಯಚಟುವಟಿಕೆಗಳು ಕೇಂದ್ರ ಮತ್ತು ವಿಭಾಗಕ್ಕೆ ಅಗತ್ಯವಿರುವ ಹಿನ್ನಲೆಯಲ್ಲಿ ಸದರಿಯವರ ಸಮರ್ಪಕವಾಗಿ ನಿರ್ವಹಿಸುತ್ತಾರೆ ಎಂದು ತಿಳಿಸಿದ್ದಾರೆ. ಆದರೆ ವಿಶ್ವವಿದ್ಯಾಲಯ ಕೆಲಸದ ಹಂಚಿಕೆ/ಪ್ರಭಾರ ನೀಡಿದ ಯಾವುದೇ ಆದೇಶಗಳನ್ನು ಒದಗಿಸದೇ ಇರುವುದರಿಂದ ಹಾಗೂ ಸಮಂಜಸವಾದ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. ಅಲ್ಲಿಯವರೆಗೆ ಪಾವತಿಯಾದ ವೇತನದ ಒಟ್ಟು ಮೊತ್ತ **ರೂ.77,51,160/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| | | | |
|---|---|---|---|
| 45 | **ದೂರಶಿಕ್ಷಣದ ಕೋರ್ಸ್‌ಗಳ ಬಾಕಿ ಇರುವ ಪ್ರವೇಶ ಹಾಗೂ ಪರೀಕ್ಷಾ ಶುಲ್ಕವನ್ನು ವಸೂಲಿಸುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯ ದೂರಶಿಕ್ಷಣ ವಿಭಾಗದ 2019–20ನೇ ಸಾಲಿನಲ್ಲಿ ಜರುಗಿದ ಡಿಪ್ಲೋಮಾ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಪಡೆಯಬೇಕಾದ ಪ್ರವೇಶ ಹಾಗೂ ಪರೀಕ್ಷಾ ಶುಲ್ಕ, ಪಡೆಯಲಾದ/ಸ್ವೀಕರಿಸಿದ ಪ್ರವೇಶ ಹಾಗೂ ಪರೀಕ್ಷಾ ಶುಲ್ಕ ಹಾಗೂ ಬಾಕಿ ಇರುವ/ವಸೂಲಿಸಬೇಕಾದ ಪ್ರವೇಶ ಹಾಗೂ ಪರೀಕ್ಷಾ ಶುಲ್ಕದ ವಿವರ ಈ ಕೆಳಗಿನಂತಿದೆ.<br><table><tr><th>ಕ್ರ. ಸಂ.</th><th>ವಿದ್ಯಾರ್ಥಿಗಳ ಸಂಖ್ಯೆ</th><th>ಬೇಡಿಕೆ</th><th>ಸ್ವೀಕೃತಿ (ವಾರ್ಷಿಕ ಲೆಕ್ಕಪತ್ರದನ್ವಯ)</th><th>ಬಾಕಿ</th></tr><tr><td>01</td><td>1283</td><td>1,28,97,500</td><td>53,21,500</td><td>75,76,000</td></tr></table>(ಕೋರ್ಸ್‌ವಾರು ವಿವರ **ಅನುಬಂಧ–23**ರಲ್ಲಿ ನೀಡಲಾಗಿದೆ)<br>ಒಟ್ಟು ರೂ.1,28,97,500/–ಗಳ ಬೇಡಿಕೆ ಮೊತ್ತದಲ್ಲಿ 2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದನ್ವಯ ರೂ. 53,21,500/–ಗಳು ಸ್ವೀಕೃತಿಯಾಗಿದ್ದು, ಸದರಿ ಪ್ರವೇಶ ಶುಲ್ಕ ಹಾಗೂ ಪರೀಕ್ಷಾ ಶುಲ್ಕದ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತದೆ.<br>01. ದೂರಶಿಕ್ಷಣ ವಿಭಾಗದಲ್ಲಿ ನಡೆಸಲಾಗುತ್ತಿರುವ ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಪ್ರತಿ ಶೈಕ್ಷಣಿಕ ವರ್ಷಕ್ಕೆ ಕೋರ್ಸ್‌ವಾರು ಪ್ರವೇಶ ಹಾಗೂ ಪರೀಕ್ಷಾ ಶುಲ್ಕವನ್ನು ನಿಗದಿಪಡಿಸುವುದು. ನಿಗದಿಪಡಿಸಲಾದ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಭರಿಸಲು ವಿದ್ಯಾರ್ಥಿಗಳಿಗೆ ಶುಲ್ಕ ಭರಿಸುವ ಕೊನೆಯ ದಿನಾಂಕವನ್ನು ನಮೂದಿಸುವುದು, ಕೊನೆಯ ದಿನಾಂಕದ ತರುವಾಯ ಭರಿಸಲಾಗುವ ಶುಲ್ಕಕ್ಕೆ ದಂಡ ವಿಧಿಸುವ/ದಂಡದೊಂದಿಗೆ ಭರಿಸಬೇಕಾದ ಮತ್ತು ಇತರೆ ಸಂಬಂಧಿಸಿದ ಎಲ್ಲಾ ವಿವರವನ್ನೊಳಗೊಂಡ ಅಧಿಸೂಚನೆಯನ್ನು ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ/ ಪ್ರವೇಶಾತಿಯ ಸಮಯದಲ್ಲಿ ಪ್ರವೇಶ ಶುಲ್ಕದ ಅಧಿಸೂಚನೆ ಹಾಗೂ ಪರೀಕ್ಷೆಯ ಪೂರ್ವದಲ್ಲಿ ಪರೀಕ್ಷಾ ಶುಲ್ಕದ ಅಧಿಸೂಚನೆಯನ್ನು ಹೊರಡಿಸಬೇಕಾಗಿರುತ್ತದೆ. ಆದರೆ ದೂರಶಿಕ್ಷಣ ವಿಭಾಗದಿಂದ/ ವಿಶ್ವವಿದ್ಯಾಲಯದಿಂದ ಯಾವುದೇ ಅಧಿಸೂಚನೆಯನ್ನು ಹೊರಡಿಸದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ.<br>02. ಪ್ರವೇಶ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ಪ್ರಸ್ತುತವಾಗಿ ವಿದ್ಯಾರ್ಥಿಗಳು ಹಣಕಾಸು ವಿಭಾಗದಲ್ಲಿ ನಗದು ಹಾಗೂ ಡಿ.ಡಿ. ಮುಖಾಂತರ ಶುಲ್ಕವನ್ನು ಪಾವತಿಸಿ ದ್ವಿ ಪ್ರತಿಯ ನಗದು ರಸೀದಿಗಳನ್ನು ಪಡೆದು ಅದರಲ್ಲಿ ಒಂದು ಪ್ರತಿಯನ್ನು ವಿಭಾಗದ ಮುಖ್ಯಸ್ಥರಿಗೆ, ಮತ್ತೊಂದು ಪ್ರತಿಯನ್ನು ವಿದ್ಯಾರ್ಥಿ ಪ್ರತಿಯಾಗಿ ಪಡೆಯುತ್ತಿದ್ದಾರೆ. ಮುಂದುವರೆದಂತೆ ದೂರಶಿಕ್ಷಣ ವಿಭಾಗದಲ್ಲಿ ಸದರಿ | ಆಕ್ಷೇಪಣೆಯಲ್ಲಿ ಸೂಚಿಸಿರುವಂತೆ ಎಲ್ಲಾ ವಿದ್ಯಾರ್ಥಿಗಳನ್ನು ಸಮಗ್ರವಾಗಿ ತೆಗೆದುಕೊಳ್ಳಲಾಗಿದೆ. ಆದರೆ ಪಜಾ/ಪಪಂ/ಪ್ರ–1, ಓಬಿಸಿ ಮತ್ತು ಸಾಮಾನ್ಯ ವರ್ಗದ ಎಲ್ಲಾ ವಿದ್ಯಾರ್ಥಿಗಳು ಇರುತ್ತಾರೆ. ಪಜಾ/ಪಪಂ/ಪ್ರ–1 ಮತ್ತು ಓಬಿಸಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕವಿಹಂ:ದೂಶಿನಿ: ಪಜಾಪಪಂಶಿವೇಪಕ್ರ 2014–145 ದಿನಾಂಕ 07.11.2014 ರನ್ವಯ ಶುಲ್ಕ ಪಾವತಿ ವಿನಾಯತಿ ಇರುತ್ತದೆ. ವಾರ್ಷಿಕ ಆದಾಯ 2.5 ಲಕ್ಷದೊಳಗಿರುವ ಪಜಾ/ಪಪಂ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ವಿನಾಯತಿ ನೀಡಲಾಗಿದೆ ಹಾಗೂ ಸದರಿ ವಿದ್ಯಾರ್ಥಿಗಳ ಶಿಷ್ಯವೇತನ ಬಿಡುಗಡೆಯಾದ ನಂತರ ಪೂರ್ಣ ಶುಲ್ಕ ಪಡೆದು ಅಂಕಪಟ್ಟಿಗಳನ್ನು ವಿತರಣೆ ಮಾಡಲಾಗುತ್ತದೆ. ಕಾರಣ ಯಾವುದೇ ಲೋಪವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | ನಗದು ರಸೀದಿಯನ್ನು ವಿದ್ಯಾರ್ಥಿಗಳಿಂದ ಪಡೆದ ನಂತರ ಪ್ರವೇಶಾತಿ ವಹಿಯಲ್ಲಿ (Admission Register) ಹಾಗೂ ಪರೀಕ್ಷಾ ವಹಿಯಲ್ಲಿ (Exam Register) ವಿವರಗಳನ್ನು ನಮೂದಿಸಬೇಕಾಗಿರುತ್ತದೆ. ಆದರೆ ಸದರಿ ವಿಭಾಗದಲ್ಲಿ ಯಾವುದೇ ರಿಜಿಸ್ಟರ್‌ಗಳನ್ನು ನಿರ್ವಹಣೆ ಮಾಡಿರುವುದಿಲ್ಲ. ಇದರಿಂದ ದೂರಶಿಕ್ಷಣ ವಿಭಾಗದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು ಮತ್ತು ಪ್ರವೇಶ ಶುಲ್ಕದ ಹಾಗೂ ಪರೀಕ್ಷಾ ಶುಲ್ಕದ ನಿಖರವಾದ ಮಾಹಿತಿಯನ್ನು ನಿರ್ವಹಿಸುವುದಿಲ್ಲ. ಸದರಿ ವಿಭಾಗದವರು ಸಂಪೂರ್ಣವಾಗಿ ವಿಫಲಗೊಂಡಿರುತ್ತಾರೆ.<br>ಪ್ರಯುಕ್ತ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ವಿರುದ್ದ ಶಿಸ್ತುಕ್ರಮ ಜರುಗಿಸಲು ಸೂಚಿಸುತ್ತಾ ಪ್ರವೇಶ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ಸಂದಾಯ ಮಾಡಲು ಅನುಸರಿಸುತ್ತಿರುವ ಸದರಿ ಪದ್ದತಿಯನ್ನು ಬದಲಾಯಿಸಿ ನೇರವಾಗಿ ವಿದ್ಯಾರ್ಥಿಗಳಿಂದಲೇ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಶುಲ್ಕ ಪಾವತಿಯ ಪದ್ದತಿಯನ್ನು ವೆಬ್‌ಸೈಟ್‌ನ System Softwareನಲ್ಲಿ ಅಳವಡಿಸಬಹುದಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ನೀಡಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 67 ದಿನಾಂಕ: 09-12-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ 478 ವಿದ್ಯಾರ್ಥಿಗಳಿಗೆ ಸಂಸ್ಕೃತ ಮತ್ತು ಕನ್ನಡ ಇಲಾಖೆಯ ಆದೇಶ ಸಂಖ್ಯೆ: ಇಡಿ 373 ಯುಎನ್‌ಇ 2020 ದಿನಾಂಕ:19-12-2020 ಹಾಗೂ ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ: ಕ.ವಿ.ಹಂ.ಮಾ.ಶಿ.ನೆ ಪಜಾ/ಪಪಂ/ಶಿವೇ ಪತ್ರ 2014-15 ದಿನಾಂಕ: 07-11-2014ರಂತೆ ನೊಂದಣಿ ಶುಲ್ಕ ರೂ.1000/-ಗಳನ್ನು ಪಾವತಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿ, ಸಂಸ್ಕೃತ ಮತ್ತು ಕನ್ನಡ ಇಲಾಖೆ ಶುಲ್ಕ ಭರಿಸಿದ ನಂತರ ಅಂಕಪಟ್ಟಿ ವಿತರಿಸಲಾಗುವುದು ಎಂದು ನೀಡಿದ ಉತ್ತರ ಸಮಂಜವಿಲ್ಲದ ಪ್ರಯುಕ್ತ ಕಂಡಿಕೆ ಮುಂದುವರೆಸಿದೆ. ಅಲ್ಲಿಯವರೆಗೆ **ರೂ.75,76,000/-ಗಳ ಬಾಕಿ ಶುಲ್ಕವನ್ನು ವಸೂಲಾತಿಯಲ್ಲಿಡಲಾಗಿದೆ.** | | |
| **46** | **ದೇವರದಾಸಿಮಯ್ಯ ಅಧ್ಯಯನ ಪೀಠದ ರಾಜ್ಯಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮಕ್ಕೆ ಮಾಡಿರುವ ಖರ್ಚಿನ ಕುರಿತು.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿನ ದೇವರದಾಸಿಮಯ್ಯ ಅಧ್ಯಯನ ಪೀಠದಲ್ಲಿ ದಿನಾಂಕ:20-12-2019 ಮತ್ತು ದಿನಾಂಕ:21-12-2019 ಎರಡು ದಿನಗಳ ಕಾಲ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮಕ್ಕಾಗಿ ರೂ.1,55,000/-ಗಳ ಮುಂಗಡ ಹಣವನ್ನು ವಿಭಾಗದ ಸಂಚಾಲಕರಾದ ಡಾ॥ ಗೋವಿಂದ ಅವರಿಗೆ ಚೆಕ್ ಸಂಖ್ಯೆ:102691 ದಿನಾಂಕ:16-12-2019ರ ಮೂಲಕ ನೀಡಲಾಗಿರುತ್ತದೆ. ಸದರಿಯವರು ಕಾರ್ಯಕ್ರಮಕ್ಕೆ ರೂ.1,55,000/- ಖರ್ಚು ಮಾಡಿದ್ದು, ಖರ್ಚು ಮಾಡಿರುವ ಬಿಲ್ಲುಗಳ ವಿವರ ಈ ಕೆಳಗಿನಂತಿದೆ. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| ಕ್ರ.ಸಂ. | ಮುಂಗಡ ಹಣಪಡೆದವರ ಹೆಸರು | ವೋಚರ್ ಸಂಖ್ಯೆ ಮತ್ತು ದಿನಾಂಕ | ವೋಚರ್ ಮೊತ್ತ |
|---|---|---|---|
| 1 | ಡಾ॥ ಗೋವಿಂದ | 41<br>17–03–2020 | 1,55,000 |

(ಬಿಲ್ಲುವಾರು ವಿವರ **ಅನುಬಂಧ–24ರಲ್ಲಿ** ನೀಡಲಾಗಿದೆ)

ರೂ.1,55,000/–ಗಳ ಪಾವತಿಯಲ್ಲಿ ರೂ.34,252/–ಗಳ ಬಿಲ್ಲುಗಳು ಸರಿ ಇದ್ದು ರೂ.1,20,748/–ಗಳ ಪಾವತಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ವಿವರ ಈ ಕೆಳಗಿನಂತಿವೆ.

1. ಸರಕಾರದ ಆದೇಶ ಸಂಖ್ಯೆ: ಆಇ:01 ಟಿಸಿಇ 2019 ದಿನಾಂಕ:04–05–2019ರ ಅನ್ವಯ ಹಾಗೂ ಸಾದಿಲ್ವಾರು ವೆಚ್ಚ ಕೈಪಿಡಿ 1958 ನಿಯಮಗಳ ನಿಯಮ 55(49)(ಎ)ರ ಅನ್ವಯ ಕಛೇರಿಗಳಲ್ಲಿ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ರೂ.10,000/–ಗಳ ವರೆಗಿನ ಖರೀದಿಗೆ ಅವಕಾಶವಿರುತ್ತದೆ. ರೂ.10,000/–ಕ್ಕಿಂತ ಮೇಲ್ಪಟ್ಟು ಮತ್ತು ರೂ.1 ಲಕ್ಷಗಳ ವರೆಗಿನ ಖರೀದಿಗಳನ್ನು ಕಡ್ಡಾಯವಾಗಿ ದರಪಟ್ಟಿ ಕರೆಯುವುದರ ಮೂಲಕ ಖರೀದಿಸಬೇಕಾಗಿರುತ್ತದೆ. ಆದರೆ **ಅನುಬಂಧ–24ರಲ್ಲಿ** ಕ್ರಮ ಸಂಖ್ಯೆ:01 ಮತ್ತು 02 ರಲ್ಲಿ ರೂ. 9,576 + ರೂ. 9,576 = 19,152/–ಗಳ ಆಹ್ವಾನ ಪತ್ರಿಕೆಗಳನ್ನು ಮುದ್ರಣ ಮಾಡಲು ದರಪಟ್ಟಿ ಕರೆಯದೇ ನೇರವಾಗಿ ಆಹ್ವಾನ ಪತ್ರಗಳನ್ನು ಮುದ್ರಿಸಿ ಸದರಿ ನಿಯಮದ ಉಲ್ಲಂಘನೆ ಮಾಡಿರುತ್ತಾರೆ.
2. **ಅನುಬಂಧ–24ರಲ್ಲಿ** ಕ್ರಮ ಸಂಖ್ಯೆ: 05ರಲ್ಲಿ ವಿಚಾರ ಸಂಕಿರಣಕ್ಕೆ ಆಗಮಿಸಿರುವ ಅತಿಥಿಗಳಿಗೆ ಹಾಗೂ ವಿದ್ವಾಂಸರಿಗೆ ಮತ್ತು ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ಸಿಬ್ಬಂದಿಗಳಿಗೆ ಬೆಳಗಿನ ಉಪಹಾರ ಮಧ್ಯಾಹ್ನದ ಊಟ, ಸಾಯಂಕಾಲದ ತಿಂಡಿ ಮತ್ತು ಚಹಾ, ಕಾಫಿಗೆ ಹಾಗೂ ರಾತ್ರಿ ಊಟಕ್ಕೆ ಹೀಗೆ ದಿನಾಂಕ:20–12–2019 ರಂದು ಹಾಗೂ ದಿನಾಂಕ:21–12–2019 ರವರೆಗೆ ಎರಡು ದಿನಗಳಿಗೆ ವೆಚ್ಚ ಭರಿಸಲಾಗಿರುತ್ತದೆ. ಸದರಿ ವಿಚಾರ ಸಂಕಿರಣಕ್ಕೆ ಊಟ ಹಾಗೂ ಇತರೆ ವೆಚ್ಚ ಮಾಡಲು ಅವಕಾಶವಿರುವುದಿಲ್ಲ. ಸದರಿ ವೆಚ್ಚ ಮಾಡಲು ಸರಕಾರದ ಆದೇಶವಿದ್ದಲ್ಲಿ ಲೆಕ್ಕಪರಿಶೋದನೆಗೆ ಒದಗಿಸುವುದು.

   ಅಲ್ಲದೇ ಸದರಿ ವಿಚಾರಣೆ ಸಂಕಿರಣಕ್ಕೆ ಅತಿಥಿ ಹಾಗೂ ವಿದ್ವಾಂಸರಿಗೆ ಆತಿಥ್ಯ ನೀಡಿರುವುದು ಸರಿಯಷ್ಟೇ ಆದರೆ ವಿದ್ಯಾರ್ಥಿಗಳಿಗೆ ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಉಪಹಾರ ಹಾಗೂ ಊಟದ ವ್ಯವಸ್ಥೆ ಮಾಡಿರುವ ಔಚಿತ್ಯ ತಿಳಿದು ಬಂದಿರುವುದಿಲ್ಲ.

| | | | |
|---|---|---|---|
| | ಪ್ರಯುಕ್ತ ಹೆಚ್ಚುವರಿಯಾಗಿ ಹಾಗೂ ಅನಾವಶ್ಯಕವಾಗಿ ಊಟ ಮತ್ತು ಇತರೆ ಗಳಿಕೆ ಮಾಡಲಾದ ವೆಚ್ಚಗಳನ್ನು ಈ ಕೆಳಗಿನಂತೆ ವಸೂಲಿಸಲು ಸೂಚಿಸಿದೆ.<br><br><table><tr><th>ಕ್ರ.ಸಂ.</th><th>ವಿವರ</th><th>ಮೊತ್ತ</th></tr><tr><td>1.</td><td>ಊಟದ ಬಿಲ್ಲಿನ ಒಟ್ಟು ಮೊತ್ತ (500 ಜನಗಳಿಗೆ)</td><td>97,800</td></tr><tr><td></td><td>ಅನುಬಂಧ–24ರ ಕ್ರಮ ಸಂಖ್ಯೆ: 03 & 04ರ ಅನ್ವಯ ಅತಿಥಿಗಳ/ವಿದ್ವಾಂಸರ ಸನ್ಮಾನಕ್ಕೆ ಖರೀದಿಸಿದ ಶಾಲುಗಳ ಸಂಖ್ಯೆ ಅನ್ವಯ<br>1. ಅತಿಥಿಗಳ ಸಂಖ್ಯೆ=16<br>2. ವಿಶ್ವವಿದ್ಯಾಲಯದ ಅಧಿಕಾರಿಗಳ ಸಂಖ್ಯೆ ಅಂದಾಜು =10 ಒಟ್ಟು 26<br>(ರೂ.97800/500=196 ಪ್ರತಿ ವ್ಯಕ್ತಿಗೆ. ಒಟ್ಟು ಜನರು 26 x196=5096)</td><td>5096</td></tr><tr><td></td><td>ಒಟ್ಟು (97,800–5,096)</td><td>92,704</td></tr></table><br>3. **ಅನುಬಂಧ–24ರಲ್ಲಿ** ಕ್ರಮ ಸಂಖ್ಯೆ:06 ರಲ್ಲಿ ಸದರಿ ವಿಚಾರ ಸಂಕಿರಣಕ್ಕೆ ಆಗಮಿಸಿರುವ ಅತಿಥಿಗಳಿಗೆ (20 ಜನ) ರಾತ್ರಿ ಊಟ ಮತ್ತು ಚಹಾಗೆ ರೂ.1760/–ಗಳನ್ನು ಶ್ರೀ ಅನ್ನಪೂರ್ಣೇಶ್ವರಿ ನಳಪಾಕವಿಶ್ವವಿದ್ಯಾಲಯ ಅತಿಥಿಗೃಹ ಇವರಿಗೆ ಪಾವತಿ ಮಾಡಲಾಗಿದೆ.<br>ಆದರೆ ಸದರಿ ಅವರು ಊಟ ಹಾಗೂ ಚಹಾಕ್ಕೆ ನಮೂದಿಸಿದ ದರಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ದರ ಒಪ್ಪಂದ (Rate Contract) ಮಾಡಿಕೊಳ್ಳದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಿಲಾಗಿದೆ.<br>4. **ಅನುಬಂಧ–24ರಲ್ಲಿ** ಕ್ರಮ ಸಂಖ್ಯೆ 07ರಲ್ಲಿ ಸದರಿ ವಿಚಾರ ಸಂಕಿರಣಕ್ಕೆ ಆಗಮಿಸಿರುವ ಅತಿಥಿಯಾದ ಡಾ॥ ಅಶೋಕ ಹೊಗ್ಗಣ್ಣ ಇವರಿಗೆ ಎರಡು ದಿನಗಳ ವಸತಿಗಾಗಿ ಶ್ರೀ ಕಲ್ಲೇಶ್ವರ ಲಾಡ್ಜ್ ಹೊಸಪೇಟೆಯಲ್ಲಿ ಕೊಠಡಿಯನ್ನು ಕಾಯ್ದಿರಿಸಿ ರೂ.2,240/–ಗಳನ್ನು ಪಾವತಿ ಮಾಡಿರುತ್ತಾರೆ.<br>ಆದರೆ ವಿಶ್ವವಿದ್ಯಾಲಯದ ಶ್ರೀಶೈಲ ಅತಿಥಿ ಗೃಹದ ಕೊಠಡಿ ಹಂಚುವಿಕೆಯ ರಿಜಿಸ್ಟರ್ (Room Allotment Register) ಅನ್ನು ಪರಿಶೀಲಿಸಿದಾಗ ಸದರಿ ಅತಿಥಿ ಗೃಹದಲ್ಲಿ ಒಟ್ಟು 10 ಕೊಠಡಿಗಳಿದ್ದು (VIP & VVIP ರೂಮ್ ಒಳೊಂಡಂತೆ) ದಿನಾಂಕ:20–12–2019 ಮತ್ತು 21–12–2019 ರಂದು | | |

<table>
<tr>
<td></td>
<td>ಹತ್ತು ಕೊಠಡಿಗಳ ಪೈಕಿ ಕೇವಲ 02 ಕೊಠಡಿಗಳನ್ನು ಹಂಚಿಕೆ ಮಾಡಿದ್ದು, ಬಾಕಿ 08 ಕೊಠಡಿಗಳು ಖಾಲಿ ಇರುವ ಬಗ್ಗೆ ತಿಳಿದು ಬಂದಿರುತ್ತದೆ. ಅಂದರೆ ಡಾ॥ ಅಶೋಕ ಹೊಗ್ಗಣ್ಣ ಇವರಿಗೆ ವಸತಿಯ ವ್ಯವಸ್ಥೆಯನ್ನು ವಿಶ್ವವಿದ್ಯಾಲಯದ ಶ್ರೀಶೈಲ ಅತಿಥಿಗೃಹದಲ್ಲಿ ಕಲ್ಪಿಸದ್ದೇ ರೂ.2240/–ಗಳ ಅನಾವಶ್ಯಕ ವೆಚ್ಚವನ್ನು ಮಾಡಲಾಗಿದೆ. ಪ್ರಯುಕ್ತ ಸದರಿ ಮೊತ್ತವನ್ನು ವಿಭಾಗದ ಸಂಚಾಲಕರಿಂದ ವಸೂಲಿಸಲು ಸೂಚಿಸಿದೆ.<br>
5. ಅನುಬಂಧ–24ರಲ್ಲಿ ಕ್ರಮ ಸಂಖ್ಯೆ 08ರಲ್ಲಿ ಅತಿಥಿಗಳಿಗೆ ಕರೆತರಲು ಕಾರು ಬಾಡಿಗೆಯನ್ನು ಪಡೆದು ರೂ.4,892/–ಗಳನ್ನು ಪಾವತಿ ಮಾಡಲಾಗಿರುತ್ತದೆ.<br>
ಆದರೆ ವಿಶ್ವವಿದ್ಯಾಲಯದ ವಾಹನ ಸಂಖ್ಯೆ: KA 35 M 3540 Spareನಲ್ಲಿದ್ದು, ಸದರಿ ವಾಹನವನ್ನು ಬಳಸಿಕೊಳ್ಳದೇ ಅತಿರಿಕ್ತವಾಗಿ ಬಾಡಿಗೆ ವಾಹನವನ್ನು ಪಡೆದು ರೂ. 4,892/–ಗಳನ್ನು ಅನಾವಶ್ಯಕ ವೆಚ್ಚ ಮಾಡಲಾಗಿದೆ. ಪ್ರಯುಕ್ತ ಸದರಿ ಮೊತ್ತವನ್ನು ವಿಭಾಗದ ಸಂಚಾಲಕರಿಂದ ವಸೂಲಿಸಲು ಸೂಚಿಸಿದೆ.<br>
ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 73 ದಿನಾಂಕ: 13–12–2021 ರಂದು ನೀಡಲಾಗಿದೆ. ಸದರಿಉತ್ತರವು ಸಮಂಜಸವಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರಿಸಿದೆ.<br>
ಅಲ್ಲಿಯವರಗೆ ರೂ.19,152 + 1760 = 20,912/–ಗಳನ್ನು ಆಕ್ಷೇಪಣೆಯ್ಲಲಿಡಲಾಗಿದೆ ಹಾಗೂ ರೂ.92,704 + 2,240 + 4,892 = ರೂ.99,836/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.</td>
<td></td>
<td></td>
</tr>
<tr>
<td>47</td>
<td>ಕರ್ನಾಟಕ ರಾಜ್ಯ ಸವಿತಾ ಸಮಾಜದ ಕುಲಶಾಸ್ತ್ರೀಯ ಅಧ್ಯಯನ ಯೋಜನೆಯ ಕ್ಷೇತ್ರಕಾರ್ಯ ಕೈಗೊಂಡು ಪ್ರಯಾಣ ಭತ್ಯೆ ಕ್ಲೇಮ್ ಮಾಡಿರುವ ಬಗ್ಗೆ.<br>
2019–20ನೇ ಸಾಲಿನಲ್ಲಿ ಮಾನವಶಾಸ್ತ್ರ ವಿಭಾಗದ ಪ್ರಾಧ್ಯಪಕರಾದ ಡಾ॥ ಎಲ್. ಶ್ರೀನಿವಾಸ್ ಇವರು ಕರ್ನಾಟಕ ರಾಜ್ಯ ಸವಿತಾ ಸಮಾಜದ ಕುಲಶಾಸ್ತ್ರೀಯ ಅಧ್ಯಯನ ಯೋಜನೆಯ ಕ್ಷೇತ್ರಕಾರ್ಯಕ್ಕಾಗಿ ಕರ್ನಾಟಕದ ವಿವಿಧ ಜಿಲ್ಲೆ ಹಾಗೂ ಗ್ರಾಮಗಳಿಗೆ ಭೇಟಿ ನೀಡಿ ಪ್ರಯಾಣ ಮಾಡಿದ್ದಕ್ಕೆ ಪ್ರಯಾಣ ಭತ್ಯೆ ಬಿಲ್ಲು ಕ್ಲೇಮ್ ಮಾಡಿರುತ್ತಾರೆ ವಿವರ ಕೆಳಗಿನಂತಿದೆ.
<table>
<tr><th>ಕ್ರ. ಸಂ.</th><th>ಲೆಕ್ಕ ಶೀರ್ಷಿಕೆ</th><th>ಚೆಕ್ ಸಂಖ್ಯೆ & ದಿನಾಂಕ</th><th>ಮೊತ್ತ</th><th>ಷರಾ</th></tr>
<tr><td>01</td><td>3501<br>507</td><td>044878<br>30–09–2019</td><td>75,000</td><td>ಕರ್ನಾಟಕ ರಾಜ್ಯ ಸವಿತಾ ಸಮಾಜದ ಕುಲಶಾಸ್ತ್ರೀಯ ಅಧ್ಯಯನ ಯೋಜನೆಯ ಕ್ಷೇತ್ರಕಾರ್ಯಕ್ಕಾಗಿ ಪ್ರಯಾಣ</td></tr>
<tr><td colspan="3">ಒಟ್ಟು</td><td>75,000</td><td></td></tr>
</table></td>
<td>ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.</td>
<td></td>
</tr>
</table>

| | | | |
|---|---|---|---|
| | ಸದರಿ ಪಾವತಿಯಲ್ಲಿ ಕಂಡುಬಂದ ನ್ಯೂನ್ಯತೆಗಳು ಕೆಳಗಿನಂತಿವೆ.<br>1) ಸದರಿ ಯೋಜನೆಯ ಕ್ಷೇತ್ರಕಾರ್ಯಗಳನ್ನು ಕೈಗೊಳ್ಳುವ ಮುನ್ನ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಕ್ಷಮ ಪ್ರಾಧಿಕಾರದವರಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದರೆ ಸದರಿ ಯೋಜನೆಯ ಕ್ರಿಯಾಯೋಜನೆ ಅನುಮೋದನೆ ಪಡೆಯದೇ ಕೈಗೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br>2) ಸದರಿ ಕ್ಷೇತ್ರಕಾರ್ಯಕ್ಕೆ ಪ್ರವಾಸ ಕೈಗೊಂಡ ನಂತರ ಪ್ರವಾಸ ದಿನಚರಿ (Tour dairy) ಪ್ರವಾಸ ಕಾರ್ಯಕ್ರಮ Tour Program ಸಕ್ಷಮ ಪ್ರಾಧಿಕಾರದವರಿಂದ ಅನುಮೋದನೆ ಪಡೆಯದೇ ನೇರವಾಗಿ ಪ್ರವಾಸ ಭತ್ಯೆ ಬಿಲ್‌ನ್ನು ಕ್ಲೇಮ್ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ.<br>3) ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಅಧಿಸೂಚನೆಯ ಪತ್ರ ಸಂಖ್ಯೆ:ಕವಿಹಂ:ಕುಸ:ವಾಹನದರ:2012-13 ದಿನಾಂಕ:06-06-2012ರನ್ವಯ ಯೋಜನೆಗಳ ಕ್ಷೇತ್ರ ಕಾರ್ಯಕ್ಕಾಗಿ/ವಿಶ್ವವಿದ್ಯಾಲಯದ ಕೆಲಸ ಕಾರ್ಯಗಳಿಗಾಗಿ ತೆರಳುವ ಅಧ್ಯಾಪಕರು/ಅಧಿಕಾರಿಗಳಿಗೆ ವೈಯಕ್ತಿಕ ವಾಹನ ಆಗಿದ್ದಲ್ಲಿ ಪ್ರತಿ ಕಿ.ಮಿ.ಗೆ ರೂ.06/-ರಂತೆ ಹಾಗೂ ಖಾಸಗಿ ಬಾಡಿಗೆ ವಾಹನ ಆಗಿದ್ದಲ್ಲಿ ಪ್ರತಿ ಕಿ.ಮೀ.ಗೆ ರೂ.7/-ರಂತೆ ದರಗಳನ್ನು ದಿನಾಂಕ:01-06-2012 ರಿಂದ ಅನ್ವಯವಾಗುವಂತೆ ದಿನಾಂಕ: 23-04-2012 ರಂದು ಜರುಗಿದ 143ನೇ ಕಾರ್ಯಕಾರಿ ಸಮಿತಿಯಲ್ಲಿ ದರ ಪರಿಷ್ಕರಿಸಿ ಮಂಜೂರು ಮಾಡಲಾಗಿರುತ್ತದೆ.<br>ಆದರೆ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮಗಳ ನಿಯಮ 20 ರನ್ವಯ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನಿಗದಿಯಾಗಿರುವ ವೇತನ ಶ್ರೇಣಿಯನ್ನು ವಿಶ್ವವಿದ್ಯಾಲಯ ಅನುದಾನ ಆಯೋಗವು ನಿಗದಿಪಡಿಸಿರುವಂತೆ ಮತ್ತು ಕರ್ನಾಟಕ ರಾಜ್ಯ ಸರ್ಕಾರವು ಅಂಗೀಕರಿಸುವಂತೆ ಕಾರ್ಯಕಾರಿ ಸಮಿತಿಯು ಪರಿಷ್ಕರಿಸಬಹುದು. ಅದರಂತೆ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ ಮತ್ತಿತರ ಭತ್ಯೆಗಳು ಕಾಲದಿಂದ ಕಾಲಕ್ಕೆ ರಾಜ್ಯ ಸರ್ಕಾರವು ನಿಗದಿಪಡಿಸಿರುವಂತೆ ಇರುತ್ತವೆ ಎಂದು ನಿರ್ದೇಶಿಸಲಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ 449 ರಿಂದ 577 ರಲ್ಲಿ ಪ್ರಯಾಣ ಭತ್ಯೆ ಪಾವತಿ ಮಾಡಬೇಕಾದಲ್ಲಿ ಸರ್ಕಾರಿ ನೌಕರರನ್ನು ವರ್ಗಾವಣೆಯಾದಾಗ ಹೊರತುಪಡಿಸಿ, ಸ್ವಂತ ಕಾರಿನಲ್ಲಿ ಇತರೆ ಸಂದರ್ಭಗಳಲ್ಲಿ ಪ್ರಯಾಣ ಮಾಡಿದಾಗ ಪ್ರಯಾಣ ಭತ್ಯೆ ಪಾವತಿಸಲು ಅವಕಾಶವಿರುವುದಿಲ್ಲ.<br>ಸದರಿ ಪ್ರಕರಣದಲ್ಲಿ ಪ್ರತಿ ಕಿ.ಮೀಗೆ ರೂ.6/- ರಂತೆ ಪ್ರವಾಸ ಭತ್ಯೆ ಬಿಲ್‌ನ್ನು ಸಿದ್ದಪಡಿಸಿ ಕ್ಲೇಮ್ ಮಾಡಿದ್ದು ಮೇಲೆ ವಿವರಿಸಿದ ವಿಶ್ವವಿದ್ಯಾಲಯದ ನಿಯಮಗಳ ಹಾಗೂ ಕೆ.ಸಿ.ಎಸ್.ಆರ್. ನಿಯಮಗಳು ಉಲ್ಲಂಘನೆ ಮಾಡಲಾಗಿದೆ. | | |

| | | | |
|---|---|---|---|
| | ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 74 ದಿನಾಂಕ: 15-12-2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಸದರಿ ಯೋಜನೆಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರಯಾಣಿಸಿದ ಬಾಬ್ತು ಕಿ.ಮೀ.ಗೆ ರೂ.6/-ಗಳ ಕಾರು ಬಾಡಿಗೆಯನ್ನು ಪಡೆಯಲಾಗಿದೆ. ಇದಕ್ಕೆ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯ ಅನುಮೋದನೆ ಹಾಗೂ ಮಾನ್ಯ ಕುಲಸಚಿವರು ಹೊರಡಿಸಿರುವ ಅಧಿಸೂಚನೆಯಿಂದ ಪ್ರಯಾಣ ಭತ್ಯೆಯನ್ನು ಪಡೆಯಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ವಿಶ್ವವಿದ್ಯಾಲಯದ ನಿಯಮಗಳು ಹಾಗೂ ಕೆ.ಸಿ.ಎಸ್.ಆರ್. ನಿಯಮಗಳು ಉಲ್ಲಂಘನೆ ಮಾಡಿರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. ಪ್ರಯುಕ್ತ ಪಾವತಿಯಾದ ಒಟ್ಟು ಮೊತ್ತ **ರೂ.75,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **48** | **ಸರ್ಕಾರದ ಅನುಮೋದನೆ ಪಡೆಯದೇ ಹುದ್ದೆಗಳನ್ನು ಮೇಲ್ದರ್ಜೆಗೇರಿಸಿರುವ ಕುರಿತು.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಸರ್ಕಾರದಿಂದ ಮಂಜೂರಾದ, ಭರ್ತಿಯಾದ ಮತ್ತು ರಿಕ್ತವಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಿದ್ದು, ಸದರಿ ತಃಖ್ತೆಯನ್ನು ಪರಿಶೀಲಿಸಿದಾಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಹುದ್ದೆಗಳನ್ನು ಮೇಲ್ದರ್ಜೆಗೇರಿಸಲಾದ ಬಗ್ಗೆ ತಿಳಿದು ಬಂದಿರುತ್ತದೆ. ಸದರಿ ಮೇಲ್ದರ್ಜೆಗೇರಿಸಲಾದ ಹುದ್ದೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ವಿಚಾರಣೆ ಪತ್ರ ಸಂಖ್ಯೆ:75 ದಿನಾಂಕ 15-12-2021 ರಂದು ನೀಡಲಾಗಿತ್ತು.<br>ಸದರಿ ವಿಚಾರಣೆ ಪತ್ರಕ್ಕೆ ಸಂಬಂಧಿಸಿದಂತೆ ಉಪಕುಲಸಚಿವರು (ಆಡಳಿತ) ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ದಿನಾಂಕ:16-12-2021 ರಂದು ಒಟ್ಟು 54 ಬೋಧಕೇತರ ಹುದ್ದೆಗಳನ್ನು ಮೇಲ್ದರ್ಜೆಗೇರಿಸಿರುವ ವಿವರದ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುತ್ತಾರೆ.<br>ಸದರಿ ಮೇಲ್ದರ್ಜೆಗೇರಿಸಿದ ಬೋಧಕೇತರ ಹುದ್ದೆಗಳ ವಿವರದ ತಃಖ್ತೆಯನ್ನು ಓದಲಾಗಿ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತವೆ.<br>1) ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪರಿನಿಯಮಗಳ ಅಡಿಯಲ್ಲಿ ಮೇಲ್ದರ್ಜೆಗೇರಿಸಿರುವ ಬಗ್ಗೆ ಯಾವುದೇ ಅವಕಾಶವಿರುವುದಿಲ್ಲ.<br>2) ಸದರಿ 54 ಹುದ್ದೆಗಳನ್ನು ಸರ್ಕಾರದ ಅನುಮತಿ/ಆದೇಶ/ಅನುಮೋದನೆ ಪಡೆಯದೇ ಮೇಲ್ದರ್ಜೆಗೇರಿಸಿದ್ದು ಆಕ್ಷೇಪಿಸಿದೆ.<br>3) ಸದರಿ ಹುದ್ದೆಗಳನ್ನು ಮೇಲ್ದರ್ಜೆಗೇರಿಸಿರುವ ಬಗ್ಗೆ ಪರಿನಿಯಮಗಳಲ್ಲಿ ಯಾವುದೇ ತಿದ್ದುಪಡಿ (Amendment) ಆದೇಶಗಳನ್ನು ಸರ್ಕಾರದಿಂದ ಪಡೆದಿರುವುದಿಲ್ಲ. | ಮೇಲ್ದರ್ಜೆಗೇರಿಸಿ ಮುಂಬಡ್ತಿ ನೀಡಲಾದ ಹುದ್ದೆಗಳ ಅನುಶಾಸನ ರಚಿಸಿ ಸರ್ಕಾರದ ಅನುಮೋದನೆಗಾಗಿ ದಿನಾಂಕ 26.04.2022ರಂದು ಪತ್ರದ ಮೂಲಕ ಕಳುಹಿಸಲಾಗಿದೆ. | |

| | | | |
|---|---|---|---|
| | ಪ್ರಯುಕ್ತ ನಿಯಮಬಾಹಿರವಾಗಿ ಮೇಲ್ದರ್ಜೆಗೇರಿಸಿದ 54 ಹುದ್ದೆಗಳನ್ನು ಹಿಂಪಡೆಯಬಹುದಾಗಿದ್ದು ಅಥವಾ ಮೇಲ್ದರ್ಜೆಗೇರಿಸಿದ ಬಗ್ಗೆ ಮೇಲಿನ ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ ಸೂಕ್ತ ಆದೇಶಗಳನ್ನು ಸ್ಪಷ್ಟೀಕರಣದೊಂದಿಗೆ ನೀಡಲು ಸೂಚಿಸಿದೆ.<br>ಮುಂದುವರೆದಂತೆ ಮೇಲ್ದರ್ಜೆಗೇರಿಸಲಾದ 54 ಹುದ್ದೆಗಳಲ್ಲಿ ಒಂದು ಹುದ್ದೆಯ ವೇತನ ವ್ಯತ್ಯಾಸದ ಮೊತ್ತವನ್ನು ಲೆಕ್ಕಹಾಕಿದ್ದು, (ರೂ.1,09,533/–) ಇದರಂತೆ ಉಳಿದ 53 ಹುದ್ದೆಗಳಿಗೆ ಸಂಬಂಧಿಸಿದಂತೆ ವೇತನ ವ್ಯತ್ಯಾಸದ ಮೊತ್ತವನ್ನು ಲೆಕ್ಕಹಾಕಿ ಸಂಬಂಧಪಟ್ಟ ಸಿಬ್ಬಂದಿಯವರಿಂದ ವಸೂಲಿಸಲು ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 78 ದಿನಾಂಕ: 24–12–2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಮೇಲ್ದರ್ಜೆಗೇರಿಸಿ ಮುಂಬಡ್ತಿ ನೀಡಲಾದ ಹುದ್ದೆಗಳ ಅನುಶಾಸನಗಳಿಗೆ ಅನುಮೋದನೆ ಕೋರಿ ಈ ಹಿಂದೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು ಹಾಗೂ ಮತ್ತೊಮ್ಮೆ ಅನುಮೋದನೆ ಕೋರಿ ದಿನಾಂಕ: 26–04–2022 ರಂದು ಸರಕಾರಕ್ಕೆ ಪತ್ರ ಬರೆಯಲಾಗಿದೆ ಎಂಬ ಉತ್ತರವು ಸಮಂಜಸವಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. **(ವಿವರ ಅನುಬಂಧ–25 ರಲ್ಲಿ ನೀಡಲಾಗಿದೆ)** ಅಲ್ಲಿಯವರೆಗೆ **ರೂ.1,09,533/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | | |
| 49 | **ಚಾಲ್ತಿ ಖಾತೆಯನ್ನು ಉಳಿತಾಯ ಖಾತೆಯನ್ನಾಗಿ ಬದಲಾಯಿಸುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯ ವಿಸ್ತರಣಾ ಕೇಂದ್ರ ಬೆಳಗಾವಿ ವಿಭಾಗದವರು ಬ್ಯಾಂಕ್ ಆಫ್ ಇಂಡಿಯಾ ಬೆಳಗಾವಿ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ ಸಂಖ್ಯೆ:110020110000476 ಯನ್ನು ನಿರ್ವಹಣೆ ಮಾಡುತ್ತಿದ್ದಾರೆ. ಸದರಿ ಚಾಲ್ತಿ ಖಾತೆಯನ್ನು ನಿರ್ವಹಿಸಿರುವುದರಿಂದ ವಿಶ್ವವಿದ್ಯಾಲಯಕ್ಕೆ/ವಿಭಾಗಕ್ಕೆ ಬರಬೇಕಾದ ಬಡ್ಡಿಯನ್ನು ತಪ್ಪಿಸಿದಂತಾಗುತ್ತದೆ, ಅಲ್ಲದೆ ಚಾಲ್ತಿ ಖಾತೆಗೆ ಬ್ಯಾಂಕ್ ಚಾರ್ಜಸ್ ವಿಧಿಸುವುದರಿಂದ ವಿಶ್ವವಿದ್ಯಾಲಯಕ್ಕೆ/ವಿಭಾಗಕ್ಕೆ ನಷ್ಟ ಉಂಟು ಮಾಡಿದಂತಾಗುತ್ತದೆ.<br>ಪ್ರಯುಕ್ತ ಸದರಿ ಚಾಲ್ತಿ ಖಾತೆಯನ್ನು ಬದಲಾಯಿಸಿ/ಪರಿವರ್ತಿಸಿ ಉಳಿತಾಯ ಖಾತೆಯನ್ನಾಗಿ ಮಾಡಲು ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ **ಪತ್ರ ಸಂಖ್ಯೆ:19 ದಿನಾಂಕ:27–10–2021** ನೀಡಲಾಗಿದೆ. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಬ್ಯಾಂಕಿಗೆ ಪತ್ರ ನೀಡಿ ಚಾಲ್ತಿ ಖಾತೆಯನ್ನು ರದ್ದುಪಡಿಸಿ ಹೊಸ ಉಳಿತಾಯ ಖಾತೆಯನ್ನು ಮಾಡಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಬ್ಯಾಂಕ್‌ಗೆ ಬರೆದಿರುವ ಪತ್ರದ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. | ಡಾ. ಆ.ನೇ. ಉಪಾಧ್ಯೆ ವಿಸ್ತರಣಾ ಕೇಂದ್ರ, ಬೆಳಗಾವಿ ಕೇಂದ್ರ ಚಾಲ್ತಿ ಖಾತೆ ನಂ: 11002011000047ನ್ನು ಬದಲಾಯಿಸಿ/ಪರಿವರ್ತಿಸಿ ಉಳಿತಾಯ ಖಾತೆ ಮಾಡಲು ಲೆಕ್ಕಪರಿಶೋಧಕರು ಸೂಚಿಸಿದಂತೆ ಉಳಿತಾಯ ಖಾತೆ ತೆರೆಯಲು ಕ್ರಮಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ. | |
| 50 | **ಕನ್ನಡ ವಿಶ್ವವಿದ್ಯಾಲಯ ಹಂಪಿಯ 3 ಜನ ಹಿರಿಯ ಸಹಾಯಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯದ ಹಂಪಿಯ 2019–20ನೇ ಸಾಲಿನ 3 (ಮೂರು) ಜನ ಹಿರಿಯ ಸಹಾಯಕರುಗಳ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿದ್ದು, ಅಧಿಸೂಚನೆ ಪತ್ರ | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | ಸಂಖ್ಯೆ:ಕವಿಹಂ:ಕುಸ:02:ಕಾಲವೇ:2017–18/394 ದಿನಾಂಕ:05–03–2018 ರನ್ವಯ ಸದರಿ ಸಿಬ್ಬಂದಿಗಳಿಗೆ ಸೇವಾ ಅವಧಿಯಲ್ಲಿ ಇಪ್ಪತ್ತು ವರ್ಷಗಳ ಸೇವೆ ಸಲ್ಲಿಸಿ ಮುಂಬಡ್ತಿ ಪಡೆಯದೇ ಇರುವುದರಿಂದ ಇಪ್ಪತ್ತು ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ನೀಡಲಾಗಿದೆ. ಇವರ ವೇತನ ಶ್ರೇಣಿ 14550–350–15600–400–17200–450–19000–500–21000–600–24600–700 –26700 ರಲ್ಲಿ ಅರ್ಹ ಮೂಲ ವೇತನ ರೂ.20,000/–ಗಳನ್ನು ನಿಗದಿಪಡಿಸಲಾಗಿದೆ.<br>ಮುಂದುವರೆದು ಅಧಿಸೂಚನೆ ಪತ್ರ ಸಂಖ್ಯೆ:ಕವಿಹಂ/ಕುಸ/02/ಹುಮೆ/2017–18/419 ದಿನಾಂಕ:20–03–2018 ರನ್ವಯ ಸದರಿ ಸಿಬ್ಬಂದಿಗಳಿಗೆ ಕಿರಿಯ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ ಮೇಲ್ದರ್ಜೆಗೇರಿಸಿ ಮುಂಬಡ್ತಿ ನೀಡಲಾಗಿದೆ. ಇವರು ಹಿರಿಯ ಸಹಾಯಕ ಹುದ್ದೆಯ ವೇತನ ಶ್ರೇಣಿ 20000–500–21000–600–24600–700–28800–800–33600–900–36300 ರಲ್ಲಿ ಅರ್ಹ ಮೂಲ ವೇತನ ರೂ.20,500/–ಗಳನ್ನು ನಿಗದಿಪಡಿಸಲಾಗಿದೆ.<br>ಅಧಿಸೂಚನೆ ಪತ್ರ ಸಂಖ್ಯೆ:ಕವಿಹಂ:ಕುಸ:02:ಹಕಾವಿ:04:6ನೇವೇನಿ:2018–19 ದಿನಾಂಕ: 15–09–2018 ರನ್ವಯ ಸದರಿ ಸಿಬ್ಬಂದಿಗಳಿಗೆ 6ನೇ ವೇತನ ನಿಗದಿ ಮಾಡಲಾಗಿದೆ ಇವರು ಹಿರಿಯ ಸಹಾಯಕ ಹುದ್ದೆಯ ವೇತನ ಶ್ರೇಣಿ 37,900–950–39800–1100–46400–1250–53900–1450–62600–1650–70850 ರಲ್ಲಿ ಅರ್ಹ ಮೂಲ ವೇತನ ರೂ.37,900/–ಗಳು ನಿಗದಿಪಡಿಸಬೇಕಿತ್ತು.<br>ಆದರೆ ಸದರಿಯವರ ಸೇವಾ ಪುಸ್ತಕಗಳು ಪರಿಶೀಲಿಸಲಾಗಿ ಅದರಲ್ಲಿ ಅವರ ವೇತನ ಶ್ರೇಣಿಯಲ್ಲಿ ಮೂಲ ವೇತನ ರೂ.20,500/–ಕ್ಕೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮೂಲ ವೇತನ ಸಂವಾದಿಯಾಗಿ ರೂ.37,900/–ಗಳು ನಿಗದಿಪಡಿಸಬೇಕು. ಆದರೆ ಸೇವಾ ಪುಸ್ತಕಗಳು ಪರಿಶೀಲಿಸಿದಾಗ ಮೂಲ ವೇತನ ರೂ.38,850/–ಗಳು ನಿಗದಿಪಡಿಸಲಾಗಿದೆ. ಹೀಗಾಗಿ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ನೀಡಿ ನಿಗದಿಪಡಿಸಿದ್ದು, ಹೆಚ್ಚುವರಿ ವೇತನ ಪಾವತಿಸಿದ್ದು ಕಂಡುಬಂದಿರುತ್ತದೆ. ಹೆಚ್ಚುವರಿಯಾಗಿ ಪಾವತಿಸಿದ ಮೂಲ ವೇತನ, ಭತ್ಯೆಗಳು ಹಾಗೂ ಇನ್ನೂಳಿದ ಸೌಲಭ್ಯಗಳನ್ನು ಲೆಕ್ಕಹಾಕಿ **ಅನುಬಂಧ–26ರಲ್ಲಿ** ತಿಳಿಯಪಡಿಸಿದಂತೆ ಸದರಿ ಸಿಬ್ಬಂದಿಗಳಿಂದ ವಸೂಲಿಸಲು ಸೂಚಿಸಿದೆ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 71 ದಿನಾಂಕ: 13–12–2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಸದರಿ ಸಿಬ್ಬಂದಿಗಳಿಗೆ ಪಾವತಿಯಾದ ಒಂದು ಹೆಚ್ಚುವರಿ ವೇತನ ಬಡ್ತಿಯ ವ್ಯತ್ಯಾಸದ ಒಟ್ಟು ಮೊತ್ತ **ರೂ.80,270/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.** | | |

<table>
<tr>
<td>51</td>
<td>UGC 7ನೇ ವೇತನ ಆಯೋಗದ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವಲ್ಲಿ ಕಂಡುಬಂದ ನ್ಯೂನತೆಗಳು.<br>ಉಲ್ಲೇಖ:– 1. Direector no.1–7/2015–U II CD Dated 2 nov.2017<br>2. ಸರ್ಕಾರದ ಅಧೀನ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ:ED483UNE2017 / Dated 16-03-2019<br><br>ಉಲ್ಲೇಖಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಬೋಧಕ ಸಿಬ್ಬಂದಿಗಳ ವೇತನ ಪರಿಷ್ಕರಣೆಯಲ್ಲಿ UGCಯ 7ನೇ ವೇತನ ಆಯೋಗದ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವಲ್ಲಿ ನ್ಯೂನತೆಗಳು ಕಂಡುಬಂದಿದ್ದು, ವಿವರ ಈ ಕೆಳಗಿನಂತಿರುತ್ತದೆ.<br><br>01) ಉಲ್ಲೇಖ ಒಂದರನ್ವಯ ಕೇಂದ್ರ ಸರ್ಕಾರವು UGC ಕೇಂದ್ರ ಸರ್ಕಾರದ ಬೋಧಕ ಸಿಬ್ಬಂದಿಗಳ ವೇತನವನ್ನು ಪರಿಷ್ಕರಿಸಿ 7ನೇ ವೇತನ ಆಯೋಗವನ್ನು ಅನುಷ್ಠಾನಗೊಳಿಸಲು ಆದೇಶಿಸಿರುತ್ತಾರೆ. ಅದರಂತೆ ಉಲ್ಲೇಖ ಎರಡರನ್ವಯ ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ: ED483UNE2017 Dated 16-03-2019 ರಂದು ವೇತನ ಪರಿಷ್ಕರಣೆಯ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಿರುತ್ತಾರೆ. ಸದರಿ ಎರಡು ಸರಕಾರದ ಆದೇಶ ಮತ್ತು ಮಾರ್ಗಸೂಚಿಗಳನ್ವಯ ರಾಜ್ಯದ ಎಲ್ಲಾ ಬೋಧಕ ಸಿಬ್ಬಂದಿಗಳಿಗೆ ಅನ್ವಯವಾಗುವಂತೆ ದಿನಾಂಕ:01–01–2016 ರಿಂದ ಕಾಲ್ಪನಿಕವಾಗಿ ವೇತನ ನಿಗದಿ ಮಾಡಬೇಕಾಗಿರುತ್ತದೆ ಮತ್ತು ದಿನಾಂಕ:16–03–2019ಕ್ಕೆ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯವನ್ನು ನೀಡಲು ಸರಕಾರದ ಆದೇಶವಿರುತ್ತದೆ. ಆದರೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಸೆಕ್ಷನ್ 40(1) ರ ಪ್ರಕಾರ ಸರಕಾರದಿಂದ ಹೊರಡಿಸಲಾಗುವ ವೇತನ ಶ್ರೇಣಿ, ಸೇವಾ ಸವಲತ್ತುಗಳನ್ನು ಹಾಗೂ ಇನ್ನಿತರ ಆದೇಶಗಳನ್ನು ನೇರವಾಗಿ ಜಾರಿಗೊಳಿಸಲು ಅವಕಾಶಗಳಿಲ್ಲದ ಕಾರಣ, ಈ ಕುರಿತು ಅನುಶಾಸನ ರಚಿಸಿ ಮಾನ್ಯ ಕುಲಾಧಿಪತಿಗಳಿಂದ ಅದಕ್ಕೆ ಅನುಮೋದನೆ ಪಡೆದುಕೊಂಡು ನಂತರವಷ್ಟೇ ಜಾರಿಗೊಳಿಸಲು ವಿಧಿ ಬದ್ಧಗೊಳಿಸಲಾಗಿರುತ್ತದೆ.<br>ಆದರೆ ಸದರಿ ವಿಶ್ವವಿದ್ಯಾಲಯದಲ್ಲಿ ಕೇಂದ್ರ ಸರ್ಕಾರದ 7ನೇ ಆಯೋಗದ ಪರಿಷ್ಕೃತ ವೇತನ ಶ್ರೇಣಿ ಸೇವಾ ಸವಲತ್ತುಗಳ ಆದೇಶ ಮತ್ತು ಕರ್ನಾಟಕ ಸರ್ಕಾರದ 7ನೇ ವೇತನ ಆಯೋಗದ ನಿಗದಿಯ ನಡಾವಳಿಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಅಧಿನಿಯಮದ ಪ್ರಕಾರ ಅನುಶಾಸನ ರಚಿಸಿ ಮಾನ್ಯ ಕುಲಾಧಿಪತಿಯವರಿಂದ ಅನುಮೋದನೆ ಪಡೆಯದೇ</td>
<td>UGC 7ನೇ ವೇತನ ಆಯೋಗದ ಮಾರ್ಗಸೂಚಿಗಳನುಸಾರ ವೇತನ ನಿಗದಿಗೊಳಿಸಲಾಗಿದೆ. ಯಾವುದೇ ಲೋಪವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.</td>
<td></td>
</tr>
</table>

| | | | | |
|---|---|---|---|---|
| | ನೇರವಾಗಿ ಪರಿಷ್ಕೃತ ವೇತನ ನಿಗದಿಪಡಿಸಿರುವುದು ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿರುತ್ತದೆ ಮತ್ತು ಇದಕ್ಕೆ ಸೂಕ್ತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಿದೆ.<br>02) ಕೇಂದ್ರ ಮತ್ತು ರಾಜ್ಯ ಸರಕಾರದ ಆದೇಶ ಮತ್ತು ಮಾರ್ಗಸೂಚಿಗಳನ್ವಯ 7ನೇ ವೇತನ ಪರೀಷ್ಕರಣೆಯ ನಿಗದಿಯು ಕಾಲ್ಪನಿಕವಾಗಿ ದಿನಾಂಕ 01–01–2016 ರಿಂದ ಪರಿಗಣಿಸಿ, ಆರ್ಥಿಕ ಸೌಲಭ್ಯಗಳನ್ನು ದಿನಾಂಕ:16–03–2019ರಿಂದ ಅನ್ವಯವಾಗುವಂತೆ ನಿಗದಿಪಡಿಸಲು ತಿಳಿಸಲಾಗಿದೆ ಮತ್ತು ಉಲ್ಲೇಖಿತ ಕೇಂದ್ರ/ರಾಜ್ಯ ಸರ್ಕಾರದ ಆದೇಶಗಳಲ್ಲಿ ತಿಳಿಸಿರುವಂತೆ ವಯೋನಿವೃತ್ತಿ ಹೊಂದುವ ಬೋಧಕ ಸಿಬ್ಬಂದಿಗಳಿಗೆ (01–01–2016 ನಂತರ ಮತ್ತು 15–03–2019 ರ ಒಳಗೆ) ವೇತನ ಪರಿಷ್ಕರಣೆ ಮಾಡಿ ವೇತನ ಸೌಲಭ್ಯ ನೀಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಆದ್ದರಿಂದ ದಿನಾಂಕ: 01–01–2016ರ ನಂತರ ವಯೋನಿವೃತ್ತಿ ಹೊಂದಿದ ಬೋಧಕ ಸಿಬ್ಬಂದಿಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಿದೆ.<br>03) ಶ್ರೀಮತಿ ಸಿದ್ದಗಂಗಮ್ಮ ಪ್ರಾಧ್ಯಾಪಕರು ಇವರ ವೇತನವು ದಿನಾಂಕ 01–01–2016ಕ್ಕೆ ಅನ್ವಯಿಸುವಂತೆ 43220+9000 (AGP) (Asso.Proff) ಗಳು ಒಟ್ಟು ವೇತನ (B.P) ರೂ.52,220/–ಗಳಾಗಿರುತ್ತದೆ ಆದರೆ ಸದರಿಯವರ ವೇತನ ನಿಗಧೀಕರಣದ ಸಮಯದಲ್ಲಿ ಅಂದರೆ ದಿನಾಂಕ:01–01–2016ಕ್ಕೆ ಅನ್ವಯಿಸುವಂತೆ ತಪ್ಪಾಗಿ ವೇತನವು ರೂ.44,785/– +10000 ಒಟ್ಟು ಮೂಲ ವೇತನ ರೂ.54,785/–ಗಳೆಂದು ಪರಿಗಣಿಸಿ ವೇತನ ನಿಗಧೀಮಾಡಿರುವುದು ಕಂಡುಬಂದಿರುತ್ತದೆ. ಅಂದರೆ ಮೂಲ ವೇತನದಲ್ಲಿ ರೂ.2565 ರೂ.ಗಳು ಹೆಚ್ಚಾಗಿ ಪರಿಗಣಿಸಿರುವುದು ಗಮನಿಸಲಾಗಿದೆ. ಇದಕ್ಕೆ ಸ್ಪಷ್ಟೀಕರಣ ನೀಡಲು ತಿಳಿಸಿದೆ.<br>04) Dr. S.C.Patil ಪ್ರಾಧ್ಯಾಪಕರು ಇವರ ವೇತನವು ದಿನಾಂಕ 01–01–2016ಕ್ಕೆ ತಡೆಹಿಡಿಯಲಾಗಿದೆ. ಕಾರಣ ಸದರಿಯವರ ಪರಿಷ್ಕೃತ ವೇತನ ನಿಗಧೀಕರಣದಲ್ಲಿ ದಿನಾಂಕ 01–01–2016ಕ್ಕೆ ಅನ್ವಯಿಸುವ ಮೂಲ ವೇತನ ಪರಿಗಣಿಸದೇ ಯಾವ ಆಧಾರದ ಮೇಲೆ ಸದರಿಯವರ ವೇತನ ಪರಿಷ್ಕರಣೆ ಮಾಡಲಾಗಿದೆ ಎಂಬುದಕ್ಕೆ ಸೂಕ್ತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.<br>05) Dr.Venkatagiri Dalavayi ಮತ್ತು Dr.Amaresh Yathnal ರವರ ದಿನಾಂಕ: 01–01–2016ರಂದು ಅನ್ವಯವಾಗುವಂತೆ ವೇತನ ಪಾವತಿಯ ಬಿಲ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಿದೆ. ಸದರಿಯವರಿಂದ 7ನೇ ವೇತನ ಪರಿಷ್ಕರಣೆ ಮಾಡಿರುವುದು ಕಂಡುಬಂದಿರುವುದರಿಂದ ಸದರಿಯವರ ದಾಖಲೆಗಳನ್ನು ಒದಗಿಸಲು ತಿಳಿಸಿದೆ. | | |

| | | | |
|---|---|---|---|
| | 06) ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಡಾ॥ ಸುಚೇತ ನವರತ್ನ, ಡಾ॥ ಶ್ರೀನಿವಾಸ, ತಾರಿಹಳ್ಳಿ ಹನುಮಂತಪ್ಪಾ, Dr.S.Y.ಸೋಮಶೇಖರ ಮತ್ತು ಡಾ॥ ಮಲ್ಲಿಕಾರ್ಜುನಗೌಡ ಈ ಐದು ಸಹಾಯಕ ಪ್ರಾಧ್ಯಾಪಕರ ವೇತನವು ದಿನಾಂಕ:01–01–2016ಕ್ಕೆ ರೂ.25015+7000 (AGP) ಆಗಿರುತ್ತದೆ. ಆದರೆ ಸದರಿಯವರಿಗೆ ಪರಿಷ್ಕೃತ ವೇತನ ನಿಗದಿಯಲ್ಲಿ ರೂ.26,009+8,000 (AGP)ಯನ್ನು ಪರಿಗಣಿಸಿ ವೇತನ ನಿಗದಿಪಡಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಇದಕ್ಕೆ ಸ್ಪಷ್ಟೀಕರಣ ನೀಡಲು ತಿಳಿಸಿದೆ.<br>07) ಕನ್ನಡ ವಿಶ್ವವಿದ್ಯಾಲಯದಲ್ಲಿ ಒಟ್ಟಾರೆಯಾಗಿ 7ನೇ ವೇತನ ಪರಿಷ್ಕರಣೆಯಲ್ಲಿ ಸುಮಾರು ನ್ಯೂನ್ಯತೆಗಳು ಕಂಡುಬಂದಿದ್ದು, ಸುಮಾರು 38 ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು–8, ಸಹಾಯಕ ಪ್ರಾಧ್ಯಾಪಕರು–6 ಡೆಪ್ಯೂಟಿ ಲೈಬ್ರರಿಯನ್–1 ಮತ್ತು ಸಹಾಯಕ ಗ್ರಂಥಪಾಲಕರು–2 ಇವರ ವೇತನ ನಿಗದಿಯಲ್ಲಿ ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸದೆ ಅನಿಯಮಿತವಾದ ಹೆಚ್ಚಿನ ವೇತನ ಶ್ರೇಣಿಯನ್ನು ನಿಗದಿಪಡಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಸದರಿ ಎಲ್ಲಾ ಬೋಧಕ ಮತ್ತು ಗ್ರಂಥಾಲಯ ಸಿಬ್ಬಂದಿಗಳ ವೇತನ ನಿಗದಿಯಲ್ಲಿ ಅನಿಯಮಿತವಾಗಿ ಆರ್ಥಿಕ ಸೌಲಭ್ಯವನ್ನು ನೀಡಿರುವ ವಿವರವನ್ನು **ಅನುಬಂಧ–27ರಲ್ಲಿ** ವಿವರಿಸಲಾಗಿದೆ. ಎಲ್ಲಾ ಪ್ರಾಧ್ಯಾಪಕರು ಮತ್ತು ಉಳಿದ ಎಲ್ಲಾ ಸಿಬ್ಬಂದಿಗಳ ವೇತನ ನಿಗದಿಯಲ್ಲಿ ಯಾವುದೇ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸದೇ ಇರುವುದು ನಿಯಮಬಾಹಿರವಾಗಿರುತ್ತದೆ.<br>Ministery of Human Resource Development Order No-1-7/201511 (1) Dated:2 November-2017 para 2(1)(G) Pay Fixation for fixation of pay of an Employee in the pay Matrix as on 1-1-2016 the Existing pay ( pay in pay Band plus Academic Grade pay) in the prerevised structure as on 31-12-2015 Shall be Multiplied by a factor of 2.57 The figure so arrived at it to be located in the Academic level Awarding to Employes pay Band and Academic Grade pay in the New pay Matrix.ಎಂದು ಉಲ್ಲೇಖಿಸಲಾಗಿದೆ.<br>ಆದರೆ ಸದರಿ ವಿಶ್ವವಿದ್ಯಾಲಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆದೇಶ ಮಾರ್ಗಸೂಚಿಗಳನ್ನು ಪಾಲಿಸದೇ ಯಾವ ಆಧಾರದ ಮೇಲೆ ಬೋಧಕ ಸಿಬ್ಬಂದಿಗಳ ವೇತನವನ್ನು ಪರಿಷ್ಕರಣೆ ಮಾಡಲಾಗಿದೆ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡಲು ತಿಳಿಸಲಾಗಿದೆ.<br>ಸರಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವೇತನ ಪರಿಷ್ಕರಣೆ ಮಾಡಿರುವುದರಿಂದ ಸರಕಾರಕ್ಕೆ ನಷ್ಟ ಉಂಟುಮಾಡಿ ಸರಕಾರದ ಹಣದ ದುರುಪಯೋಗ ಮಾಡಿದಂತಾಗುತ್ತದೆ. ಆದ್ದರಿಂದ | | |

<table>
<tr>
<td></td>
<td>ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳಿಗೆ ಸೂಕ್ತವಾದ ದಾಖಲೆಗಳೊಂದಿಗೆ ಸ್ಪಷ್ಟೀಕರಣ ನೀಡಲು ತಿಳಿಸಿದೆ. ಅಲ್ಲಿಯವರೆಗೆ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಯಾವುದೇ ಸರಕಾರದ ಆದೇಶಗಳನ್ನು ಪಾಲಿಸದೇ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಅನಿಯಮಿತವಾಗಿ ವೇತನ ನಿಗದಿ ಮಾಡಿರುವುದಕ್ಕೆ ವ್ಯತ್ಯಾಸದ ವೇತನ ಅಂದರೆ ಹೆಚ್ಚುವರಿಯಾಗಿ ಪಾವತಿ ಮಾಡಲಾದ ಮೊತ್ತವನ್ನು ಸಂಬಂಧಿಸಿದ ಉಪನ್ಯಾಸಕರಿಂದ ವಸೂಲಿಸಿ ಸರಕಾರಕ್ಕೆ ಭರಿಸಲು ತಿಳಿಸಿದೆ ಅಲ್ಲಿಯವರೆಗೆ ನಿಯಮಬಾಹಿರವಾಗಿ ಹೆಚ್ಚುವರಿಯಾಗಿ ಪಾವತಿ ಮಾಡಿದ ವೇತನದ ಮೊತ್ತವನ್ನು ವಸೂಲಾತಿಯಲ್ಲಿಡಲಾಗಿದೆ. ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ.ಸಂ.</th><th>ಸಿಬ್ಬಂದಿ</th><th>ಸಂಖ್ಯೆ</th><th>ಮೊತ್ತ</th></tr>
<tr><td>1</td><td>ಉಪನ್ಯಾಸಕರು</td><td>38 ಜನ</td><td>1,74,89,741</td></tr>
<tr><td>2</td><td>ಸಹ ಪ್ರಾಧ್ಯಾಪಕರು</td><td>8 ಜನ</td><td>30,67,644</td></tr>
<tr><td>3</td><td>ಸಹಾಯಕ ಪ್ರಾಧ್ಯಾಪಕರು</td><td>6 ಜನ</td><td>14,91,873</td></tr>
<tr><td>4</td><td>ಉಪ ಗ್ರಂಥಪಾಲಕರು</td><td>1 ಜನ</td><td>4,54,765</td></tr>
<tr><td>5</td><td>ಸಹಾಯಕ ಗ್ರಂಥಪಾಲಕರು</td><td>2 ಜನ</td><td>3,38,511</td></tr>
<tr><td></td><td>ಒಟ್ಟು</td><td>55 ಜನ</td><td>2,28,42,554</td></tr>
</table>
(ವಿವರ ಅನುಬಂಧ-27 ರಲ್ಲಿ ಲಗತ್ತಿಸಿದೆ)<br>
ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:79 ದಿನಾಂಕ:24-12-2021 ರಂದು ನೀಡಲಾಗಿದೆ. ಸದರಿ ಕಂಡಿಕೆಗೆ ವಿಶ್ವವಿದ್ಯಾಲಯದವರು ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. ಹೆಚ್ಚುವರಿ ಪಾವತಿ ಮೊತ್ತ ರೂ.2,28,42,554/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.</td>
<td></td>
<td></td>
</tr>
<tr>
<td>52</td>
<td>ಶ್ರೀ ಎ. ಕಾಶಿವಿಶ್ವನಾಥ(ಸಹಾಯಕ ನಿರ್ದೇಶಕರು)ರವರ ಸೇವಾ ಪುಸ್ತಕದಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ಕುರಿತು.<br>
ಕನ್ನಡ ವಿಶ್ವವಿದ್ಯಾಲಯ, ಹಂಪಿಯ 2019-20ನೆ ಸಾಲಿನಲ್ಲಿ ಶ್ರೀ ಎ. ಕಾಶಿವಿಶ್ವನಾಥ (ಸಹಾಯಕ ನಿರ್ದೇಶಕರು)ರವರ ಸೇವಾ ಪುಸ್ತಕ ಪರಿಶೀಲಿಸಲಾಗಿದ್ದು, ಸದರಿಯವರ ಸೇವಾ ಪುಸ್ತಕದಲ್ಲಿ ಕಂಡುಬಂದಿವ ನ್ಯೂನ್ಯತೆಗಳ ಕುರಿತು.<br>
ಶ್ರೀ ಎ. ಕಾಶಿವಿಶ್ವನಾಥ ಇವರನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ ಕಛೇರಿ ಆದೇಶ ಸಂಖ್ಯೆ:ಕವಿಹಂ/ಕುಸ/02/01/02/01/93-94/4283 ದಿನಾಂಕ:14-09-1993ರ ಅನ್ವಯ "ಕಿರಿಯ ಸಹಾಯಕ"ರನ್ನಾಗಿ ನೇಮಿಸಲಾಗಿದೆ.</td>
<td>1. ಎ. ಕಾಶಿವಿಶ್ವನಾಥ ಇವರಿಗೆ ದಿ: 29.04.1997ರಲ್ಲಿ ಹಿರಿಯ ಸಹಾಯಕ ಹುದ್ದೆಗೆ ಮುಂಬಡ್ತಿ ನಿಡಲಾಗಿದೆ. ದಿನಾಂಕ :22.12.2023ರಲ್ಲಿ ಆದೇಶ ಸಂಖ್ಯೆ: ಕು.ಸ.ಪು.ಸಿ:2003-2004 ದಿನಾಂಕ: 22.12.2003ರ ದಿ: 22.12.2003ರ ಅನ್ವಯ ಹಿರಿಯ ಸಹಾಯಕ ಹುದ್ದಗೆ ಸ್ಥಗಿತ ಮಾಡಿ ಮುಂದುವರಿಸಲಾಗಿದೆ ಆದರೆ ಇವರ ಮೂಲ ವೇತನ ಶ್ರೇಣಿ ಮತ್ತು ಮೂಲ ವೇತನ ಮತ್ತು ಹುದ್ದೆಯನ್ನು ಮುಂದುವರಿಸಲಾಗಿದೆ.</td>
<td></td>
</tr>
</table>

| | | | |
|---|---|---|---|
| | ಸದರಿಯವರ ಸೇವಾ ಪುಸ್ತಕದಲ್ಲಿ ಕಂಡುಬಂದಿರುವ ನ್ಯೂನ್ಯತೆಗಳು ಈ ಕೆಳಗಿನಂತಿವೆ.<br>1) ಶ್ರೀ ಎ. ಕಾಶಿವಿಶ್ವನಾಥ ಇವರನ್ನು ವಿಶ್ವವಿದ್ಯಾಲಯ ಆದೇಶ ಸಂಖ್ಯೆ:ಕವಿಹಂ/ ಕುಸ/545/1995–98 ದಿನಾಂಕ:29–04–1997ರ ರನ್ವಯ "ಹಿರಿಯ ಸಹಾಯಕ" ರನ್ನಾಗಿ (ವೇತನ ಶ್ರೇಣಿ 1720–3170) ಪದೋನ್ನತಿ ನೀಡಲಾಗಿದೆ.<br>ಹೀಗೆ ನೇಮಕಾತಿ ಮಾಡುವಾಗ ಪರಿನಿಯಮಗಳಲ್ಲಿ ನಿಗದಿಗೊಳಿಸಿದ ಸೇವಾ ಅರ್ಹತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಇರುವುದನ್ನು ಗಮನಿಸಿದೆ. ಈ ಮುಂಬಡ್ತಿಗೆ ಆಕ್ಷೇಪಣೆಗಳನ್ನು ಶಿಕ್ಷಣ ಇಲಾಖೆಯು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಆದೇಶ ಸಂಖ್ಯೆ:ಕವಿಹಂ/ಕುಸ/ಮನೆ/2003–04ದಿನಾಂಕ:22–12–2003ರ ಆದೇಶನ್ವಯ ಹಿರಿಯ ಸಹಾಯಕರಾಗಿ ನೀಡಿದ ಮುಂಬಡ್ತಿ ಆದೇಶವನ್ನು ಹಿಂತೆಗೆದುಕೊಳ್ಳಲಾಗಿದೆ. ಅವರು ತಮ್ಮ ಮೂಲ ವೇತನ ಶ್ರೇಣಿ ಮತ್ತು ಹುದ್ದೆಗಳಲ್ಲಿ ಮುಂದುವರೆಯುತ್ತಾರೆ ಎಂದು ತಿಳಿಸಿದೆ.<br>ಆದೇಶ ಸಂಖ್ಯೆ:ಕವಿಹಂ/ಕುಸ/545/98 ದಿನಾಂಕ:29–04–1997ರ ಆದೇಶದನ್ವಯ ಕಿರಿಯ ಸಹಾಯಕರಿಂದ ಹಿರಿಯ ಸಹಾಯಕರಾಗಿ ನೀಡಿದ ಮುಂಬಡ್ತಿಯನ್ನು ಅಸಿಂಧುಗೊಳಿಸಿದ್ದಾರೆ.<br>ಮುಂದುವರೆದು ಆದೇಶ ಸಂಖ್ಯೆ:ಕವಿಹಂ/ಕುಸ/ಮುಂಬಡ್ತಿ/2003–04/ 959/C ದಿನಾಂಕ:22–12–2003ರ ಆದೇಶದನ್ವಯ ಕಿರಿಯ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ ದಿನಾಂಕ:17–09–1998 ರಿಂದ ಜಾರಿಗೆ ಬರುವಂತೆ ಮುಂಬಡ್ತಿ ನೀಡಲಾಗಿದೆ. ಸದರಿಯವರು ವೇತನ ಶ್ರೇಣಿ (5200–9580) ರವರು ಕನಿಷ್ಠ ಮೂಲ ವೇತನದೊಂದಿಗೆ ನಿಯಮಾನುಸಾರ ಅರ್ಹ ಭತ್ಯೆಗಳನ್ನು ಪಡೆಯುತ್ತಾರೆ ಎಂದು ತಿಳಿಸಿದೆ.<br>ಆದರೆ ದಿನಾಂಕ:29–04–1997 ರನ್ವಯ ಸದರಿಯವರಿಗೆ ಹಿರಿಯ ಸಹಾಯಕರನ್ನಾಗಿ ನೀಡಿದ ಪದೋನ್ನತಿ ಹಿಂತೆಗೆದುಕೊಂಡು ದಿನಾಂಕ: 17–09–1998ರನ್ವಯ ಪದೋನ್ನತಿ ನೀಡಿರುವುದರಿಂದ ದಿನಾಂಕ: 29–04–1997 ರಿಂದ 17–09–1998 ರವರೆಗೆ ಹಿರಿಯ ಸಹಾಯಕ ವೇತನ ಶ್ರೇಣಿ (1720–3170)ಯು ಅನ್ವಯವಾಗದೇ ಇರುವ ಪ್ರಯುಕ್ತ ಸದರಿಯವರಿಗೆ ಕಿರಿಯ ಸಹಾಯಕ ವೇತನ ಶ್ರೇಣಿ ನಿಗದಿ ಪಡಿಸಿ ವ್ಯತ್ಯಾಸದ ಮೊತ್ತ ರೂ. 51,061/–ಗಳನ್ನು (**ಅನುಬಂಧ–28 ರಲ್ಲಿ ವಿವರಿಸಿದಂತೆ**) ವಸೂಲಾತಿಸದೇ ಇರುವುದು ಕಂಡುಬಂದಿದೆ.<br>2) ಅಧೀಕ್ಷಕ ಹುದ್ದೆ ಬಡ್ತಿ ಹೊಂದಿದಾಗ ಅಧೀಕ್ಷಕ ಹುದ್ದೆ ಮೂಲ ವೇತನ ತಲುಪಿದ್ದರಿಂದ ಒಂದು ವಾರ್ಷಿಕ ವೇತನ ಬಡ್ತಿ ನೀಡಿ ನಿಗದಿಗೊಳಿಸಲಾಗಿದೆ ಎಂದು ತಿಳಿಸಿದೆ.<br>ಆದರೆ ದಿನಾಂಕ:01–04–2003 ರ ವಾರ್ಷಿಕ ವೇತನ ಬಡ್ತಿಯು ಮೂಲವೇತನ ರೂ.5850/ಗಳನ್ನು ನಿಗದಿಪಡಿಸಲಾಗಿದೆ. ಆದೇಶ ಸಂಖ್ಯೆ:ಕವಿಹಂ/ಕುಸ/ ಮುಂಬಡ್ತಿ 2003–04/989 ದಿನಾಂಕ:22–12–2003ರನ್ವಯ ಹಿರಿಯ ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ದಿನಾಂಕ:17–09–2003 ರಿಂದ | 2. ಎ. ಕಾಶಿವಿಶ್ವನಾಥ ಇವರ ಮೂಲ ವೇತನ ರೂ. 6,150/–ಕ್ಕೆ ವಿವರಣೆ ನೀಡಲಾಗಿದೆ. ಆದೇಶ ಸಂಖ್ಯೆ: ಕವಿಹಂ.ಕು.ಸ.ಉಕಸ ಆಡಳಿತ ಸಿಬ್ಬಂದಿವೇತನ ನಿಗಧಿ 2008–09 ದಿ:24.12.2008ರ ಅನ್ವಯ 5ನೇ ಪರಿಷ್ಕೃತ ವೇತನ ಶ್ರೇಣಿ ಅನ್ವಯ ಏಪ್ರಿಲ್ 1998ರಿಂದ ಅನ್ವಯವಾಗುವಂತೆ ಸದರಿಯವರಿಗೆ ತಮ್ಮ ಹಿರಿಯ ನೌಕರರಾದ ಇವರಿಗೆ ಕಿರಿಯ ನೌಕಕರು ಮಾರ್ಚ್ ತಿಂಗಳಲ್ಲಿ ಮುಂಚಿತವಾಗಿ ವಾರ್ಷಿಕ ವೇತನ ಪಡೆಯುತ್ತಿದ್ದರಿಂದ ಹಾಗೂ ವೇತನ ಸಮಾನತೆ ಅನುಸರಿಸಬೇಕಾದುದರಿಂದ ಇವರ ವೇತನವನ್ನು ಏಪ್ರಿಲ್ 1998ಕ್ಕೆ ಅನ್ವಯವಾಗುವಂತೆ ಒಂದು ವಾರ್ಷಿಕ ವೇತನ ಬಡ್ತಿ ನೀಡಿ ಪುನರ್‌ನಿಗದಿಗೊಳಿಸಲಾಗಿದೆ. 01.04.2003ಕ್ಕೆ ರೂ. 5,850ರಿಂದ ಒಂದು ವಾರ್ಷಿಕ ವೇತನ ಬಡ್ತಿ ನೀಡಿ ರೂ. 6,000/–ನಿಗದಿಗೊಳಿಸಿದೆ ನಂತರ ಅಧೀಕ್ಷಕರ ಬಡ್ತಿಯ ನಂತರ ಒಂದು ವಾರ್ಷಿಕ ಬಡ್ತಿ ನೀಡಿ ರೂ. 6,150/– ನಿಗದಿಗೊಳಿಸಲಾಗಿದೆ. ಅಕ್ಷೇಪಣೆ ಕೈ ಬಿಡಲು ಕೋರಲಾಗಿದೆ.<br>3. ಎ. ಕಾಶಿವಿಶ್ವನಾಥ ಇವರ ಮೂಲ ವೇತನವನ್ನು ಕಛೇರಿ ಆದೇಶ ಸಂಖ್ಯೆ: ಕವಿಹಂ.ಕುಸ.ಅನಿ.ವೇನಿ. 2019–10 694 ದಿ: 27.05.2009ರ ಅನ್ವಯ ಸದರಿಯವರ ಮೂಲವೇತನವನ್ನು ಡಿಸೆಂಬರ್ 2008ಕ್ಕೆ ರೂ13,700/–ನಿಗದಿಗೊಳಿಸಿ ಕಿರಿಯರಿಕ್ಕಿಂತ ಹಿರಿಯರಿಗೆ ವೇತನ ಸಮಾನಗೊಳಿಸಬೇಕಾದುದ ರಿಂದ ವಾರ್ಷಿಕ ವೇತನ ಬಡ್ತಿಯನ್ನು ಏಪ್ರಿಲ್ 2009ರ ತಿಂಗಳಿಂದ ಜಾರಿಗೆ ಬರುವಂತೆ ರೂ. 11400–21600/–ರ ವೇತನ ಶ್ರೇಣಿಯಲ್ಲಿ ಮೂಲ ವೇತನವನ್ನು ರೂ. 14050/–ಗಳಿಗೆ ನಿಗದಿಗೊಳಿಸಿ | |

| | | | |
|---|---|---|---|
| | ಜಾರಿಗೆ ಬರುವಂತೆ ಮುಂಬಡ್ತಿ ನೀಡಿರುವುದರಿಂದ ಸದರಿ ಹುದ್ದೆಯ ಮೂಲವೇತನ ತಲುಪದೇ ಇರುವ ಪ್ರಯುಕ್ತ ಸದರಿ ಹುದ್ದೆಯ ವೇತನ ಶ್ರೇಣಿ (6000–11200)ರಲ್ಲಿ ಅರ್ಹ ಮೂಲ ವೇತನ ರೂ. 6000/–ಗಳನ್ನು ನಿಗದಿಪಡಿಸಬೇಕು ಆದರೆ ಸೇವಾ ಪುಸ್ತಕದಲ್ಲಿ ರೂ.6,150/–ಗಳನ್ನು ನಿಗದಿಪಡಿಸಿರುವುದು ಕಂಡುಬಂದಿದೆ. ಆದ್ದರಿಂದ ಸದರಿಯವರ ಸೇವಾ ಪುಸ್ತಕವನ್ನು ಪರಿಶೀಲಿಸಿ ಸರಿಪಡಿಸಲು ಸೂಚಿಸಿದೆ.<br>3) ಕಛೇರಿ ಆದೇಶ ಸಂಖ್ಯೆ:ಕವಿಹಂ/ಅನಿ/ವೇನಿ/2009–10/694 ದಿನಾಂಕ: 27–05–2009 ರ ಅನ್ವಯ ಸದರಿಯವರ ಮೂಲ ವೇತನವನ್ನು ಡಿಸೆಂಬರ್–2008ಕ್ಕೆ ರೂ.13,700/– ನಿಗದಿಗೊಳಿಸಿ, ವಾರ್ಷಿಕ ವೇತನ ಬಡ್ತಿಯನ್ನು 2009 ಏಪ್ರಿಲ್ ತಿಂಗಳಿನಿಂದ ಜಾರಿಗೆ ಬರುವಂತೆ ರೂ. (11,400–21,600)ರ ವೇತನ ಶ್ರೇಣಿಯಲ್ಲಿ ಮೂಲ ವೇತನವನ್ನು ರೂ.14,050/–ಗಳಿಗೆ ನಿಗದಿಪಡಿಸಿರುವುದರಿಂದ ಒಂದು ಹೆಚ್ಚುವರಿ ವೇತನ ಬಡ್ತಿ ನೀಡಿರುವುದು ಕಂಡುಬಂದಿದೆ.<br>ಮುಂದುವರೆದು ದಿನಾಂಕ:01–12–2008ರನ್ವಯ ಮೂಲ ವೇತನ ರೂ.13,350/–ಗಳು ನಿಗದಿಪಡಿಸಬೇಕು, ಆದರೆ ಸೇವಾಪುಸ್ತಕದಲ್ಲಿ ರೂ.13,700/–ಗಳನ್ನು ನಿಗದಿಪಡಿಸಿರುವುದರಿಂದ ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿಯ ದಿನಾಂಕ:01–12–2008 ರಿಂದ 01–04–2018 ರವರೆಗೆ ನೀಡಿರುವುದು ಕಂಡುಬಂದಿದೆ. ಹೆಚ್ಚುವರಿಯಾಗಿ ಪಾವತಿಯಾದ ಮೂಲ ವೇತನ ಭತ್ಯೆಗಳು ಹಾಗೂ ಇನ್ನುಳಿದ ಸೌಲಭ್ಯಗಳನ್ನು ಲೆಕ್ಕಹಾಕಿ **ಅನುಬಂಧ–28ರಲ್ಲಿ** ವಿವರಿಸಿದಂತೆ ಮೊತ್ತ ರೂ.1,17,750/– ಗಳನ್ನು ವಸೂಲಾತಿಯಲ್ಲಿಡಲು ಸೂಚಿಸಿದೆ.<br>4) ಆದೇಶ ಸಂಖ್ಯೆ:ಕುಸ/02/ಹಕಾವಿ/04/ವೇನಿ/2019–20/14 ದಿನಾಂಕ:23–01–2018ರನ್ವಯ ವೇತನ ನಿಗಧೀಕರಣ ಆದೇಶ ಮತ್ತು ಕಿರಿಯ ನೌಕರನ ಸಮಾನಾಂತರ ವಾರ್ಷಿಕ ವೇತನ ಬಡ್ತಿ ನೀಡಿರುವುದು ಕಂಡುಬಂದಿದೆ.<br>ಆದೇಶ ಸಂಖ್ಯೆ:ಎಫ್‌ಪಿ 06 ಎಸ್‌ಆರ್‌ಪಿ 2018 ಬೆಂಗಳೂರು ದಿನಾಂಕ: 19ನೇ ಏಪ್ರಿಲ್ 2018 ರನ್ವಯ ಅಧಿಸೂಚನೆ 7(8) (ಅ) ರನ್ವಯ "ಅವರ ಬಡ್ತಿಗೆ ಮುನ್ನ ಹಿರಿಯ ಮತ್ತು ಕಿರಿಯ ಸರ್ಕಾರಿ ನೌಕರರನ್ನು ಧಾರಣ ಮಾಡಿರುವ ಹುದ್ದೆಗಳು ಒಂದೇ ಪದ ವೃಂದಕ್ಕೆ ಸೇರಿರಬೇಕು ಮತ್ತು ಅವರು ಬಡ್ತಿ ಹೊಂದಿದ ಹುದ್ದೆಗಳು ಒಂದೇ ಪದ ವೃಂದಕ್ಕೆ ಸೇರಿರತಕ್ಕದ್ದು ಎಂದು ತಿಳಿಸಿದೆ.<br>ಆದರೆ ಸಿ.ಸಿ. ಪೂವಯ್ಯರವರು ಪ್ರಕಟಣೆ ಸಹಾಯಕ ಎಂದು ನೇಮಕಾತಿ ಹೊಂದಿದ್ದು, ವೇತನ ಶ್ರೇಣಿ (1900–3700) ನಿಗದಿ ಮಾಡಿದ್ದು, ಸದರಿಯವರು (ಶ್ರೀ ಕಾಶಿ ವಿಶ್ವನಾಥ) ಕಿರಿಯ ಸಹಾಯಕ ಎಂದು ನೇಮಕಾತಿ ಹೊಂದಿದ್ದು, ವೇತನ ಶ್ರೇಣಿ(980–1760)ರಲ್ಲಿ ನೇಮಕಾತಿ ಹೊಂದಿರುತ್ತಾರೆ. ಆದ್ದರಿಂದ ವೇತನ ಶ್ರೇಣಿ ಹೋಲಿಕೆ ಇಲ್ಲದೇ ಬರೀ ಮೂಲವೇತನ ನೋಡಿ ಸಿ.ಸಿ. ಪೂವಯ್ಯ ಇವರು ಪಡೆಯುತ್ತಿದ್ದ ವೇತನಕ್ಕೆ ಸಮಾನಂತರವಾಗಿ ಶ್ರೀ ಎ. ಕಾಶಿವಿಶ್ವನಾಥ ಇವರಿಗೆ Step up ಮಾಡಿದ್ದು, ತಪ್ಪಾಗಿರುತ್ತದೆ. | ಮಂಜೂರು ಮಾಡಲಾಗಿದೆ ಹಾಗೂ ವ್ಯತ್ಯಾಸದ ಮೂಲ ವೇತನದ ಆರ್ಥಿಕ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಆದ್ದುದರಿಂದ ಕೈಬಿಡಲು ಕೋರಲಾಗಿದೆ.<br>4. ಶ್ರೀ ಎ. ಕಾಶಿವಿಶ್ವನಾಥ, ಸಹಾಯಕ ನಿರ್ದೇಶಕರು ಇವರಿಗೆ ತನ್ನ ಕಿರಿಯ ನೌಕರರಾದ ಶ್ರೀ ಸಿ.ಸಿ. ಪೂವಯ್ಯ ಸಹಾಯಕ ನಿರ್ದೇಶಕರು ಇವರು 2018ರಲ್ಲಿ ಸಹಾಯಕ ನಿರ್ದೇಶಕರಾಗಿದ್ದಾರೆ ಶ್ರೀ ಎ. ಕಾಶಿವಿಶ್ವನಾಥ ಸಹಾಯಕ ನಿರ್ದೇಶಕರು ಇವರು 2015ರಲ್ಲಿ ಸಹಾಯಕ ನಿರ್ದೇಶಕರಾಗಿದ್ದಾರೆ. ಎ. ಕಾಶಿವಿಶ್ವನಾಥ ಸಹಾಯಕ ನಿರ್ದೇರ್ಶಕರು ಇವರು ಸಿ.ಸಿ. ಪೂವಯ್ಯ ಸಹಾಯಕ ನಿರ್ದೇಶಕರು ಇವರಿಗಿಂತ ಹಿರಿಯ ನೌಕರಾಗಿದ್ದರು. ಕಿರಿಯ ನೌಕರರಾದ ಪೂವಯ್ಯನವರಿಗಿಂತ ಕಡಿಮೆ ಮೂಲ ವೇತನ ಪಡೆಯುತ್ತಿದ್ದರು. ನಿಮಿತ್ತ ಸರ್ಕಾರಿ ಆದೇಶ ಸಂಖ್ಯೆ ಪರಿಷ್ಕೃತ ವೇತನ 2018–7 ಉಪ ಸಂಖ್ಯೆ 8ರ ಅನ್ವಯ ತನ್ನ ಕಿರಿಯ ನೌಕರನ ವೇತನಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದರೆ ಹಿರಿಯ ಸರ್ಕಾರಿ ನೌಕರನ ಉನ್ನತ ಹುದ್ದೆಯಲ್ಲಿ ತನ್ನ ಕಿರಿಯ ನೌಕರನಿಗೆ ನಿಗದಿಗೊಳಿಸಲಾದ ವೇತನದ ಸಮಾನ ಮೊತ್ತಕ್ಕೆ ಏರಿಸತಕ್ಕದ್ದು ಎಂದು ಅದೇಶವಿರುತ್ತದೆ ಮತ್ತು ಈ ಪ್ರಕರಣಕ್ಕೆ ಧಾರಣ ಮಾಡಿದ ಹುದ್ದೆಗಳು ಒಂದು ಪದ ವೃಂದಕ್ಕೆ ಸೇರಿರಬೇಕು ಮತ್ತು ಪದನಾಮ ಒಂದೇ ಆಗಿರಬೇಕು ಇವರಿಬ್ಬರ ಹುದ್ದೆಯ ಪದನಾಮ ಸಹಾಯಕ ನಿರ್ದೇಶಕರು ಎಂದು ಇದ್ದು. ಬಡ್ತಿ ಹೊಂದಿದಾಗ ಅಧೀಕ್ಷಕರ ಹುದ್ದೆಯೆಂದು ಅಥವಾ ಪ್ರಕಟಣ ಸಹಾಯಕ ಹುದ್ದೆಯೆಂದು ಆದೇಶದಲ್ಲಿ ಇಲ್ಲ. ಈ ಕಾರಣಕ್ಕೆ | |

<table>
<tr>
<td></td>
<td>ಆದ್ದರಿಂದ Step up ಮಾಡಿ ಪಡೆದುಕೊಂಡ ವೇತನ ಬಡ್ತಿಯನ್ನು ಮೂಲವೇತನ ಹುದ್ದೆಗೆ ನೀಡಿದ್ದನ್ನು ಹಾಗೂ ಕಾಲಕಾಲಕ್ಕೆ ಪರಿಪೂರ್ಣ ವೇತನದಂತೆ ಹೆಚ್ಚಿಸಿ ವೇತನ ಹಾಗೂ ಭತ್ಯೆಗಳನ್ನು ನೀಡಿರುವುದು ಕಂಡುಬಂದಿದೆ. ಹೆಚ್ಚುವರಿಯಾಗಿ ಪಾವತಿಯಾದ ಮೂಲವೇತನ, ಭತ್ಯೆಗಳು ಲೆಕ್ಕ ಹಾಕಿ (ಅನುಬಂಧ-28ರಲ್ಲಿ ವಿವರಿಸಿದಂತೆ) ಮೊತ್ತ ರೂ.62,035/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.<br>ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:82 ದಿನಾಂಕ:24-12-2021 ರಂದು ನೀಡಲಾಗಿದೆ. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ.<br>ಸದರಿಯವರಿಗೆ ಹೆಚ್ಚುವರಿಯಾಗಿ ಪಾವತಿಯಾದ ವೇತನ ಬಡ್ತಿ ವ್ಯತ್ಯಾಸದ ಮೊತ್ತ (ರೂ.57,061+ 1,17,750 + 62,035)ರೂ.2,30,854/-ಗಳನ್ನು ವಸೂಲಾತಿಯಲ್ಲಿಡಲಾಗಿದೆ.</td>
<td>ಕಾಶಿವಿಶ್ವನಾಥ ಇವರ ಮೂಲ ವೇತನಕ್ಕೆ ಸಮಾಂತರಗೊಳಿಸಲಾಗಿದೆ. ಆದುದರಿಂದ ಈ ಆಕ್ಷೇಪಣೆಯನ್ನು ಕೈಬೀಡಲು ಕೋರಲಾಗಿದೆ.</td>
<td></td>
</tr>
<tr>
<td>53</td>
<td>2019-20ನೇ ಸಾಲಿನ ನಗದು ಪುಸ್ತಕ ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿನ ಖರ್ಚಿನ ವ್ಯತ್ಯಾಸದ ಕುರಿತು.<br>2019-20ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಹಾಯಕ ಕುಲಸಚಿವರು ನಿರ್ವಹಣಾ ವಿಭಾಗದ ಜಮಾ ಖರ್ಚಿನ ವಿವರಗಳನ್ನು ವಾರ್ಷಿಕ ಲೆಕ್ಕಪತ್ರ ಹಾಗೂ ನಗದು ಪುಸ್ತಕಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ್ದು 2019-20ನೇ ಸಾಲಿನಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.
<table>
<tr><th>ಕ್ರ. ಸಂ.</th><th>ವಿವರ</th><th>ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ಖರ್ಚು</th><th>ನಗದು ಪುಸ್ತಕದ ಪ್ರಕಾರ ಖರ್ಚು</th><th>ವ್ಯತ್ಯಾಸ</th></tr>
<tr><td>1</td><td>ಸಹಾಯಕ ಕುಲಸಚಿವರು, ನಿರ್ವಹಣಾ ಶಾಖೆ, 2019-20</td><td>1,22,01,787</td><td>8,12,860</td><td>1,13,88,927</td></tr>
</table>
ಈ ಮೇಲಿನ ತಃಖ್ತೆಯಲ್ಲಿ ವಿವರಿಸಿದಂತೆ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ಸದರಿ ವಿಭಾಗದ ಖರ್ಚಿನ ಮೊತ್ತ ರೂ.1,22,01,787=00ಗಳಾಗಿರುತ್ತದೆ ಮತ್ತು ನಗದು ಪುಸ್ತಕದ ಪ್ರಕಾರ ಒಟ್ಟು ಖರ್ಚು ರೂ.8,12,860/- ಗಳಾಗಿರುತ್ತದೆ. ವ್ಯತ್ಯಾಸದ ಮೊತ್ತ ರೂ.1,13,88,927/- ಗಳಾಗಿರುತ್ತವೆ. ಲೆಕ್ಕಪತ್ರಗಳಲ್ಲಿ ಈ ರೀತಿ ಹೆಚ್ಚುವರಿಯಾಗಿ ಖರ್ಚು ನಮೂದಿಸಿರುವುದಕ್ಕೆ ಸೂಕ್ತ ದಾಖಲಾತಿಗಳೊಂದಿಗೆ ಸ್ಪಷ್ಟೀಕರಣ ನೀಡಲು ತಿಳಿಸಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:08 ದಿನಾಂಕ:27-09-2021 ನೀಡಲಾಗಿದೆ. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ 2019-20ನೇ ಸಾಲಿನ ಭದ್ರತೆ ಮತ್ತು ಶುಚಿತ್ವ</td>
<td>ಸಹಾಯಕ ಕುಲಸಚಿವರು ನಿರ್ವಹಣಾ ವಿಭಾಗದ ನಗದು ಪುಸ್ತಕದಲ್ಲಿ ಸಹಾಯಕ ಕುಲಸಚಿವರು ನಿರ್ವಹಣಾ ವಿಭಾಗದ ಹೆಸರಿಗೆ ನೀಡಿದ ಚೆಕ್‌ಗಳನ್ನು ಮಾತ್ರ ದಾಖಲಿಸಲಾಗಿದೆ. ಹೀಗೆ ದಾಖಲಿಸಿದರೆ ಮಾತ್ರ ನಗದು ಪುಸ್ತಕ ಮತ್ತು ಬ್ಯಾಂಕ್ ಖಾತೆಗೆ ರಿಕನ್ಸಿಲೇಷನ್ ಆಗಿ ತಾಳೆ ಆಗುತ್ತವೆ, ಆ ಕಾರಣಕ್ಕಾಗಿ ಸಹಾಯಕ ಕುಲಸಚಿವರು ನಿರ್ವಹಣಾ ವಿಭಾಗದ ಹೆಸರಿಗೆ ನೀಡಿದ ಚೆಕ್‌ಗಳನ್ನು ಮಾತ್ರ ದಾಖಲಿಸಲಾಗಿದೆ.<br>ಆದರೆ ವಾರ್ಷಿಕ ಲೆಕ್ಕಪತ್ರದಲ್ಲಿ ನೇರವಾಗಿ ಫರ್ಮ್ ಇತ್ಯಾದಿ ಹೆಸರಿಗೆ ಪಾವತಿಸಿದ ಒಟ್ಟಾರೆ ಖರ್ಚು ವೆಚ್ಚಗಳನ್ನು ಒಳಗೊಂಡಂತೆ ದಾಖಲಿಸಲಾಗಿರುತ್ತದೆ ಹಾಗೂ ಭದ್ರತೆ ಮತ್ತು ಶುಚಿತ್ವ ಕೆಲಸಗಳು ಕಾನೂನು ಸಲಹಾ ಘಟಕ ನಿರ್ವಹಿಸುತ್ತಿದೆ ಆ ಖರ್ಚು ವೆಚ್ಚಗಳನ್ನು ಸಹ ಸಹಾಯಕ ಕುಲಸಚಿವರು ನಿರ್ವಹಣಾ ವಿಭಾಗದ ಲೆಕ್ಕಶೀರ್ಷಿಕೆಯಲ್ಲಿ ವಾರ್ಷಿಕ ಲೆಕ್ಕಪತ್ರದಲ್ಲಿ ದಾಖಲಿಸಲಾಗಿದೆ. ಹಾಗಾಗಿ ಯಾವುದೇ ಲೋಪವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.</td>
<td></td>
</tr>
</table>

| | | | |
|---|---|---|---|
| | ಕೆಲಸಗಳು ಕಾನೂನು ಸಲಹಾ ಘಟಕ ನಿರ್ವಹಿಸುತ್ತಿದೆ ಎಂದು ತಿಳಿಸಿದ್ದಾರೆ. ಆದರೆ 2019–20ನೇ ಸಾಲಿನ ಬ್ಯಾಂಕ್ ಸ್ಟೇಟ್‌ಮೆಂಟ್, ನಗದು ಪುಸ್ತಕ ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿ ತೋರಿಸಿದ ವ್ಯತ್ಯಾಸಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರಿಸಿದೆ. ಅಲ್ಲಿಯವರೆಗೆ ಹೆಚ್ಚುವರಿಯಾಗಿ ನಮೂದಿಸಿದ ಖರ್ಚಿನ ಮೊತ್ತ **ರೂ.1,13,88,927/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **54** | **ನಗದು ಪುಸ್ತಕ ನಿರ್ವಹಿಸುವಲ್ಲಿ ಕಂಡುಬಂದ ನ್ಯೂನತೆಗಳ ಕುರಿತು.**<br>ಕನ್ನಡ ವಿಶ್ವವಿದ್ಯಾಲಯ ಹಂಪಿ ಅಡಿಯಲ್ಲಿ ಬರುವ ದೇಶಿ ಅಧ್ಯಯನ ಕೇಂದ್ರ ಕುರುಬನಕಟ್ಟೆ ವಿಭಾಗದವರು ಬ್ಯಾಂಕ್ ಆಫ್ ಇಂಡಿಯಾ ಕೊಳ್ಳೆಗಾಲದಲ್ಲಿ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ:844410110008647 ಹೊಂದಿದ್ದು, ಸದರಿ ಬ್ಯಾಂಕ್ ಖಾತೆಯ ನಗದು ಪುಸ್ತಕವನ್ನು ನಿಗದಿತ ನಮೂನೆಯಲ್ಲಿ ನಿರ್ವಹಿಸದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.<br>"ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 331ರ ಪ್ರಕಾರ ನಗದು ಪುಸ್ತಕವನ್ನು ಪ್ರತಿ ನಿತ್ಯವೂ ಬರೆಯತಕ್ಕದ್ದು, ಪ್ರತಿಯೊಂದು ಜಮೆ ಅಥವಾ ವೆಚ್ಚಕ್ಕೆ ಸಂಬಂಧಿಸಿದ ನಮೂದನ್ನು ವ್ಯವಹಾರಕ್ಕೆ ತಕ್ಕಂತೆ ಏಕಕಾಲದಲ್ಲಿ ಮಾಡತಕ್ಕದು, ಪ್ರತಿ ದಿನವೂ ಪ್ರಾರಂಭದ ಶಿಲ್ಕನ್ನು ಜಮೆಗಳ ಸಾಲಿನಲ್ಲಿ ಅವುಗಳ ಸ್ವೀಕೃತಿಗಳ ಅನುಕ್ರಮದಲ್ಲಿ ಬರೆಯತಕ್ಕದ್ದು, ಹಾಗೆಯೇ ಪ್ರತಿ ಬಾಬ್ತಿನ ಬಗ್ಗೆ ಮಾಡಿದ ವೆಚ್ಚ ಅವುಗಳ ಎದುರಿಗೆ ಸಂವಾದಿ ವೋಚರ್ ನಂಬರನ್ನು ಸೂಚಿಸಿ ವೆಚ್ಚದ ಸಾಲಿನಲ್ಲಿ ಬರೆಯತಕ್ಕದ್ದು, ಪ್ರತಿ ದಿನವು ನಗದು ಪುಸಕ್ತವನ್ನು ಪೂರ್ಣಗೊಳಿಸಿ ಶಿಲ್ಕನ್ನು ಬರೆಯತಕ್ಕದ್ದು, ತಿಂಗಳ ಕೊನೆಗೆ ತಿಂಗಳ ಕೊನೆಯ ದಿನದ ಕೊನೆಯಲ್ಲಿ ಪೂರ್ಣಗೊಳಿಸುವಂತೆಯೇ ನಗದು ಪುಸ್ತಕವನ್ನು ಪೂರ್ಣಗೊಳಿಸತಕ್ಕದ್ದು ಮತ್ತು ನಗದು ಶಿಲ್ಕುಗಳನುಗುಣವಾಗಿ ವಿವರವಾಗಿ ಬಾಬ್ತುಗಳ ವಿವರಗಳನ್ನು ಕೊಡತಕ್ಕದ್ದು ಎಂದು ತಿಳಿಸಿದೆ.<br>ಅದೇ ರೀತಿಯ ಆರ್ಥಿಕ ವರ್ಷದ ಕೊನೆಯ ತಿಂಗಳ ಕೊನೆಯ ದಿನಾಂಕದಂದು (31–03–2020) ಲೆಕ್ಕ ಸಮನ್ವಯ (Bank Reconciliation statement) ಮಾಡಿ ನಗದು ಪುಸ್ತಕಕ್ಕೆ ಮತ್ತು ಬ್ಯಾಂಕ್ ಪಾಸ್‌ಬುಕ್‌ಗೆ ಜಮೆ ಹಾಗೂ ಖರ್ಚು ಆಗದೇ ಇರುವ ಚೆಕ್‌ಗಳ ಸಂಖ್ಯೆ ನಗದು ಪುಸ್ತಕದಲ್ಲಿ ನಮೂದಿಸಬೇಕು.<br>ಸದರಿ ವಿಭಾಗದಲ್ಲಿ ನಿರ್ವಹಿಸುತ್ತಿರುವ ನಗದು ಪುಸ್ತಕವು ಈ ಮೇಲೆ ತಿಳಿಸಿದ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ ಪ್ರಕಾರ ನಿರ್ವಹಿಸದೇ ಇರುವುದರಿಂದ ನಿಯಮ ಉಲ್ಲಂಘನೆಯಾಗಿರುತ್ತದೆ.<br>ಪ್ರಯುಕ್ತ ಸದರಿ ಅನುಚ್ಛೇದ ಅನ್ವಯ ನಿಗದಿತ ನಮೂನೆಯಲ್ಲಿ ನಗದು ಪುಸ್ತಕವನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸುವಂತೆ ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:25 ದಿನಾಂಕ:10–11–2021** | ಆಕ್ಷೇಪಣೆಯಲ್ಲಿ ಸೂಚಿಸಿರುವಂತೆ ದೇಶಿ ಅಧ್ಯಯನ ಕೇಂದ್ರ ಕುರುಬನಕಟ್ಟೆಯ ನಗದು ಪುಸ್ತಕವನ್ನು ನಿರ್ವಹಿಸಲಾಗಿದೆ. ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಹಾಜರುಪಡಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | **ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. 2019–20ನೇ ಸಾಲಿನಲ್ಲಿ ವೆಚ್ಚವಾದ ಮೊತ್ತ **ರೂ.1,32,484/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| **55** | **ಮಹಿಳಾ ಅಧ್ಯಯನ ವಿಭಾಗದಲ್ಲಿ ನಗದು ಪುಸ್ತಕವನ್ನು ನಿರ್ವಹಿಸದೇ ಇರುವ ಕುರಿತು.**<br>ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 331 ರ ಪ್ರಕಾರ ನಗದು ಪುಸ್ತಕವನ್ನು ಪ್ರತಿ ನಿತ್ಯವೂ ಬರೆಯತಕ್ಕದ್ದು, ಪ್ರತಿಯೊಂದು ಜಮೆ ಅಥವಾ ವೆಚ್ಚಕ್ಕೆ ಸಂಬಂಧಿಸಿದ ನಮೂದನ್ನು ವ್ಯವಹಾರಕ್ಕೆ ತಕ್ಕಂತೆ ಏಕಕಾಲದಲ್ಲಿ ಮಾಡತಕ್ಕದ್ದು, ಪ್ರತಿದಿನವೂ ಪ್ರಾರಂಭದ ಶಿಲ್ಕನು ಜಮೆಗಳ ಸಾಲಿನಲ್ಲಿ ತಂದು ಆ ದಿನದ ವ್ಯವಹಾರ ಕಾಲಂದಲ್ಲಿ ಸ್ವೀಕರಿಸಿಕೊಂಡ ಮೊತ್ತಗಳನ್ನು ಜಮೆಗಳ ಸಾಲಿನಲ್ಲಿ ಅವುಗಳ ಸ್ವೀಕೃತಿಗಳ ಅನುಕ್ರಮದಲ್ಲಿ ಬರೆಯತಕ್ಕದ್ದು. ಹಾಗೆಯೇ ಪ್ರತಿ ಬಾಬ್ತಿನ ಬಗ್ಗೆ ಮಾಡಿದ ವೆಚ್ಚ ಅವುಗಳ ಎದುರಿಗೆ ಸಂವಾದಿ ವೋಚರ್ ನಂಬರ್‌ನ್ನು ಸೂಚಿಸಿ ವೆಚ್ಚದ ಸಾಲಿನಲ್ಲಿ ಬರೆಯತಕ್ಕದ್ದು, ಪ್ರತಿ ದಿನವೂ ನಗದು ಪುಸ್ತಕವನ್ನು ಪೂರ್ಣಗೊಳಿಸಿ ಶಿಲ್ಕನ್ನು ಬರೆಯತಕ್ಕದ್ದು, ತಿಂಗಳ ಕೊನೆಯಲ್ಲಿ ತಿಂಗಳ ಕೊನೆಯ ದಿನದ ವ್ಯವಹಾರವು ಪೂರ್ತಿಗೊಂಡ ತರುವಾಯ ಪ್ರತಿದಿನದ ಕೊನೆಯಲ್ಲಿ ಪೂರ್ಣಗೊಳಿಸುವಂತೆಯೇ ನಗದು ಪುಸ್ತಕ ಪೂರ್ಣಗೊಳಿಸತಕ್ಕದ್ದು, ಮತ್ತು ನಗದು ಶಿಲ್ಕುಗಳಿಗನುಗುಣವಾಗಿ ವಿವರವಾಗಿ ಬಾಬುಗಳ ವಿವರವನ್ನು ಕೊಡತಕ್ಕದ್ದು ಎಂದು ತಿಳಿಸಿದೆ.<br>ಅದೇ ರೀತಿ ಆರ್ಥಿಕ ವರ್ಷದ ಕೊನೆಯ ದಿನಾಂಕದಂದು (31–03–2020)ಕ್ಕೆ ಲೆಕ್ಕ ಸಮನ್ವಯ (Bank Reconcilation Statement) ಮಾಡಿ ನಗದು ಪುಸ್ತಕಕ್ಕೆ ಮತ್ತು ಬ್ಯಾಂಕ್ ಪಾಸ್‌ಬುಕ್‌ಗೆ ಜಮೆ ಹಾಗೂ ಖರ್ಚು ಆಗದೇ ಇರುವ ಚೆಕ್‌ಗಳ ಸಂಖ್ಯೆ ನಗದು ಪುಸ್ತಕದಲ್ಲಿ ನಮೂದಿಸಬೇಕು.<br>ನಗದು ಪುಸ್ತಕವನ್ನು ಈ ಮೇಲೆ ತಿಳಿಸಿದ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದದ ಪ್ರಕಾರ ನಿರ್ವಹಿಸದೇ ಇರುವದರಿಂದ ನಿಯಮ ಉಲ್ಲಂಘನೆಯಾಗಿರುತ್ತದೆ.<br>ಆದರೆ ಮಹಿಳಾ ಅಧ್ಯಯನ ವಿಭಾಗದವರು ಬ್ಯಾಂಕ್ ಆಫ್ ಇಂಡಿಯಾ ಕಮಲಾಪುರ ಶಾಖೆಯಲ್ಲಿ ಉಳಿತಾಯ ಖಾತೆ ಸಂಖ್ಯೆ:842210100008332 ಹೊಂದಿದ್ದು, ಸದರಿ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ.<br>ಪ್ರಯುಕ್ತ ಮೇಲೆ ತಿಳಿಸಿದ KFC ಅನುಚ್ಛೇಧ 331ರ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸುವುದು. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:27 ದಿನಾಂಕ:11–11–2021 ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ನಗದು ಪುಸ್ತಕವನ್ನು ಸಿದ್ದಪಡಿಸುವಂತೆ ಸೂಚಿಸಿ ಆಕ್ಷೇಪಿಸಲಾಗಿತ್ತು. ಅದರನ್ವಯ ನಗದು ಪುಸ್ತಕವನ್ನು ಸಿದ್ದಪಡಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಕರ್ನಾಟಕ ಆರ್ಥಿಕ ಸಂಹಿತೆ 331ರ ಪ್ರಕಾರ ನಗದು ಪುಸ್ತಕ ನಿರ್ವಹಿಸದೇ | ಮಹಿಳಾ ಅಧ್ಯಯನ ವಿಭಾಗದಲ್ಲಿ ನಗದು ಪುಸ್ತಕವನ್ನು ವಿಭಾಗದ ಬ್ಯಾಂಕ್ ನಿರ್ವಹಣೆಯ ಉಳಿತಾಯ ಖಾತೆಗೆ ಅನುಗುಣವಾಗಿ ಜಮಾ–ಖರ್ಚುಗಳನ್ನು ದಾಖಲಿಸಿ ಸಿದ್ಧಪಡಿಸಲಾಗಿದೆ. ಅದರ ಜೆರಾಕ್ಸ್ ಪ್ರತಿಗಳನ್ನು ಇದರ ಜೊತೆಗೆ ಲಗತ್ತಿಸಲಾಗಿದೆ. ಇನ್ನು ಮುಂದೆ ದಿನ ನಿತ್ಯದ ಖರ್ಚು–ವೆಚ್ಚಗಳನ್ನು ದಾಖಲಿಸುವ ಕ್ರಮವನ್ನು ಈಗ ಅನುಸರಿಸಿ ಮುಂದುವರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಆಕ್ಷೇಪಣೆಯನ್ನು ಕೈ ಬಿಡಬೇಕೆಂದು ಈ ಮೂಲಕ ಕೋರಲಾಗಿದೆ. | |

| | | | |
|---|---|---|---|
| | ಇರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. ಅಲ್ಲಿಯವರೆಗೆ ಬ್ಯಾಂಕ್ ಸ್ಟೇಟ್‌ಮೆಂಟ್‌ನ ಅನ್ವಯ 2019–20ನೇ ಸಾಲಿನಲ್ಲಿ ಪಾವತಿಯಾದ ಮೊತ್ತ **ರೂ.1,65,030/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | | |
| 56 | **ಕುಲಪತಿಗಳ ಆಪ್ತಸಹಾಯಕರ ಹೆಸರಿನಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಕುಲಪತಿಗಳ ವಿಭಾಗದಲ್ಲಿ PS TO VICE-CHANCELLOR (ಕುಲಪತಿಗಳ ಆಪ್ತ ಸಹಾಯಕರ) ಹೆಸರಿನಲ್ಲಿ ಬ್ಯಾಂಕ್ ಆಫ್ ಇಂಡಿಯಾ ಕಮಲಾಪುರದಲ್ಲಿ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ:842210110000381 ಹೊಂದಿದ್ದು, ಸದರಿ ಖಾತೆಯನ್ನು ಮಾನ್ಯ ಕುಲಪತಿಗಳ ಪ್ರವಾಸದ ವೆಚ್ಚ ಭರಿಸಲು, ಔಪಚಾರಿಕ ವೆಚ್ಚ ಭರಿಸಲು ಮತ್ತು ಇತರೆ ಸಾದಿಲ್ವಾರು ವೆಚ್ಚಗಳನ್ನು ಭರಿಸಲು **"ಕುಲಪತಿಗಳ ಆಪ್ತ ಸಹಾಯಕ"** ಹೆಸರಿನಲ್ಲಿ ಮುಂಗಡ ಹಣವನ್ನು ಚೆಕ್ ಮೂಲಕ ಹಣಕಾಸು ವಿಭಾಗದಿಂದ ನೀಡಲಾಗುತ್ತಿದೆ. ಇಂತಹ ಮುಂಗಡ ಹಣದ ಚೆಕ್‌ಗಳನ್ನು PS TO VICE-CHANCELLOR ಬ್ಯಾಂಕ್ ಖಾತೆಗೆ ಕುಲಪತಿಗಳ ಆಪ್ತ ಸಹಾಯಕರು ಜಮಾ ಮಾಡಿ, ಹಣ ಡ್ರಾ ಮಾಡಿಕೊಳ್ಳುವ ಮೂಲಕ ಮೇಲಿನ ವೆಚ್ಚವನ್ನು ಭರಿಸುತ್ತಿದ್ದಾರೆ.<br>ಆದರೆ ಸದರಿ ಬ್ಯಾಂಕ್ ಖಾತೆಯನ್ನು ತೆರೆಯಲು ಯಾವುದೇ ಸರ್ಕಾರದ ನಿರ್ದೇಶನವಿರುವುದಿಲ್ಲ. ಸರ್ಕಾರದಿಂದ ಅನುಷ್ಠಾನಗೊಳಿಸಿದ ಯೋಜನೆಗಳು, ನಿಧಿಗಳು, ತೆರಿಗೆ ಇತರೆ ಮುಖ್ಯವಾದ ಅನುದಾನ/ಲೆಕ್ಕಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರವು ಬ್ಯಾಂಕ್ ಖಾತೆಗಳನ್ನು ತೆರೆಯಲು ಸೂಚಿಸಿದಾಗ ಮಾತ್ರ ಹೊಸ ಬ್ಯಾಂಕ್ ಖಾತೆ ತೆರೆಯಲು ಅವಕಾಶವಿರುತ್ತದೆ.<br>ಆದರೆ ಸದರಿ ಪ್ರಕರಣದಲ್ಲಿ ಔಪಚಾರಿಕ ವೆಚ್ಚಕ್ಕಾಗಿ ಮುಂಗಡ ಹಣವನ್ನು ಪಡೆಯುವ ಉದ್ದೇಶದಿಂದ ಬ್ಯಾಂಕ್ ಖಾತೆಯನ್ನು ತೆರೆಯಲಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿದೆ. ಸದರಿ ಬ್ಯಾಂಕ್ ಖಾತೆಯನ್ನು ತೆರೆಯಲು ಸೂಕ್ತ ಸರ್ಕಾರಿ ಆದೇಶಗಳಿಲ್ಲದೇ, ಸರ್ಕಾರದ ಪೂರ್ವಾನುಮತಿ ಪಡೆಯದೇ ಸಮಂಜಸ ಕಾರಣವಿಲ್ಲದೇ ತೆರೆಯಲಾಗಿರುವುದರಿಂದ ಸದರಿ ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಲು ಸೂಚಿಸಿದೆ.<br>ಸದರಿ ಪ್ರಕರಣವು ಉದಾಹರಣೆಗೆ ಮಾತ್ರವಾಗಿದ್ದು, ಇದರಂತೆ ಇತರೆ ವಿಭಾಗಗಳಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದ್ದಲ್ಲಿ, ಸದರಿ ಖಾತೆಗಳನ್ನು ಸಹ ಮುಕ್ತಾಯಗೊಳಿಸುವ ಕ್ರಮಕೈಗೊಳ್ಳುವುದು. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 40 ದಿನಾಂಕ: 17–11–2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. ಅಲ್ಲಿಯವರೆಗೆ 2019–20ನೇ ಸಾಲಿನಲ್ಲಿ ಬ್ಯಾಂಕ್ ಸ್ಟೇಟ್‌ಮೆಂಟ್ ಅನ್ವಯ ಖರ್ಚು ಮಾಡಲಾದ **ಮೊತ್ತ ರೂ.16,03,528/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಮಾನ್ಯ ಕುಲಪತಿಗಳ ಆಪ್ತಶಾಖೆಯ ವಿಭಾಗದಿಂದ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಉಳಿತಾಯ ಖಾತೆ ಸಂಖ್ಯೆ: 842210110000381 ನಿರ್ವಹಿಸಲಾಗುತ್ತಿದೆ. ಮಾನ್ಯ ಕುಲಪತಿ ಅವರು ಗಣ್ಯ ಮಾನ್ಯರ ಭೇಟಿ, ಸರ್ಕಾರದ ಕಚೇರಿ ಕೆಲಸ ಮತ್ತು ವಿಶ್ವವಿದ್ಯಾಲಯ ಹಾಗೂ ಇತರೆ ಸಂಘ–ಸಂಸ್ಥೆಗಳ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗುವ ನಿಗದಿತ ಕಾರ್ಯಕ್ರಮಗಳಿಗೆ ತೆರಳುತ್ತಿರುತ್ತಾರೆ. ಈ ಕಾರ್ಯಕ್ರಮಗಳಿಗೆ ತೆರಳಲು ಔಪಚಾರಿಕ, ಗಣ್ಯರ ಅತಿಥಿ ಸತ್ಕಾರ ಮುಂತಾದ ಕಾರ್ಯಕ್ರಮಗಳಿಗೆ ಮುಂಗಡ ಪಡೆಯಲು, ಮಾನ್ಯ ಕುಲಪತಿ ಆಪ್ತಶಾಖೆ ಮತ್ತು ಗೃಹ ಕಚೇರಿಯ ನಿರ್ವಹಣೆಗಾಗಿ ಹಾಗೂ ಗಣ್ಯ ಮಾನ್ಯರ ಭೇಟಿ ಸಂದರ್ಭದಲ್ಲಿ ಅತಿಥಿ ಸತ್ಕಾರದ ಸಲುವಾಗಿ ಪ್ರತ್ಯೇಕ ಉಳಿತಾಯ ಖಾತೆ ಅವಶ್ಯವಿರುವ ಪ್ರಯುಕ್ತ ನಿರ್ವಹಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ 2019–20ನೇ ಸಾಲಿನಲ್ಲಿ ಪಾವತಿಯಾದ ಮೊತ್ತ ನಿರ್ವಹಿಸಲಾಗುತ್ತಿದೆ.<br>ಈ ಹಿನ್ನೆಲೆಯಲ್ಲಿ 2019–20ನೇ ಸಾಲಿನಲ್ಲಿ ಪಾವತಿಯಾದ ಮೊತ್ತ ರೂ. 16,03,528/–ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| 57 | **ಶಂಭಾ ಜೋಷಿ ಅಧ್ಯಯನ ಪೀಠದಲ್ಲಿ ನಗದು ಪುಸ್ತಕವನ್ನು ನಿರ್ವಹಿಸದೇ ಇರುವ ಬಗ್ಗೆ.**<br>ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 331ರ ಪ್ರಕಾರ ನಗದು ಪುಸ್ತಕವನ್ನು ಪ್ರತಿ ನಿತ್ಯವೂ ಬರೆಯತಕ್ಕದ್ದು, ಪ್ರತಿಯೊಂದು ಜಮೆ ಅಥವಾ ವೆಚ್ಚಕ್ಕೆ ಸಂಬಂಧಿಸಿದ ನಮೂದನ್ನು ವ್ಯವಹಾರಕ್ಕೆ ತಕ್ಕಂತೆ ಏಕಕಾಲದಲ್ಲಿ ಮಾಡತಕ್ಕದ್ದು, ಪ್ರತಿ ದಿನವೂ ಪ್ರಾರಂಭದ ಶಿಲ್ಕನು ಜಮೆಗಳ ಸಾಲಿನಲ್ಲಿ ತಂದು ಆ ದಿನದ ವ್ಯವಹಾರ ಕಾಲಂದಲ್ಲಿ ಸ್ವೀಕರಿಸಿಕೊಂಡ ಮೊತ್ತಗಳನ್ನು ಜಮೆಗಳ ಸಾಲಿನಲ್ಲಿ ಅವುಗಳ ಸ್ವೀಕೃತಿಗಳ ಅನುಕ್ರಮದಲ್ಲಿ ಬರೆಯತಕ್ಕದ್ದು ಹಾಗೆಯೇ ಪ್ರತಿ ಬಾಬ್ತಿನ ಬಗ್ಗೆ ಮಾಡಿದ ವೆಚ್ಚ ಅವುಗಳ ಎದುರಿಗೆ ಸಂವಾದಿ ವೋಚರ್ ನಂಬರ್‌ನ್ನು ಸೂಚಿಸಿ ವೆಚ್ಚದ ಸಾಲಿನಲ್ಲಿ ಬರೆಯತಕ್ಕದ್ದು, ಪ್ರತಿ ದಿನವೂ ನಗದು ಪುಸ್ತಕವನ್ನು ಪೂರ್ಣಗೊಳಿಸಿ ಶಿಲ್ಕನ್ನು ಬರೆಯತಕ್ಕದ್ದು, ತಿಂಗಳ ಕೊನೆಯಗೆ ತಿಂಗಳ ಕೊನೆಯ ದಿನದ ವ್ಯವಹಾರವು ಪೂರ್ತಿಗೊಂಡ ತರುವಾಯ ಪ್ರತಿದಿನದ ಕೊನೆಯಲ್ಲಿ ಪೂರ್ಣಗೊಳಿಸುವಂತೆಯೇ ನಗದು ಪುಸ್ತಕ ಪೂರ್ಣಗೊಳಿಸತಕ್ಕದ್ದು ಮತ್ತು ನಗದು ಶಿಲ್ಕುಗಳಿಗನುಗುಣವಾಗಿ ವಿವರವಾಗಿ ಬಾಬ್ತುಗಳ ವಿವರವನ್ನು ಕೊಡತಕ್ಕದ್ದು ಎಂದು ತಿಳಿಸಿದೆ.<br>ಅದೇ ರೀತಿ ಆರ್ಥಿಕ ವರ್ಷದ ಕೊನೆಯ ದಿನಾಂಕದಂದು (31–03–2020)ಕ್ಕೆ ಲೆಕ್ಕ ಸಮನ್ವಯ (Bank Reconcilation Statement) ಮಾಡಿ ನಗದು ಪುಸ್ತಕಕ್ಕೆ ಮತ್ತು ಬ್ಯಾಂಕ್ ಪಾಸ್‌ಬುಕ್‌ಗೆ ಜಮೆ ಹಾಗೂ ಖರ್ಚು ಆಗದೇ ಇರುವ ಚೆಕ್‌ಗಳ ಸಂಖ್ಯೆ ನಗದು ಪುಸ್ತಕದಲ್ಲಿ ನಮೂದಿಸಬೇಕು.<br>ನಗದು ಪುಸ್ತಕವನ್ನು ಈ ಮೇಲೆ ತಿಳಿಸಿದ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದದ ಪ್ರಕಾರ ನಿರ್ವಹಿಸದೇ ಇರುವದರಿಂದ ನಿಯಮ ಉಲ್ಲಂಘನೆಯಾಗಿರುತ್ತದೆ.<br>ಆದರೆ ಶಂಭಾ ಜೋಷಿ ಅಧ್ಯಯನ ಪೀಠ ವಿಭಾಗದವರು ಬ್ಯಾಂಕ್ ಆಫ್ ಇಂಡಿಯಾ ಕಮಲಾಪುರ ಶಾಖೆಯಲ್ಲಿ ಉಳಿತಾಯ ಖಾತೆ ಸಂಖ್ಯೆ:842210100008690 ಹೊಂದಿದ್ದು ಸದರಿ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ.<br>ಪ್ರಯುಕ್ತ ಮೇಲೆ ತಿಳಿಸಿದ ಕೆ.ಎಫ್.ಸಿ ಅನುಚ್ಛೇದ 331ರ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸುವಂತೆ **ವಿಚಾರಣೆ ಪತ್ರ ಸಂಖ್ಯೆ:34 ದಿನಾಂಕ: 15–11–2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ. ಅಲ್ಲಿಯವರೆಗೆ ಬ್ಯಾಂಕ್ ಸ್ಟೇಟ್‌ಮೆಂಟಿನ ಅನ್ವಯ 2019–20ನೇ ಸಾಲಿನಲ್ಲಿ ಪಾವತಿಯಾದ ಮೊತ್ತ **ರೂ.97,500/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಶಂಭಾ ಜೋಷಿ ಅಧ್ಯಯನ ಪೀಠದಲ್ಲಿ ನಗದು ಪುಸ್ತಕವನ್ನು ನಿರ್ವಹಿಸಲಾಗಿದೆ. ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಹಾಜರುಪಡಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

**58**

**ಗ್ರಂಥಾಲಯ ವಿಭಾಗದ ರಸೀದಿ ಪುಸ್ತಕಗಳ ನಿರ್ವಹಣೆಯ ಕುರಿತು.**

ಗ್ರಂಥಾಲಯ ವಿಭಾಗದಲ್ಲಿ 2019–20ನೇ ಸಾಲಿನಲ್ಲಿ ರಸೀದಿ ಪುಸ್ತಕಗಳನ್ನು ಉಪಯೋಗಿಸಿದ್ದು, ಲೆಕ್ಕಪರಿಶೋಧನೆಗೆ ಸಲ್ಲಿಸಲಾದ ರಸೀದಿ ಪುಸ್ತಕಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ರಸೀದಿ ಪುಸ್ತಕ ಸಂಖ್ಯೆ | ರಸೀದಿಗಳ ಸಂಖ್ಯೆ | ಉಪಯೋಗಿಸಿದ ರಸೀದಿಗಳು | ಉಪಯೋಗಿಸದೇ ಇರುವ ರಸೀದಿಗಳು | ಷರಾ |
|---|---|---|---|---|---|
| 1 | 40 | 8370–8400 | 31 | – | – |
| 2 | 41 | 8401–8600 | 200 | – | ರಸೀದಿ ಸಂಖ್ಯೆ 8430 ದಿನಾಂಕ: 22–04–2019ಗೆ ಮೊತ್ತ 20/ ರದ್ದು ಪಡಿಸಿರುತ್ತಾರೆ. |
| 3 | 42 | 8601–8800 | 200 | – | – |
| 4 | 43 | 8801–9000 | 200 | – | – |
| 5 | 44 | 9001–9200 | 200 | – | – |
| 6 | 45 | 9201–9276 | 76 | – | – |

ಸದರಿ ರಸೀದಿ ಪುಸ್ತಕಗಳ ನಿರ್ವಹಣೆಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.

01. ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳಿಂದ ಪಡೆಯಲಾಗುತ್ತಿರುವ ವಿವಿಧ ರೀತಿಯ ಶುಲ್ಕಗಳನ್ನು ನಗದು ರೂಪದಲ್ಲಿ ವಿದ್ಯಾರ್ಥಿಗಳಿಂದ ಪಡೆದು ಗ್ರಂಥಾಲಯದ ರಸೀದಿಯನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಂದ ಪಡೆಯಲಾದ ಹಣವನ್ನು Remittance Registerನಲ್ಲಿ ಗ್ರಂಥಾಲಯ ರಸೀದಿ ಸಂಖ್ಯೆ, ದಿನಾಂಕ, ಮೊತ್ತ ಇತ್ಯಾದಿಗಳನ್ನು ನಮೂದಿಸಿ ಹಣಕಾಸು ವಿಭಾಗಕ್ಕೆ ಸಲ್ಲಿಸಲಾಗುತ್ತಿದೆ. ಸದರಿ Remittance Registerನಲ್ಲಿ ಪ್ರತಿ ತಿಂಗಳ ಅಂತ್ಯದಲ್ಲಿ ಹಾಗೂ ವರ್ಷದ ಅಂತ್ಯದಲ್ಲಿ ಸ್ವೀಕರಿಸಲಾದ ಹಣ ಹಾಗೂ ಹಣಕಾಸು ವಿಭಾಗಕ್ಕೆ Remitt ಮಾಡಲಾದ ವಿವರದ ಘೋಷ್ವಾರೆಯನ್ನು ನಮೂದಿಸಿರುವುದಿಲ್ಲ.
02. ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇದ 6 (ಟಿಪ್ಪಣಿ6)ರ ಪ್ರಕಾರ ಅವಶ್ಯಕವಾದ ಮುದ್ರಿತ ರಸೀದಿ ಪುಸ್ತಕಗಳನ್ನು (ಯಂತ್ರಗಳ ಸಹಾಯದಿಂದ ಸಂಖ್ಯೆ ಹಾಕಿದ) ಪ್ರತಿಯೊಬ್ಬ ಇಲಾಖೆಯ

ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.

| | | | |
|---|---|---|---|
| | ಮುಖ್ಯಾಧಿಕಾರಿಯೂ ಅಥವಾ ನಿಯಂತ್ರಣಾಧಿಕಾರಿಯು ಪಡೆದುಕೊಳ್ಳಬೇಕು ಮತ್ತು ತನ್ನ ಎಲ್ಲಾ ಅಧೀನಾಧಿಕಾರಿಗಳಿಗೆ ಅವುಗಳನ್ನು ಹಂಚಬೇಕು, ತಾನು ಸ್ವೀಕರಿಸಿದ ಮತ್ತು ಪ್ರತಿಯೊಂದು ಅಧಿಕಾರಿಗಳಿಗೆ ಹಂಚಿತ ಪುಸ್ತಕಗಳ ಸಂಖ್ಯೆಯನ್ನು (ಪ್ರತಿಯೊಂದರಲ್ಲಿ ಪತ್ರಗಳ ಸಂಖ್ಯೆಯನ್ನು) ತೋರಿಸುವ ಅವುಗಳ ಸ್ಟಾಕು (ದಾಸ್ತಾನು) ಲೆಕ್ಕವನ್ನು ಇಟ್ಟಿರಬೇಕು.<br>ರಸೀದಿ ಪುಸ್ತಕಗಳನ್ನು ಮುದ್ರಣ ಮಾಡಿದ್ದಲ್ಲಿ ಅಥವಾ ಸರ್ಕಾರಿ ಮುದ್ರಣಾಲಯದಿಂದ ರಸೀದಿ ಪುಸ್ತಕಗಳನ್ನು ಪಡೆದಾಗ ರಸೀದಿ ಪುಸ್ತಕಗಳನ್ನು ಸ್ವೀಕೃತಿ ಹಾಗೂ ವಿತರಣೆ ರಿಜಿಸ್ಟರನ್ನು ನಿರ್ವಹಿಸಬೇಕಾಗಿರುತ್ತದೆ.<br>ಆದರೆ ಗ್ರಂಥಾಲಯ ವಿಭಾಗದಲ್ಲಿ ಸದರಿ ರಿಜಿಸ್ಟರಗಳ Stockand Issue ರಜಿಸ್ಟರ್ ಮಾಡಿರುವುದಿಲ್ಲ, ಇದರಿಂದ ಹಣದುರುಪಯೋಗವಾಗುವ ಸಾಧ್ಯತೆಗಳಿರುತ್ತವೆ. ಮೇಲೆ ವಿವರಿಸಿದಂತೆ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಕೆ.ಎಫ್.ಸಿ. ಅನುಚ್ಛೇದಗಳಂತೆ ಕ್ರಮವಹಿಸಲು ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 62 ದಿನಾಂಕ: 08-12-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ರಸೀದಿ ಪುಸ್ತಕಗಳ Stock and Issue ರಿಜಿಸ್ಟರ್‌ಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುವುದು ಹಾಗೂ ಸದರಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಕೆ.ಎಫ್.ಸಿ. ಅನುಚ್ಛೇದಗಳಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಈವರೆಗೂ ಕೂಡ ಲೆಕ್ಕಪರಿಶೋಧನೆಯಲ್ಲಿ ತಿಳಿಸಿರುವ ರಿಜಿಸ್ಟರ್‌ಗಳು ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರಿಸಿದೆ. | | |
| **59** | **ಗ್ರಂಥಾಲಯದ ಸಾಫ್ಟವೇರ್‌ನಲ್ಲಿ ಪುಸ್ತಕಗಳನ್ನು ದಾಖಲಿಸಿದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವ ಬಗ್ಗೆ.**<br>ಅಕ್ಷರ ಗ್ರಂಥಾಲಯದಲ್ಲಿ NewGenLib. ಸಾಫ್ಟವೇರನ್ನು ಪುಸ್ತಕಗಳನ್ನು, ಜರ್ನಲ್ಸ್‌ಗಳನ್ನು, Thesisಗಳನ್ನು ಹಾಗೂ ಗೌರವ ಪ್ರತಿಗಳನ್ನು ದಾಖಲಿಸಲು ಉಪಯೋಗಿಸುತ್ತಿರುವ ಬಗ್ಗೆ ತಿಳಿದು ಬಂದಿರುತ್ತದೆ. 2019-20ನೇ ಸಾಲಿನಲ್ಲಿ ಖರೀದಿ ಮಾಡಿರುವ ಪುಸ್ತಕಗಳ ಬಗ್ಗೆ ಹಾಗೂ ಪಡೆಯಲಾದ ಪುಸ್ತಕಗಳಿಗೆ ಸಂಬಂಧಿಸಿದಂತೆ Purchase Accession Register ಹಾಗೂ ಸಾರ್ವಜನಿಕ ಗ್ರಂಥಾಲಯದಿಂದ ಸ್ವೀಕೃತಗೊಂಡ ಪುಸ್ತಕಗಳಿಗೆ ಸಂಬಂಧಿಸಿದಂತೆ ಸಿರಿಗನ್ನಡ Accession Register ಅನ್ನು ನಿರ್ವಹಣೆ ಮಾಡಿರುತ್ತಾರೆ. ಸದರಿ ರಿಜಿಸ್ಟರ್‌ಗಳನ್ನು ಪರಿಶೀಲಿಸಿದಾಗ ರಿಜಿಸ್ಟರನಲ್ಲಿ Manual ಆಗಿ ಲೆಕ್ಕಕ್ಕೆ ತೆಗೆದುಕೊಂಡ ಪುಸ್ತಕಗಳನ್ನು ಸಾಫ್ಟವೇರನಲ್ಲಿ ದಾಖಲಿಸಲಾಗಿದೆಯೇ ಎನ್ನುವ ಬಗ್ಗೆ ಖಾತರಿಪಡಿಸಿಕೊಳ್ಳಲು ಹಾಗೂ ಸದರಿ ಸಾಫ್ಟವೇರ್ ಉಪಯುಕ್ತವಾಗುತ್ತಿರುವ ಬಗ್ಗೆ ಲೆಕ್ಕಪರಿಶೋಧನೆ ಕೈಗೊಳ್ಳಲಾಯಿತು. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | ಆದರೆ ಸಾಫ್ಟವೇರ್ ಅಳವಡಿಸಿದ Computer ಗೆ UPS ಇರುವುದಿಲ್ಲವೆಂದು ಸಾಫ್ಟವೇರನಲ್ಲಿ ಪುಸ್ತಕಗಳನ್ನು ದಾಖಲಿಸಿದ ಮಾಹಿತಿಯನ್ನು ಲೆಕ್ಕಪರಿಶೋಧನಾ ತಂಡಕ್ಕೆ ಕಂಪ್ಯೂಟರ್‌ನಲ್ಲಿ ಕಾಣಪಡಿಸಿರುವುದಿಲ್ಲ.<br>ಇದರಿಂದ ಗ್ರಂಥಾಲಯದಲ್ಲಿರುವ ಎಲ್ಲಾ ಪುಸ್ತಕಗಳನ್ನು ಸಾಫ್ಟವೇರನಲ್ಲಿ ದಾಖಲಿಸಿರುವ ಬಗ್ಗೆ ಹಾಗೂ ವಾರ್ಷಿಕವಾಗಿ ಸದರಿ ಸಾಫ್ಟ್‌ವೇರ್‌ನ ನಿರ್ವಹಣೆಗೆ ಮಾಡಲಾಗುತ್ತಿರುವ ವೆಚ್ಚವು ಫಲಕಾರಿಯಾಗಿರುವ ಬಗ್ಗೆ ತಿಳಿದು ಬಂದಿರುವುದಿಲ್ಲ.<br>ಕಾರಣ ಗ್ರಂಥಾಲಯ ವಿಭಾಗದವರು ಸದರಿ ಸಾಫ್ಟ್‌ವೇರ್‌ನ್ನು ಬಳಸಿಕೊಳ್ಳುವಲ್ಲಿ ವಿಫಲಗೊಂಡಿರುವ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದೆ. **ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 63 ದಿನಾಂಕ: 09–12–2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಸದರಿ ತಪಾಸಣಾ ದಿನದಂದು ವಿದ್ಯುಚ್ಛಕ್ತಿ ಕೊರತೆ ಉಂಟಾಯಿತು ಕಂಪ್ಯೂಟರ್‌ಗಳಿಗೆ ಯು.ಪಿ.ಎಸ್. ಇರದ ಕಾರಣ ಕಂಪ್ಯೂಟರ್‌ಗಳನ್ನು ಕಾರ್ಯನಿರ್ವಹಿಸುವಂತೆ ಮಾಡಲು ಸಾಧ್ಯವಾಗಲಿಲ್ಲ ಹಾಗೂ ಗ್ರಂಥಾಲಯಕ್ಕೆ ಬರುವ ಪುಸ್ತಕಗಳನ್ನು ಸೇರ್ಪಡೆ ವರ್ಗೀಕರಣ ಮತ್ತು ಗಣಕೀಕರಣಗಳು ನಿರಂತರವಾಗಿ ದಿನನಿತ್ಯ ನಡೆಸಲಾಗುತ್ತದೆ. ಗ್ರಂಥಾಲಯ ತಾಂತ್ರಿಕ ಸಿಬ್ಬಂದಿಗಳ ಕೊರತೆಯಿಂದ ದಿನನಿತ್ಯದ ಕೆಲಸಗಳಲ್ಲಿ ಹಿನ್ನಡೆಯಾಗಿದೆ. ಗ್ರಂಥಾಲಯ ಬಹುಪಾಲು ಗ್ರಂಥಗಳನ್ನು ಗಣಕೀಕರಣ ನೆರವೇರಿಸಲಾಗುತ್ತದೆ ಎಂದು ತಿಳಿಸಿದ್ದಾರೆ.<br>ವಿಶ್ವವಿದ್ಯಾಲಯದವರು ನೀಡಲಾದ ಅನುಪಾಲನೆಯಲ್ಲಿ ಗ್ರಂಥಾಲಯದಲ್ಲಿ ಬಹುಪಾಲು ಗ್ರಂಥಗಳನ್ನು ಗಣಕೀಕರಣ ಮಾಡಲಾಗಿದೆ ಎಂದು ತಿಳಿಸಿದ್ದು, ಅಂದರೆ ಸಂಪೂರ್ಣವಾಗಿ ಗಣಕೀಕರಣವಾಗದೇ ಇರುವ ಬಗ್ಗೆ ಇದರಿಂದ ತಿಳಿದುಬರುತ್ತದೆ. ಆದ್ದರಿಂದ ಗ್ರಂಥಾಲಯದ ಎಲ್ಲಾ ಗ್ರಂಥಗಳನ್ನು/ಪುಸ್ತಕಗಳನ್ನು ಸಾಫ್ಟ್‌ವೇರ್‌ನಲ್ಲಿ ದಾಖಲಿಸಲು ಸೂಚಿಸುತ್ತಾ ಸದರಿ ಕಂಡಿಕೆಯನ್ನು ಮುಂದುವರೆಸಿದೆ. | | |
| **60** | **ಪ್ರತ್ಯೇಕವಾಗಿ Accession Register ಗಳನ್ನು ನಿರ್ವಹಿಸುವ ಬಗ್ಗೆ.**<br>ಅಕ್ಷರ ಗ್ರಂಥಾಲಯ ವಿಭಾಗದಲ್ಲಿ 2019–20ನೇ ಸಾಲಿನಲ್ಲಿ ಖರೀದಿಮಾಡಿರುವ ಪುಸ್ತಕಗಳ ಬಗ್ಗೆ ಹಾಗೂ ಪಡೆಯಲಾದ ಪುಸ್ತಕಗಳಿಗೆ ಸಂಬಂಧಿಸಿದಂತೆ Accession Registerಗಳನ್ನು ಪರೀಶಿಲಿಸಿದಾಗ ಈ ಕೆಳಕಂಡ 2 Accession Registerಗಳು ನಿರ್ವಸಿರುವ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ತಿಳಿದು ಬಂದಿರುತ್ತದೆ. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | 1. Purchase Accession Register.<br>2. Sirigannada Accession Register<br><br>ಕ್ರಮಸಂಖ್ಯೆ: 1ರ Purchase Accession Registerನಲ್ಲಿ ಹೊಸದಾಗಿ ಖರೀದಿಸಲಾದ ಪುಸ್ತಕಗಳನ್ನು Journalsಗಳನ್ನು ಹಾಗೂ ಗೌರವ ಪ್ರತಿಗಳ ಪುಸ್ತಕಗಳನ್ನು ಒಂದೇ Accession Registerನಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುತ್ತದೆ. ಅದರಂತೆ ಕ್ರಮಸಂಖ್ಯೆ 2ರ ಸಿರಿಗನ್ನಡ Accession Registerನಲ್ಲಿ ಸಾರ್ವಜನಿಕ ಗ್ರಂಥಾಲಯದಿಂದ ಸ್ವೀಕೃತಗೊಂಡ ಪುಸ್ತಕಗಳು ಹಾಗೂ ಖರೀದಿಸಿದ ಪುಸ್ತಕಗಳಲ್ಲಿ ಪ್ರತಿ ಪುಸ್ತಕದ ಒಂದು ಪ್ರತಿಯ ಪುಸ್ತಕವನ್ನು ಸಿರಿಗನ್ನಡ Accession Registerನಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುತ್ತದೆ.<br>ಇದರಿಂದ ಖರೀದಿಸಲಾದ ಪುಸ್ತಕಗಳ ಸಂಖ್ಯೆ, Journalಗಳ ಸಂಖ್ಯೆ, ಗೌರವ ಪ್ರತಿಗಳ ಸಂಖ್ಯೆ ಹಾಗೂ Thesisಗಳ ಸಂಖ್ಯೆಯ ನಿಖರವಾದ ಮಾಹಿತಿಯು ತಿಳಿದು ಬರುವುದಿಲ್ಲ. ಪ್ರಯುಕ್ತ ಈ ಕೆಳಕಂಡಂತೆ ಪ್ರತ್ಯೇಕವಾಗಿ Accession Registerಗಳನ್ನು ನಿರ್ವಹಿಸಲು ಸೂಚಿಸಿದೆ.<br>1) Purchase Accession Register.<br>2) Sirigannada Accession Register.<br>3) Journals Accession Register.<br>4) ಗೌರವ ಪ್ರತಿಗಳ Accession Register.<br><br>**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 64 ದಿನಾಂಕ: 09-12-2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಪ್ರತ್ಯೇಕ Accession Register ಗಳನ್ನು ನಿರ್ವಹಿಸಲು ಕ್ರಮವಹಿಸಲಾಗುವುದು. ಸದರಿ ವಿಷಯವನ್ನು ಗ್ರಂಥಾಲಯ ಸಲಹಾ ಸಮಿತಿಯಲ್ಲಿ ಮಂಡಿಸಿ ಮುಂದಿನ ಕ್ರಮ ವಹಿಸಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಈವರೆಗೂ ಕೂಡ ಯಾವುದೇ ಸೂಕ್ತ ಕ್ರಮ ಕೈಗೊಳ್ಳದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರಿಸಿದೆ. | | |
| **61** | **ಗ್ರಂಥಾಲಯದಲ್ಲಿ ನಗದು ಪುಸ್ತಕವನ್ನು ನಿಯಮಾನುಸಾರ ನಿರ್ವಹಿಸದೇ ಇರುವ ಬಗ್ಗೆ.**<br>ಗ್ರಂಥಾಲಯ ವಿಭಾಗದಲ್ಲಿ ಮುಖ್ಯ ಗ್ರಂಥಾಪಾಲಕರ ಹೆಸರಿನಲ್ಲಿ ಬ್ಯಾಂಕ್ ಆಫ್ ಇಂಡಿಯಾದ ಖಾತೆ ಸಂಖ್ಯೆ:842210100008357ರ ನಗದು ಪುಸ್ತಕ ಪರಿಶೀಲಿಸಿದಾಗ ನಿಯಮನುಸಾರ ನಿರ್ವಹಿಸದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| | | | |
|---|---|---|---|
| | ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 331ರ ಪ್ರಕಾರ ನಗದು ಪುಸ್ತಕವನ್ನು ಪ್ರತಿನಿತ್ಯವೂ ಬರೆಯತಕ್ಕದ್ದು, ಪ್ರತಿಯೊಂದು ಜಮೆ ಅಥವಾ ವೆಚ್ಚಕ್ಕೆ ಸಂಬಂಧಿಸಿದ ನಮೂದನ್ನು ವ್ಯವಹಾರಕ್ಕೆ ತಕ್ಕಂತೆ ಏಕಕಾಲದಲ್ಲಿ ಮಾಡತಕ್ಕದ್ದು, ಪ್ರತಿ ದಿನವೂ ಪ್ರಾರಂಭದ ಶಿಲ್ಕನು ಜಮೆಗಳ ಸಾಲಿನಲ್ಲಿ ತಂದು ಆ ದಿನದ ವ್ಯವಹಾರ ಕಾಲಂದಲ್ಲಿ ಸ್ವೀಕರಿಸಿಕೊಂಡ ಮೊತ್ತಗಳನ್ನು ಜಮೆಗಳ ಸಾಲಿನಲ್ಲಿ ಅವುಗಳ ಸ್ವೀಕೃತಿಗಳ ಅನುಕ್ರಮದಲ್ಲಿ ಬರೆಯತಕ್ಕದ್ದು ಹಾಗೆಯೇ ಪ್ರತಿ ಬಾಬ್ತಿನ ಬಗ್ಗೆ ಮಾಡಿದ ವೆಚ್ಚ ಅವುಗಳ ಎದುರಿಗೆ ಸಂವಾದಿ ವೋಚರ್ ನಂಬರ್‌ನ್ನು ಸೂಚಿಸಿ ವೆಚ್ಚದ ಸಾಲಿನಲ್ಲಿ ಬರೆಯತಕ್ಕದ್ದು, ಪ್ರತಿ ದಿನವೂ ನಗದು ಪುಸ್ತಕವನ್ನು ಪೂರ್ಣಗೊಳಿಸಿ ಶಿಲ್ಕನ್ನು ಬರೆಯತಕ್ಕದ್ದು, ತಿಂಗಳ ಕೊನೆಯಗೆ ತಿಂಗಳ ಕೊನೆಯ ದಿನದ ವ್ಯವಹಾರವು ಪೂರ್ತಿಗೊಂಡ ತರುವಾಯ ಪ್ರತಿದಿನದ ಕೊನೆಯಲ್ಲಿ ಪೂರ್ಣಗೊಳಿಸುವಂತೆಯೇ ನಗದು ಪುಸ್ತಕ ಪೂರ್ಣಗೊಳಿಸತಕ್ಕದ್ದು ಮತ್ತು ನಗದು ಶಿಲ್ಕುಗಳಿಗನುಗುಣವಾಗಿ ವಿವರವಾಗಿ ಬಾಬುಗಳ ವಿವರವನ್ನು ಕೊಡತಕ್ಕದ್ದು ಎಂದು ತಿಳಿಸಿದೆ.<br>ಅದೇ ರೀತಿ ಆರ್ಥಿಕ ವರ್ಷದ ಕೊನೆಯ ದಿನಾಂಕದಂದು (31–03–2020)ಕ್ಕೆ ಲೆಕ್ಕ ಸಮನ್ವಯ (Bank Reconcilation Statement) ಮಾಡಿ ನಗದು ಪುಸ್ತಕಕ್ಕೆ ಮತ್ತು ಬ್ಯಾಂಕ್ ಪಾಸ್‌ಬುಕ್‌ಗೆ ಜಮೆ ಹಾಗೂ ಖರ್ಚು ಆಗದೇ ಇರುವ ಚೆಕ್‌ಗಳ ಸಂಖ್ಯೆ ನಗದು ಪುಸ್ತಕದಲ್ಲಿ ನಮೂದಿಸಬೇಕು.<br>ಸದರಿ ಗ್ರಂಥಾಲಯದಲ್ಲಿ ನಗದು ಪುಸ್ತಕವನ್ನು ಈ ಮೇಲೆ ತಿಳಿಸಿದ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದದ ಪ್ರಕಾರ ನಿರ್ವಹಿಸದೇ ಇರುವದರಿಂದ ನಿಯಮ ಉಲ್ಲಂಘನೆಯಾಗಿರುತ್ತದೆ. ಆದಕಾರಣ ನಗದು ಪುಸ್ತಕವನ್ನು ಈ ಮೇಲೆ ತಿಳಿಸಿದ ಪ್ರಕಾರ ನಿರ್ವಹಿಸಲು ಸೂಚಿಸಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 65 ದಿನಾಂಕ: 09–12–2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಗ್ರಂಥಾಲಯದಲ್ಲಿ ನಗದು ಮತ್ತು ವೆಚ್ಚದ ಪುಸ್ತಕಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದೆ ಹಾಗೂ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ ಪ್ರಕಾರ ಕ್ರಮ ವಹಿಸಿ ನಿರ್ವಹಿಸಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಕೆ.ಎಫ್.ಸಿ ಅನುಚ್ಛೇದದ ಪ್ರಕಾರ ನಗದು ಪುಸ್ತಕ ಬರೆದು ದಾಖಲೆಗಳನ್ನು ಸಲ್ಲಿಸದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. | | |
| **62** | **2019–20ನೇ ಸಾಲಿನಲ್ಲಿ ಗ್ರಂಥಾಲಯ ವಿಭಾಗದಲ್ಲಿ ಖರೀದಿಸಿದ ಪುಸ್ತಕಗಳನ್ನು ಭೌತಿಕ ಪರಿಶೀಲನೆ ಮಾಡದಿರುವ ಕುರಿತು.**<br>ಗ್ರಂಥಾಲಯ ವಿಭಾಗದಲ್ಲಿ 2019–20ನೇ ಸಾಲಿನ ಪುಸ್ತಕಗಳನ್ನು ಖರೀದಿಸಿದ್ದು, ಈ ಕೆಳಗಿನಂತೆ ವಿವರಿಸಿದೆ. | ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

| Sl No. | Accession Register | Accession Number | | Total No. of Books |
|---|---|---|---|---|
| 1 | Purchase Accession Register | 138291-141330 | OB | 1,32,290<br>3,040 |
| 2 | Siri gannada (ಸಿರಿಗನ್ನಡ) | 5079031-5085880 | OB | 79,030<br>6,850 |
| | Total | 2019-20 | OB | 2,17,320<br>9,890 |
| | | **Grand Total** | | **2,27,210** |

ಮೇಲೆ ವಿವರಿಸಿದಂತೆ 2018–19ರ ಅಂತ್ಯದವರೆಗೆ ಖರೀದಿಸಲಾದ ಪುಸ್ತಕಗಳ ಸಂಖ್ಯೆ 2,17,320/–ಗಳಿದ್ದು, 2019–20ರಲ್ಲಿ ರೂ.9,890/–ಗಳ ಪುಸ್ತಕಗಳನ್ನು ಖರೀದಿಸಲಾಗಿದ್ದು/ ಪಡೆಯಲಾಗಿದ್ದು, ಒಟ್ಟು ರೂ.2,27,210/– ಪುಸ್ತಕಗಳನ್ನು ಹೊಂದಿರುವ ಬಗ್ಗೆ ಮುಖ್ಯ ಗ್ರಂಥಪಾಲಕರು ನೀಡಿರುವ Statement ನಿಂದ ತಿಳಿದು ಬಂದಿರುತ್ತದೆ.

ಆದರೆ ಇಲ್ಲಿಯವರೆಗೆ ಒಟ್ಟಾರೆ ಪುಸ್ತಕಗಳ ಭೌತಿಕ ಪರಿಶೀಲನೆಯನ್ನು ಮಾಡಿ ಪ್ರಮಾಣೀಕರಿಸಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಸಮಿತಿಯಿಂದ Store Manual 33ರ ಪ್ರಕಾರ Physical Verification of Stock ಮಾಡಿಸಿ ಪ್ರಮಾಣೀಕರಿಸಲು ಸೂಚಿಸಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 66 ದಿನಾಂಕ:09–12–2021 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಗ್ರಂಥಾಲಯದ ವಿಭಾಗದಲ್ಲಿ ಖರೀದಿಸಿರುವ ಪುಸ್ತಕಗಳನ್ನು ಭೌತಿಕ ಪರಿಶೀಲನೆಯು ನಡೆದಿರುವುದಿಲ್ಲ. ಗ್ರಂಥಾಲಯ ಸಲಹಾ ಸಮಿತಿಯಲ್ಲಿ ಸದರಿ ವಿಷಯವನ್ನು ಮಂಡಿಸಿ ಅದರನ್ವಯ ಮುಂದಿನ ಕ್ರಮವಹಿಸಲಾಗುವುದು ಎಂದು ತಿಳಿಸಿದ್ದಾರೆ. ಅದರೆ ಈವರೆಗೂ ಕೂಡ ಭೌತಿಕ ಪರಿಶೀಲನೆ ಮಾಡದೇ ಇರುವುದರಿಂದ ಹಾಗೂ ಸಲಹಾ ಸಮಿತಿಯಿಂದ ದೃಢೀಕರಣ ಪಡೆಯದೇ ಇರುವ ಪ್ರಯುಕ್ತ ಸದರಿ ಕಂಡಿಕೆಯನ್ನು ಮುಂದುವರಿಸಿದೆ.

| | | | |
|---|---|---|---|
| 63 | **ಗ್ರಂಥಾಲಯದ ಸಲಹಾ ಸಮಿತಿಯ ಅನುಮೋದನೆ ಪಡೆಯದೆ ಪುಸ್ತಕಗಳನ್ನು ಖರೀದಿಸಿರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿಯ 2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದನ್ವಯ ಲೆಕ್ಕ ಶೀರ್ಷಿಕೆ 2350–312 ಗ್ರಂಥಾಲಯ ಪುಸ್ತಕಗಳ ಖರೀದಿ ಅಡಿಯಲ್ಲಿ ರೂ.1,72,170/–ಗಳ ಪುಸ್ತಕಗಳನ್ನು ಖರೀದಿಸಿ ವೆಚ್ಚ ಮಾಡಲಾಗಿರುತ್ತದೆ. ಸದರಿ ವೆಚ್ಚವನ್ನು ಮಾಡುವ ಪೂರ್ವದಲ್ಲಿ ಗ್ರಂಥಾಲಯದ ಸಲಹಾ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ.<br>ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ: 72 ದಿನಾಂಕ: 13–12–2021 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ 2019–20ನೇ ಸಾಲಿನಲ್ಲಿ ಕೋವಿಡ್ ಸಂಬಂಧವಾಗಿ ಸಲಹಾಸಮಿತಿ ಸಭೆಗಳು ನಡೆದಿಲ್ಲವಾದ್ದರಿಂದ ಮುಂದಿನ ಸಲಹಾ ಸಮಿತಿಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಸದರಿ ವಿಭಾಗವು ಸಲಹಾ ಸಮಿತಿಯಿಂದ ಘಟನೋತ್ತರ ಅನುಮೋದನೆ ಪಡೆಯದೆ ರೂ.1,72,170/– ಪಾವತಿ ಮಾಡಿರುವುದರಿಂದ ಕಂಡಿಕೆಯನ್ನು ಮುಂದುವರಿಸಿದೆ. ಪಾವತಿಯಾದ ಮೊತ್ತ **ರೂ.1,72,170/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಆಯಾ ಪುಸ್ತಕ ಪ್ರಕಾಶಕರಿಂದ ಪ್ರಕಟಗೊಂಡ ಪುಸ್ತಕಗಳನ್ನು ನೇರವಾಗಿ ಖರೀದಿಸಿರುವುದರಿಂದ ದರಪಟ್ಟಿ ಕರೆಯುವ ನಿಯಮ ಅನ್ವಯಿಸುವುದಿಲ್ಲ. ಹಾಗೆ ಈ ಪಾವತಿಯ ವಿವರವನ್ನು ಮುಂದಿನ ಗ್ರಂಥಾಲಯ ಸಲಹಾ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುವುದು. ಆದ್ದರಿಂದ ಕಂಡಿಕೆಯನ್ನು ಕೈಬಿಡಲು ಮಾನ್ಯರಲ್ಲಿ ಕೋರಲಾಗಿದೆ. | |
| 64 | **ವಿವಿಧ ವಿಭಾಗಗಳ ವೋಚರ್/ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಬಗ್ಗೆ.**<br>ಕನ್ನಡ ವಿಶ್ವವಿದ್ಯಾಲಯ ಹಂಪಿ ಅಧೀನದಲ್ಲಿ ಬರುವ ಕೆಲವು ವಿಭಾಗಗಳಲ್ಲಿ 2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದನ್ವಯ ವೆಚ್ಚ ಮೊತ್ತ ರೂ.**25,77,106**=00 ಸಂಬಂಧಿಸಿದಂತೆ ವೋಚರಗಳು, ರಿಜಿಸ್ಟರಗಳು ಹಾಗೂ ಇತರ ಎಲ್ಲಾ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. (ವಿಭಾಗವಾರು **ವಿವರ ಅನುಬಂಧ–29**ರಲ್ಲಿ ವಿವರಿಸಿದೆ)<br>**ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:16 ದಿನಾಂಕ:26–10–2021** ನೀಡಲಾಗಿದೆ. ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ. ಸಂಬಂಧಿಸಿದವರ ವಿರುದ್ಧ ಶಿಸ್ತುಕ್ರಮ ಜರುಗಿಸಿ ವರದಿಯನ್ನು ಲೆಕ್ಕಪರಿಶೋಧನೆಗೆ ನೀಡಲು ಸೂಚಿಸಿದೆ. ಸದರಿ ಒಟ್ಟು ಮೊತ್ತ **ರೂ.25,77,106/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಒಟ್ಟು ಮೊತ್ತ **ರೂ.25,77,106/-ಗಳ** ವೋಚರ್‌ಗಳು ಲಭ್ಯವಿರುತ್ತವೆ, ಮುಂದಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | |

<table>
<tr>
<td>65</td>
<td>

**ಶಿಲ್ಪವನ ಅಭಿವೃದ್ಧಿ ಚಿತ್ರಕಲಾ ವಿಭಾಗದ ಲೆಕ್ಕಪರಿಶೋಧನೆಗೆ 2019–20ನೇ ಸಾಲಿನ ಸ್ವೀಕೃತಿ ದಾಖಲೆಗಳನ್ನು ಒದಗಿಸದೇ ಇರುವ ಕುರಿತು.**

2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದನ್ವಯ ಶಿಲ್ಪವನ ಅಭಿವೃದ್ಧಿ ಚಿತ್ರಕಲಾ ವಿಭಾಗದವರು ಸ್ವೀಕೃತಿ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ವಿವರ ಈ ಕೆಳಗಿನಂತಿದೆ

<table>
<tr><th>ಕ್ರ.ಸಂ.</th><th>ವಿವರ</th><th>ಸ್ವೀಕೃತಿಗಳು</th></tr>
<tr><td>01</td><td>ಶಿಲ್ಪವನ ಅಭಿವೃದ್ಧಿ ಚಿತ್ರಕಲಾ ವಿಭಾಗ</td><td>50,28,458</td></tr>
<tr><td></td><td>ಒಟ್ಟು</td><td>50,28,458</td></tr>
</table>

ಮೇಲೆ ವಿವರಿಸಿದಂತೆ 2019–20ನೇ ಸಾಲಿನಲ್ಲಿ ಒಟ್ಟು ಸ್ವೀಕೃತಿ ರೂ.50,28,458/–ಗಳು ಆಗಿರುತ್ತದೆ. ಆದರೆ ಇವರೆಗೂ ಕೂಡಾ (ಲೆಕ್ಕಪರಿಶೋಧನಾ ಪ್ರಾರಂಭ ದಿನಾಂಕ:16–09–2021 ರಿಂದ 09–11–2021 ರವರೆಗೆ) ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

ಮುಂದುವರೆದು ಸದರಿ ವಿಭಾಗಕ್ಕೆ ದಾಖಲೆಗಳನ್ನು ಲೆಕ್ಕಪರಿಶೋಧನಕ್ಕೆ ಒದಗಿಸಲು ಸೂಚಿಸಿದರೂ ಕೂಡಾ ಇವತ್ತಿನ ದಿನಾಂಕದವರೆಗೂ ಯಾವುದೇ ಮಾಹಿತಿ ಸಲ್ಲಿಸದೇ ಇರುವ ಪ್ರಯುಕ್ತ ಸದರಿ ವಿಭಾಗದ ನಿರ್ದೇಶಕರು ಹಾಗೂ ಸಂಬಂಧಪಟ್ಟ ಸಿಬ್ಬಂದಿಗಳ ವಿರುದ್ದ ಶಿಸ್ತು ಕ್ರಮ ಜರುಗಿಸಿ ಲೆಕ್ಕಪರಿಶೋಧನೆಗೆ ವರದಿ ನೀಡಲು ಸೂಚಿಸಿದೆ.

ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಸಲ್ಲಿಸುವಂತೆ ಈಗಾಗಲೇ ವಿಚಾರಣೆ ಪತ್ರ ಸಂಖ್ಯೆ 16 ದಿನಾಂಕ:26–10–2021 ಮೂಲಕ ಕೇಳಲಾದರೂ ಸಹ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲ. ಅಲ್ಲದೇ 2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿಯು ಸಹ ದಾಖಲೆಗಳನ್ನು ಒದಗಿಸದೇ ಇರುವುದಕ್ಕೆ ಸದರಿ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿನ ಕಂಡಿಕೆ ಸಂಖ್ಯೆ–55 ರಲ್ಲಿ ಈಗಾಗಲೇ ಸರ್ಕಾರದ ಗಮನಕ್ಕೆ ತರಲಾಗಿದೆ. ಆದರೂ ಸಹ ಸದರಿ ವಿಭಾಗದ ಅಧಿಕಾರಿ/ಸಿಬ್ಬಂದಿಗಳು ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸುವಲ್ಲಿ ಕರ್ತವ್ಯದ ಬೇಜವಾಬ್ದಾರಿತನ/ನಿರ್ಲಕ್ಷ್ಯ ತೋರಿಸುತ್ತಿದ್ದು ಕಂಡು ಬಂದಿರುತ್ತದೆ.

ಪ್ರಯುಕ್ತ ಸದರಿ ವಿಭಾಗದ ನಿರ್ದೇಶಕರು ಹಾಗೂ ಸಿಬ್ಬಂದಿಗಳ ವಿರುದ್ದ ಶಿಸ್ತುಕ್ರಮ ಜರುಗಿಸಿ ವರದಿಯನ್ನು ಕೂಡಲೇ ಲೆಕ್ಕಪರಿಶೋಧನೆಗೆ ನೀಡಲು ಸೂಚಿಸಿದೆ. ತಪ್ಪಿದ್ದಲ್ಲಿ ಈ ಕುರಿತು ಉನ್ನತ ಶಿಕ್ಷಣ ಸಚಿವಾಲಯಕ್ಕೆ ಹಾಗೂ ಆರ್ಥಿಕ ಇಲಾಖೆಯ ಗಮನಕ್ಕೆ ತಂದು ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾಗುತ್ತಿರುವ ಅನುದಾನವನ್ನು ತಡೆಹಿಡಿಯುವಂತೆ ಶಿಫಾರಸ್ಸು ಮಾಡಲಾಗುವುದು.ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಪತ್ರ ಸಂಖ್ಯೆ:23 ದಿನಾಂಕ:09–11–2021 ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರ ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ.

</td>
<td>ಆಕ್ಷೇಪಣೆಯಲ್ಲಿ ತಾವು ಸೂಚಿಸಿದಂತೆ ಇನ್ನು ಮುಂದೆ ಕ್ರಮವಹಿಸಲಾಗುವುದು. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.</td>
<td></td>
</tr>
</table>

| | | | |
|---|---|---|---|
| 66 | **ಸಾಮಾನ್ಯ ಅಭಿಪ್ರಾಯ.**<br>1. ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ವಿವಿಧ ಅಧ್ಯಯನ ಪೀಠಗಳ ಮುಖ್ಯಸ್ಥರುಗಳಿಗೆ, ನಿರ್ದೇಶಕರುಗಳಿಗೆ, ವಾರ್ಡನ್‌ಗಳಿಗೆ ಚೆಕ್ ಮೂಲಕ ಹಣ ಬಿಡುಗಡೆ ಮಾಡಲಾಗುತ್ತಿದೆ. ಅವುಗಳಿಗೆ ಸಂಬಂಧಿಸಿದಂತೆ ಹಣ ಸೆಳೆಯುವ ಅಧಿಕಾರಗಳು (Drawing Officer) ನಿಗದಿತ ನಮೂನೆಯಲ್ಲಿ ನಗದು ಪುಸ್ತಕಗಳನ್ನು ನಿರ್ವಹಿಸಿರುವದಿಲ್ಲ.<br>2. ವಿಶ್ವವಿದ್ಯಾಲಯದಲ್ಲಿ ಲೆಕ್ಕಪತ್ರಗಳನ್ನು ಸದ್ಯ ಸಿಂಗಲ್ ಎಂಟ್ರಿ ಸಿಸ್ಟಮ್‌ನಲ್ಲಿ ಮಾಡಲಾಗುತ್ತಿದೆ. ಅವುಗಳನ್ನು ಡಬಲ್ ಎಂಟ್ರಿ ಸಿಸ್ಟಮನಲ್ಲಿ ಅಳವಡಿಸಿ ನಿರ್ವಹಿಸಲು ಸೂಚಿಸಲಾಗಿದೆ. ಇದರಿಂದ ಲೆಕ್ಕಪತ್ರಗಳನ್ನು ಮರುಸಮನ್ವಯ ಮಾಡಲು ಅನುಕೂಲವಾಗುವುದು.<br>3. ಆಕ್ಷೇಪಣೆ ಮತ್ತು ವಸೂಲಾತಿ ಪ್ರಕರಣಗಳ ತೀರುವಳಿಗೆ ಪ್ರಸಕ್ತ ವರ್ಷದಲ್ಲಿಯೂ ಯಾವುದೇ ಗಮನಹರಿಸಿಲ್ಲ.<br>4. ಶಾಸನಬದ್ಧ ಕಟಾವಣೆಗಳಾದ ಆದಾಯತೆರಿಗೆ, ಮಾರಾಟ ತೆರಿಗೆ, ರಾಜಧನ, ಕಾರ್ಮಿಕ ಕಲ್ಯಾಣಸೆಸ್, ಇ.ಪಿ.ಎಫ್, ಇ.ಎಸ್.ಐ, ಮುಂತಾದವುಗಳನ್ನು ಕಡ್ಡಾಯವಾಗಿ ಕಾಮಗಾರಿ/ಖರೀದಿ ಬಿಲ್ಲುಗಳಿಂದ ಕಟ್ಟಾಯಿಸಿ ಪ್ರಚಲಿತ ನಿಯಮಗಳ ಪ್ರಕಾರ ಸಂಬಂಧಿಸಿದ ಇಲಾಖೆಗಳಿಗೆ ತಪ್ಪದೇ ಸಲ್ಲಿಸುವುದು.<br>5. ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರ ವೇತನ ನಿಗದಿಯನ್ನು ಯು.ಜಿ.ಸಿ. ಮತ್ತು ಸರ್ಕಾರದ ನಿಯಮಗಳನ್ನು ಪಾಲಿಸದೇ ಇರುವುದು.<br>ಸಾಕಷ್ಟು ಮೊತ್ತದ ಮುಂಗಡ ಹೊಂದಾಣಿಕೆಗಾಗಿ ಬಾಕಿಯಿದ್ದು, ಕೂಡಲೇ ವಿಶ್ವವಿದ್ಯಾಲಯದವರು ಲೆಕ್ಕಪತ್ರಗಳನ್ನು ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ. | 1. ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ವಿವಿಧ ಅಧ್ಯಯನ ಪೀಠಗಳ ಮುಖ್ಯಸ್ಥರುಗಳಿಗೆ, ನಿರ್ದೇಶಕರುಗಳಿಗೆ, ವಾರ್ಡನ್‌ಗಳಿಗೆ ಪ್ರಸ್ತುತ ಮುಂಗಡ ಪಾವತಿಸುವುದನ್ನು ತಡೆಹಿಡಿಯಲಾಗಿದೆ. ನಿಗದಿತ ನಮೂನೆಯಲ್ಲಿ ನಗದು ಪುಸ್ತಕಗಳನ್ನು ನಿರ್ವಹಿಸಿದ್ದಾರೆ, ಮುಂದಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಲಾಗುವುದು.<br>2. ಡಬಲ್ ಎಂಟ್ರಿ ಸಿಸ್ಟಮನಲ್ಲಿ ಅಳವಡಿಸಿ ನಿರ್ವಹಿಸಲಾಗುತ್ತಿದೆ, ಟ್ಯಾಲಿ ಸಾಫ್ಟ್‌ವೇರ್‌ನಲ್ಲಿ ನಿರ್ವಹಿಸಲಾಗುತ್ತಿದೆ.<br>3. ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ ಪ್ರಸ್ತುತ ಕ್ರಮವಹಿಸಲಾಗುತ್ತಿದೆ.<br>4. ಶಾಸನಬದ್ಧ ಕಟಾವಣೆಗಳಾದ ಆದಾಯತೆರಿಗೆ, ಮಾರಾಟ ತೆರಿಗೆ, ಕಾರ್ಮಿಕ ಕಲ್ಯಾಣ ಸೆಸ್, ಇ.ಪಿ.ಎಫ್, ಇ.ಎಸ್.ಐ, ಮುಂತಾದವುಗಳನ್ನು ಕಡ್ಡಾಯವಾಗಿ ಕಾಮಗಾರಿ/ಖರೀದಿ ಬಿಲ್ಲುಗಳಿಂದ ಕಟಾಯಿಸಿ ಪ್ರಚಲಿತ ನಿಯಮಗಳ ಪ್ರಕಾರ ಸಂಬಂಧಿಸಿದ ಇಲಾಖೆಗಳಿಗೆ ತಪ್ಪದೇ ಸಲ್ಲಿಸಲು ಕ್ರಮಹಿಸಲಾಗುತ್ತಿದೆ.<br>5. ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರ ವೇತನ ನಿಗದಿಯನ್ನು ಯು.ಜಿ.ಸಿ. ಮತ್ತು ಸರ್ಕಾರದ ನಿಯಮಗಳನ್ನು ಪಾಲಿಸಿ ಕ್ರಮಹಿಸಲಾಗಿದೆ.<br>ಮುಂಗಡ ಹೊಂದಾಣಿಕೆಗೆ ಶೀಘ್ರವಾಗಿ ಲೆಕ್ಕಪತ್ರಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ. | |